بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 30–31

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

27 ಜುಲೈ–03 ಆಗಸ್ಟ್ 2023, 27 ವಫಾ–03 ಝುಹೂರ್ 1402 ಹಿಜರಿ ಶಮ್ಸಿ, 08–15 ಮುಹರ್ರಮ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

مَا كَانَ مُحَمَّدٌ اَبَآ اَحَدٍ مِّنْ رِّجَالِكُمْ وَلٰكِنْ رَّسُوْلَ اللّٰهِ وَخَاتَمَ النَّبِيّٖنَ ؕ وَكَانَ اللّٰهُ بِكُلِّ شَیْءٍ عَلِيْمًا


(ಅಲ್‌ಅಹ್‌ಝಾಬ್: 41)

ಅಂದರೆ: ಮುಹಮ್ಮದ್ ನಿಮ್ಮ ಪೈಕಿ ಯಾವನೇ ಪುರುಷನ ಪಿತ ಅಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕರೂ ಪ್ರವಾದಿಗಳ ಮುದ್ರೆಯೂ ಆಗಿದ್ದಾರೆ. ಎಲ್ಲ ವಿಚಾರಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ.

# ಸೀರತುನ್ನಬೀ(ಸಲ್ಲಲ್ಲಾಹು ಅಲೈಹಿವಸಲ್ಲಮ್) ವಿಶೇಶ ಸಂಚಿಕೆ

**ಪ್ರವಾದಿಗಳ ನಾಯಕರಾದ ಹಝ್ರತ್ ಪೈಗಂಬರ್(ಸ) ಮತ್ತು ಅವರ ವಂಶ ಹಾಗೂ ಅವರ ಶಿಷ್ಯ ವರ್ಗಗಳ ಮೇಲೆ ಶಾಂತಿ ಮತ್ತು ಆಶೀರ್ವಾದಗಳಿರಲಿ. ಅವರ ಮೂಲಕ ಅಲ್ಲಾಹನು ದಾರಿ ತಪ್ಪಿದ ಲೋಕವನ್ನು ಸರಿಯಾದ ಮಾರ್ಗ ಮೇಲೆ ನಡೆಸಿದನು. ಅವರು ಶಿಕ್ಷಕರಾಗಿ, ಹಿತಕಾಂಕ್ಷಿಯಾಗಿ ದಾರಿತಪ್ಪಿದ ಜನರನ್ನು ಸರಿ ದಾರಿಗೆ ಮರಳಿ ತಂದರು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು



ಹೇ ಅಲ್ಲಾಹ್, ನಿನಗೆ ಸಹಸ್ರ ಸಹಸ್ರ ಕೃತಜ್ಞತೆಗಳು, ನೀನು ನಮಗೆ ಸ್ವತಃ ನಿನ್ನ ಪರಿಚಯ ಮಾರ್ಗ ತೋರಿಸಿರುವೆ, ನಿನ್ನ ಪವಿತ್ರ ಗ್ರಂಥಗಳ ಮೂಲಕ ಚಿಂತನೆ ಮತ್ತು ಬುದ್ಧಿಯ ತಪ್ಪು ಗ್ರಹಿಕೆಗಳಿಂದ ರಕ್ಷಿಸಿರುವೆ. ಪ್ರವಾದಿಗಳ ನಾಯಕರಾದ ಹಝ್ರತ್ ಪೈಗಂಬರ್(ಸ) ಮತ್ತು ಅವರ ವಂಶ ಹಾಗೂ ಅವರ ಶಿಷ್ಯ ವರ್ಗಗಳ ಮೇಲೆ ಶಾಂತಿ ಮತ್ತು ಆಶೀರ್ವಾದಗಳಿರಲಿ. ಅವರ ಮೂಲಕ ಅಲ್ಲಾಹನು ದಾರಿ ತಪ್ಪಿದ ಲೋಕವನ್ನು ಸರಿಯಾದ ಮಾರ್ಗ ಮೇಲೆ ನಡೆಸಿದನು. ಅವರು ಶಿಕ್ಷಕರಾಗಿ, ಹಿತಕಾಂಕ್ಷಿಯಾಗಿ ದಾರಿತಪ್ಪಿದ ಜನರನ್ನು ಸರಿ ದಾರಿಗೆ ಮರಳಿ ತಂದರು.

ಆ ಪರೋಪಕಾರಿ ಮತ್ತು ಔದಾರ್ಯವಂತ ಮಹಾಪುರುಷ ಜನರನ್ನು ಬಹುದೇವಾರಾಧನೆಯಿಂದ ಮತ್ತು ವಿಗ್ರಹಗಳ ಆಪತ್ತುಗಳಿಂದ ಮುಕ್ತಿ ನೀಡಿದರು. ಆ ಪ್ರಕಾಶಮಯಿ ಮತ್ತು ಪ್ರಕಾಶ ಬೀರುವ ವ್ಯಕ್ತಿ ಏಕದೇವನ ಪ್ರಕಾಶವನ್ನು ಲೋಕದಲ್ಲೆಲ್ಲ ಹರಡಿಸಿದರು. ಆ ವೈದ್ಯ ಮತ್ತು ಕಾಲಘಟ್ಟದ ಚಿಕಿತ್ಸಕ ರೋಗಗ್ರಸ್ತ ಹೃದಯಗಳನ್ನು ಸತ್ಪಥದ ಹೆಜ್ಜೆಯಲ್ಲಿ ನೆಲೆಸಿದರು. ಆ ದಯವಂತನೂ ಮತ್ತು ಪವಾಡಪುರುಷನೂ ಮೃತರನ್ನು ಜೀವಿತದ ನೀರು ಕುಡಿಸಿದರು. ಆ ದಯವಂತನೂ ಕರುಣಾನಿಧಿಯೂ ತನ್ನ ಸಮುದಾಯಕ್ಕಾಗಿ ದುಃಖ ದುಮ್ಮಾನಗಳನ್ನು ಸಹಿಸಿಕೊಂಡರು. ಆ ಧೀರ ಮತ್ತು ವೀರ ನಮ್ಮನ್ನು ಮೃತ್ಯುವಿನ ದವಡೆಯಿಂದ ಹೊರತಂದರು. ಆ ಸಹನಶೀಲನೂ ಮತ್ತು ನಿಸ್ವಾರ್ಥ ಮನುಷ್ಯನು ದೇವಾರಾಧನೆಯಲ್ಲಿ ತನ್ನ ಶಿರವನ್ನು ಬಾಗಿಸಿದರು ಮತ್ತು ತನ್ನ ಅಸ್ತಿತ್ವವನ್ನು ಅಳಿಸಿಹಾಕಿದರು. ಆ ಪರಿಪೂರ್ಣ ಏಕದೇವವಿಶ್ವಾಸಿಯಾದ ದೇವಜ್ಞಾನಿಗೆ ಕೇವಲ ದೇವನ ಸೌಂದರ್ಯ ಹಿಡಿಸಿತು ಮತ್ತು ಅವರು ಇನ್ನಿತರರನ್ನು ಗೌಣವಾಗಿ ಭಾವಿಸಿಕೊಂಡರು. ಆ ಪವಾಡ ಪುರುಷ ದೇವಭಕ್ತ ಅನಕ್ಷರಸ್ಥನಾಗಿಯೂ ಎಲ್ಲ ಸುಜ್ಞಾನಗಳಲ್ಲೂ ಮೇಲುಗೈ ಸಾಧಿಸಿದರು ಮತ್ತು ಪ್ರತಿಯೊಂದು ಸಮುದಾಯದ ತಪ್ಪುಗಳನ್ನು ಬೊಟ್ಟು ಮಾಡಿ ಎತ್ತಿ ತೋರಿಸಿದರು.

**ದರ್ ದಿಲಂ ಜೋಶದ್ ಸನಾಯೆ ಸರ್‌ವರೇ**
**ಆಂಕ ದರ್ ಖೂಬಿ ನದಾರದ್ ಹಮ್ಸರೇ**
**ಆಫ್ತಾಬ್ ಹರ್ ಝಮೀಂ ವ ಹರ್ ಝಮಾಂ**
**ರಹಬರ್ ಹರ್ ಅಸ್ವದ್ ವ ಹರ್ ಅಹ್ಮರೇ**

ಅನುವಾದ: ಹಝ್ರತ್ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಂತಹ ಗುಣವಂತರಾಗಿ ಬೇರೆ ಯಾರನ್ನೂ ಕಂಡಿಲ್ಲ. ಆದುದರಿಂದ ನನ್ನ ಹೃದಯ ಅವರನ್ನು ಯಾವಾಲೂ ಸ್ತುತಿಸುತ್ತಿರುತ್ತದೆ.

ಅವರು ಎಲ್ಲ ಕಾಲ ನೆಲಗಳಿಗೆ ಸೂರ್ಯನಿದ್ದಂತೆ. ಅವರು ಎಲ್ಲ ಕರಿ ಬಿಳಿಯರಿಗೂ ಮಾರ್ಗದರ್ಶಕರಾಗಿದ್ದಾರೆ.

**(ಬರಾಹೀನ್ ಅಹ್ಮದಿಯಾ, ಭಾಗ–1, ರೂಹಾನಿ ಖಝಾಇನ್, ಸಂಪುಟ–1, ಪುಟ–17)**

ಕನ್ನಡ ವಾರಪತ್ರಿಕೆ ಬದರ್ "ಸೀರತುನ್ನಬೀ(ಸ) ವಿಶೇಶ ಸಂಚಿಕೆ"

**ವಿಷಯ ಸೂಚಿಕೆ** **ಪುಟ**


| | | |
|---|---|---|
| * | ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು | 1 |
| * | ವಿಷಯ ಸೂಚಿಕೆ ಮತ್ತು ಸಂಪಾದಕೀಯ | 2 |
| * | ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಅ)ರವರ ಖುತ್‍ಬ ಜುಮುಅ | 3 |
| * | ಶಾಂತಿ ಸ್ಥಾಪನೆಗೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳು ಮತ್ತು ಅವರ ಉತ್ತಮ ಮಾದರಿ | 09 |
| * | ಹಝ್ರತ್ ಅಬೂಬಕರ್ ಸಿದ್ದೀಖ್(ರ) ಮತ್ತು ಹಝ್ರತ್ ಮೌಲಾನ ನೂರುದ್ದೀನ್(ರ)ರವರ ಜೀವನ ಚರಿತ್ರೆ | 14 |
| * | ಜಗತ್ತಿಗೆ ಸ್ವಾತಂತ್ರ್ಯ ನೀಡಿದ ಪ್ರವಾದಿ | 19 |


# ಹಝ್ರತ್ ಪೈಗಂಬರ್(ಸ) ರೊಡನೆ ಸಹಾಬರ ಪ್ರೇಮ

ಪ್ರೀತಿಯ ನೇತಾರ ಸಯ್ಯಿದ್‌ನಾ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ವ್ಯಕ್ತಿತ್ವ ಅನ್ಸಾರ್ ಮತ್ತು ಮುಹಾಜಿರೀನ್‌ರೊಂದಿಗೆ ಎಂತಹ ರೀತಿಯಲ್ಲಿತ್ತೆಂದರೆ, ದೀಪದ ಸುತ್ತಲೂ ಪತಂಗಗಳ ಹಾರಾಟದಂತಿತ್ತು. ಸಹಾಬರು(ರ) ಹಝ್ರತ್ ಪೈಗಂಬರ್(ಸ) ಮೇಲೆ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿ ಹೊಂದಿದ್ದರು. ಅವರ ಪ್ರತಿಯೊಂದು ಆದೇಶದ ಮೇಲೆ ಹೌದೆನ್ನುತ್ತಿದ್ದರು. ಹಝ್ರತ್ ಪೈಗಂಬರ್(ಸ) ಜೊತೆ ನೆರಳಿನಂತಿರುತ್ತಿದ್ದರು. ಕೆಲವರು ಅವರ ದೈವಿಕ ಘನತೆ ಗೌರವಯುತ ಮುಖದ ಕಾರಣ ಅವರನ್ನು ಕಣ್ಣು ತುಂಬಾ ನೋಡಲು ಸಾಧ್ಯವಾಗುತ್ತಿರಲಿಲ್ಲ. ಅವರೊಡನೆ ಪ್ರಶ್ನೆ ಕೇಳಲು ನಾಚುತ್ತಿದ್ದರು ಮತ್ತು ಯಾರಾದರೂ ಹಳ್ಳಿಗನೊಬ್ಬ ಕೇಳಿದರೆ ನಾವು ಸಹ ಆಲಿಸಬಹುದು ಎಂದು ಕಾಯುತ್ತಿದ್ದರು. ಹಝ್ರತ್ ಪೈಗಂಬರ್(ಸ) ಇವರಿಗೆ ಲೋಕದ ಯಾವುದೇ ವಸ್ತುವಿಗಿಂತ ಹೆಚ್ಚು ಅಮೂಲ್ಯವಾಗಿದ್ದರು. ಅವರು ಯಾವುದೇ ಕಾರಣಕ್ಕೂ ಅವರಿಂದ ದೂರವಾಗಲೂ ಮತ್ತು ಅವರನ್ನು ಕಳೆದುಕೊಳ್ಳಲು ಬಯಸುತ್ತಿರಲಿಲ್ಲ. ಪುರುಷನಾಗಲಿ, ಸ್ತ್ರೀಯಾಗಲಿ, ವೃದ್ಧನಾಗಲಿ, ಮಗುವಾಗಲಿ ಯಾರೂ ಸಹ ಅವರಿಂದ ಬೇರ್ಪಡಲು ಇಷ್ಟಪಡುತ್ತಿರಲಿಲ್ಲ. ಅವರ ನಿಧನದ ಸಮಯ ಸಹಾಬರು ದುಃಖದಿಂದ ಹುಚ್ಚರಂತಾಗಿದ್ದರು. ಹಝ್ರತ್ ಉಮರ್‌ರಂತಹ ಧೀಮಂತ ಮನುಷ್ಯರು ಸಹ ಹೇಗೆ ಸೋತು ಹೋಗಿದ್ದರೆಂದರೆ ನಿಲ್ಲಲು ಸಹ ಶಕ್ತಿ ಇರಲಿಲ್ಲ, ಕಾಲುಗಳು ಅವರ ಭಾರ ತಾಳದಂತಾಗಿತ್ತು. ಹಸ್ಸಾನ್ ಬಿನ್ ಸಾಬಿತ್ ಹಝ್ರತ್ ಪೈಗಂಬರ್(ಸ) ಅವರ ಕವಿಯಾಗಿದ್ದರು, ಅವರ ಈ ಕವನದ ಸಾಲು ಸಹಾಬರ ಸ್ಥಿತಿಯನ್ನು ಪ್ರದರ್ಶಿಸುತ್ತದೆ.

**"ಕುಂತ್ಸವಾದ ಲಿನ್ನಾಝಿರಿ ಫಅಮಿಯ ಅಲೈಕನ್ನಾಝಿರು ಮನ್‌ಶಾಅ**
**ಬಾಅ್‌ದಕ ಫಲ್‌ಯಮುತ್ ಫಅಲೈಕ ಕುಂತು ಉಹಾಝಿರು"**

ಎಂದರೆ ಹೇ ಮುಹಮ್ಮದ್(ಸ) ನೀವು ನನ್ನ ಕಣ್ಣಿನ ಮಣಿಯಾಗಿದ್ದೀರಿ. ನಿಮ್ಮ ನಿಧನದ ನಂತರ ನನ್ನ ಕಣ್ಣು ಕುರುಡಾಗಿದೆ, ಈಗ ಯಾರು ಸತ್ತರೇನು, ನನಗಂತೂ ನಿಮ್ಮ ಸಾವಿನ ಭಯವೇ ಇತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಮಸ್ಜಿದ್ ಮುಬಾರಕ್‌ನಲ್ಲಿ ನಡೆದಾಡುತ್ತಿದ್ದರು ಮತ್ತು ಜೊತೆಯಲ್ಲಿ ಹಸ್ಸಾನ್ ಬಿನ್ ಸಾಬಿತ್ ಅನ್ಸಾರಿ(ರ) ಅವರ ಈ ಕವನ ಸಾಲನ್ನು ಪಠಿಸಿ ತಮ್ಮ ನೇತಾರ ಒಡೆಯರಾದ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ಸ್ಮರಿಸಿ ಬಿಕ್ಕಿ ಬಿಕ್ಕಿ ಅಳುತ್ತಾ ಹೋಗುತ್ತಿದ್ದರು. ಒಬ್ಬರು ಕೇಳಿದಾಗ, ಹೇಳಿದರು. ಅಕಟಕಟ! ಈ ಕವನ ಸಾಲು ನನ್ನ ನಾಲಿಗೆಯಿಂದ ಹೊರಡಬೇಕಿತ್ತು. ಈ ಕೆಳಗೆ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಸಹಾಬರ ಪ್ರೀತಿ ಪ್ರೇಮಗಳ ಅಳಿಸಿ ಹಾಕದಂತಹ ಇತಿಹಾಸದಿಂದ ಕೆಲ ಸಾಲುಗಳು ಓದುಗರ ಮುಂದೆ ಅರ್ಪಿಸುತ್ತಿದ್ದೇನೆ.

ಸಫರ್ ತಿಂಗಳಿನ ನಾಲ್ಕನೆ ಹಿಜರಿಯಲ್ಲಿ ಅಝುಲ್ ಮತ್ತು ಖಾರಾ ಗೋತ್ರಗಳ ಕೆಲವು ಜನರು ಹಝ್ರತ್ ಪೈಗಂಬರ್(ಸ) ಅವರ ಸಮ್ಮುಖ ಹಾಜರಾಗಿ ಹೇಳಿದರು. ನಮ್ಮ ಗೋತ್ರದ ಹಲವು ಜನರು ಇಸ್ಲಾಮಿನತ್ತ ಒಲವು ಹೊಂದಿದ್ದಾರೆ. ತಾವು(ಸ) ಕೆಲವು ಜನರನ್ನು ನಮ್ಮ ಜೊತೆಯಲ್ಲಿ ಕಳುಹಿಸಿ ಅವರನ್ನು ಮುಸಲ್ಮಾನನ್ನಾಗಿ ಮಾಡಬಹುದು ಮತ್ತು ಇಸ್ಲಾಮಿನ ಶಿಕ್ಷಣ ಕೊಡಬಹುದು.

ಹಝ್ರತ್ ಪೈಗಂಬರ್(ಸ) ಅವರ ಈ ಬೇಡಿಕೆ ತಿಳಿದು ಸಂತೋಷಪಟ್ಟರು. ಹತ್ತು ಸ್ವಹಾಬಿಯರನ್ನು ಒಳಗೊಂಡ ಒಂದು ಜಮಾಅತ್‌ನ್ನು ಅವರ ಜೊತೆಗೆ ಕಳುಹಿಸಿದರು. ಆದರೆ ವಾಸ್ತವ ನಂತರ ತಿಳಿಯಿತು. ಈ ಜನರು ಸುಳ್ಳು ಹೇಳಿದರೆಂದು. ಬನು ಲಹ್‌ಯಾನ್‌ನ ಪ್ರಚೋದನೆ ಮೇರೆಗೆ ಅವರು ಮದೀನಾ ಬಂದಿದ್ದರು. ಅವರು ತಮ್ಮ ಸರದಾರ ಸೂಫಿಯಾನ್ ಬಿನ್ ಖಾಲಿದ್‌ನ ಹತ್ಯೆ ಮಾಡಲು ಈ ಸಂಚು ಹೂಡಿದ್ದರು. ಈ ಮೂಲಕ ಮುಸ್ಲಿಮರು ಮದೀನಾದಿಂದ ಹೊರಟರೆ ಅವರ ಮೇಲೆ ಆಕ್ರಮಣ

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

ಮಾಡಬಹುದು. ಬನೂ ಲಹ್‌ಯಾನ್ ಈ ಸೇವೆಯ ಪ್ರತಿಯಾಗಿ ಅಝುಲ್ ಮತ್ತು ಖಾರಾ ಗೋತ್ರದ ಜನರಿಗೆ ಬಹಳಷ್ಟು ಒಂಟೆಗಳನ್ನು ಬಹುಮಾನ ರೂಪದಲ್ಲಿ ನೋಡಲು ನಿಗದಿಪಡಿಸಿದ್ದರು. ಅಝುಲ್ ಮತ್ತು ಖಾರಾದ ಈ ವಿದ್ರೋಹಿಗಳು ಅಸ್ಫಾನ್ ಮತ್ತು ಮಕ್ಕಾದ ನಡುವೆ ತಲುಪಿದಾಗ ಅವರು ಬನೂ ಲಹ್‌ಯಾನ್‌ಗೆ ಗೌಪ್ಯವಾಗಿ ಈ ವಿಷಯ ತಿಳಿಸಿದರು. ಮುಸ್ಲಿಮರು ನಮ್ಮ ಜೊತೆ ಬರುತ್ತಿದ್ದಾರೆ. ನೀವು ಬಂದು ಬಿಡಿ. ಆಗ ಲಹ್‌ಯಾನ್ ಗೋತ್ರದ ಇನ್ನೂರು ಯುವಕರು ಅದರಲ್ಲಿ ಒಂದು ನೂರರಷ್ಟು ಬಾಣತಜ್ಞರಾಗಿದ್ದರು. ಮುಸ್ಲಿಮರನ್ನು ಎದುರಿಸಲು ಹೊರಟರು ಮತ್ತು ರಜೀ ಸ್ಥಾನದಲ್ಲಿ ಕೂಡಿಕೊಂಡರು. ಸ್ವಹಾಬರು ಒಂದು ಬೆಟ್ಟದಮೇಲಿದ್ದ ಬಂಡೆಯ ಮೇಲೆ ಏರಿದರು ಮತ್ತು ಅವರನ್ನು ಎದುರಿಸಿದರು. ಹತ್ತರಲ್ಲಿ ಏಳು ಸ್ವಹಾಬಿಯರು ಶಹೀದರಾದರು. ಮೂರು ಸ್ವಹಾಬಿಯರು ಖುಬೈಬ್ ಬಿನ್ ಅದೀ, ಝೈದ್ ಬಿನ್ ವಸ್‌ನಾ, ಅಬ್ದುಲ್ಲಾ ಬಿನ್ ತಾರಿಕ್, ಅವರಿಗೆ ನಾವು ನಿಮಗೆ ಏನೂ ಮಾಡುವುದಿಲ್ಲ ಎಂದು ಸುಳ್ಳನ್ನು ಹೇಳಿ ಕೆಳಗೆ ಇಳಿಸಿದರು. ಇಳಿದು ಬರುವಂತೆ ಮಾಡಿದರು. ಆದರೆ ಅವರು ಇಳಿಯುತ್ತಿದ್ದಂತೆಯೇ ಸೆರೆ ಹಿಡಿಯಲಾಯಿತು. ಅಬ್ದುಲ್ಲಾ ಅವರು ಹೋಗಲು ನಿರಾಕರಿಸಿದರು. ಆಗ ಅವರನ್ನು ಹತ್ಯೆ ಮಾಡಲಾಯಿತು. ಬನು ಲಹ್‌ಯಾನ್‌ನ ಸೇಡು ಪೂರ್ಣವಾಗಿತ್ತು. ಈಗ ಅವರು ಖುರೈಶ್‌ರನ್ನು ಸಂತುಷ್ಟಗೊಳಿಸಲು ಮತ್ತು ಹಣದ ಆಸೆಯಲ್ಲಿ ಖುಬೀಬ್ ಮತ್ತು ಝೈದ್‌ರನ್ನು ಕರೆದುಕೊಂಡು ಮಕ್ಕಾದ ಕಡೆ ಹೋದರು. ಅಲ್ಲಿ ತಲುಪಿ ಅವರು ಖುರೈಶರಿಗೆ ಮಾರಿಬಿಟ್ಟರು. ಹಾಗೆ ಖುಬೀಬ್‌ರನ್ನು ಹಾರಿಸ್ ಬಿನ್ ಆಮೀರ್ ಬಿನ್ ನವ್‌ಫೀಲ್‌ರ ಮಕ್ಕಳು ಖರೀದಿಸಿದರು. ಏಕೆಂದರೆ ಖುಬೀಬ್ ಬದರ್ ಯುದ್ಧದಲ್ಲಿ ಹಾರಿಸ್‌ರನ್ನು ಹತ್ಯೆಗೈದರು. ಝೈದ್‌ರನ್ನು ಸಫ್‌ವಾನ್ ಬಿನ್ ಉಮಯ್ಯ ಖರೀದಿಸಿದರು. ಖುಬೀಬ್ ಮತ್ತು ಝೈದ್ ಇಬ್ಬರ ಹಾದತ್‌ನ ಘಟನೆಗಳು ಅತ್ಯಂತ ವಿಶ್ವಾಸವರ್ಧಕವಾಗಿದೆ. ಸಫ್‌ವಾನ ಬಿನ್ ಉಮಯ್ಯ ತನ್ನ ಕೈದಿಯಾದ ಝೈದ್ ಬಿನ್ ವಸ್‌ನಾವನ್ನು ಕರೆದುಕೊಂಡು ಹರಮನಿಂದ ಹೊರಗೆ ಹೋದನು. ಖುರೈಶ್ ನಾಯಕರ ಒಂದು ತಂಡವೇ ಜೊತೆಯಲ್ಲಿತ್ತು. ಹೊರಗೆ ಬಂದು ಸಫ್‌ವಾನ್ ತನ್ನ ಗುಲಾಮ ನಸ್ತಾಸ್‌ಗೆ ಝೈದ್‌ನ ಹತ್ಯೆ ಮಾಡಲು ಆದೇಶ ನೀಡಿದನು. ನಸ್ತಾಸ್ ಮುಂದೆ ಬಂದು ಖಡ್ಗ ಎತ್ತಿದನು. ಅಬೂ ಸೂಫಿಯಾನ್ ಬಿನ್ ಹರಬ್ ಮಕ್ಕಾದ ಮುಖಂಡ ಆ ಎಲ್ಲ ಕಿಡಿಗೇಡಿಗಳಲ್ಲಿ ಉಪಸ್ಥಿತನಿದ್ದನು, ಮುಂದೆ ಬಂದು ಝೈದ್‌ರೊಂದಿಗೆ ಹೇಳಿದನು.

"ಸತ್ಯ ಹೇಳು, ಈ ಸಮಯ ನಮ್ಮ ಕೈಯಲ್ಲಿ ನಿನ್ನ ಬದಲಿಗೆ ಮುಹಮ್ಮದ್ ಇರುತ್ತಿದ್ದರೆ ನಾವು ಅವರನ್ನು ಕೊಲೆ ಮಾಡುತ್ತಿದ್ದೆವು ಮತ್ತು ನಿನಗೆ ಬಿಡುತ್ತಿದ್ದೆವು. ನಿನಗೆ ನಿನ್ನ ಮಡದಿ ಮಕ್ಕಳೊಂದಿಗೆ ಸಂತೋಷದಿಂದ ಕಾಲ ಕಳೆಯಲು ಮನಸಾಗುವುದಿಲ್ಲವೇ? ಝೈದರ ಕಣ್ಣಿನಲ್ಲಿ ರಕ್ತ ಇಳಿದು ಬಂತು. ಮತ್ತು ಕೋಪದಿಂದ ಹೇಳಿದರು. "ಅಬೂ ಸುಫೀಯಾನ್ ನೀನು ಏನು ಹೇಳುತ್ತಿದ್ದಿಯಾ? ಅಲ್ಲಾಹನಾಣೆ, ನಾನು ಉಳಿದಿರುವವರೆಗೆ ರಸೂಲುಲ್ಲಾಹ್(ಸ) ರವರ ಕಾಲಿಗೆ ಮುಳ್ಳು ನಾಟುವುದನ್ನು ಸಹ ಸಹಿಸಲಾರೆ" ಅಬೂ ಸುಫಿಯಾನ್ ತಡೆಯಲಾರದೆ ಹೇಳಿದರು. ಯಾ ಅಲ್ಲಾಹ್, ಯಾವ ವ್ಯಕ್ತಿಗೂ ಇನ್ನೊಬ್ಬ ವ್ಯಕ್ತಿಗಿರುವ ಇಂತಹ ಪ್ರೀತಿ ಎಂದರೆ ಮುಹಮ್ಮದ್ (ಸ) ರೊಂದಿಗೆ ಸಹಾಬರಿಗೆ ಇರುವಂತಹ ಪ್ರೀತಿ ಕಾಣಲಿಲ್ಲ. ಇದಾದ ನಂತರ ನಸ್ತಾಸ್ ಝೈದರನ್ನು ಶಹೀದರನ್ನಾಗಿ ಮಾಡಿದನು.

(ಸೀರತ್ ಖಾತಮನ್ನಬಿಯೀನ್, ಪುಟ 513–516)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ.

ಉಹದ್ ಯುದ್ಧದ ನಂತರ ಇಸ್ಲಾಮಿನ ಸೈನ್ಯ ಮರಳಿ ಮದೀನಕ್ಕೆ ಹೊರಟಾಗ ಅಲ್ಲಿ ಹಝ್ರತ್ ಪೈಗಂಬರ್(ಸ) ರವರ ಶಹಾದತ್ ಮತ್ತು ಇಸ್ಲಾಮಿನ ಸೈನ್ಯ ಛಿದ್ರಗೊಂಡ ಸುದ್ದಿ ಮದೀನಕ್ಕೆ ತಲುಪಿತ್ತು. ಮದೀನದ ಮಹಿಳೆಯರು ಮತ್ತು ಮಕ್ಕಳು ದಿಗ್ಭ್ರಮೆಗೊಂಡು ಉಹದ್‌ನತ್ತ ಓಡಿ ಹೋಗುತ್ತಿದ್ದರು. ಹೆಚ್ಚಿನವರಿಗೆ ರಸ್ತೆ ಮಧ್ಯದಲ್ಲೇ ಸುದ್ದಿ ಕೇಳಿ ಅಲ್ಲೇ ನಿಂತರು, ಆದರೆ ಬನೂದೀನಾರ್ ಗೋತ್ರದ ಓರ್ವ ಮಹಿಳೆ ಹುಚ್ಚಿಯು ರೀತಿ ಮುಂದುವರೆಯುತ್ತ ಉಹದ್‌ವರೆಗೆ ಹೋದಳು. ಅವಳು ಉಹದ್ ಮೈದಾನದ ಕಡೆಗೆ ಹೋಗುತ್ತಿದ್ದಳು, ಆ ಮಹಿಳೆಯ ಪತಿ ಮತ್ತು ಸಹೋದರ ಹಾಗೂ ತಂದೆ ಹತರಾಗಿದ್ದರು. ಕೆಲವು ವರದಿಗಳ ಪ್ರಕಾರ ಅವಳ ಮಗನು ಕೂಡ ಹತನಾಗಿದ್ದನು. ಅವಳಿಗೆ ಅವನ ತಂದೆ ಹತನಾದ ಸುದ್ದಿ ತಿಳಿಸಿದಾಗ ಅವಳು ಹೇಳುತ್ತಿದ್ದಳು. ನನಗೆ ಹೇಳಿ ಮುಹಮ್ಮದ್ ರಸೂಲುಲ್ಲಾಹ್(ಸ) ರವರು ಹೇಗಿದ್ದಾರೆ? ಅಂದಹಾಗೆ ಸುದ್ದಿ ತಿಳಿಸುವವನಿಗೆ ರಸೂಲುಲ್ಲಾಹ್(ಸ) ಕ್ಷೆಮವಾಗಿದ್ದ ವಿಷಯ ತಿಳಿದಿತ್ತು. ಆದ್ದರಿಂದ ಅವರು ತೃಪ್ತರಾಗಿದ್ದರು, ಆದ್ದರಿಂದಲೇ ಅವರು ಮತ್ತೆ ಮತ್ತೆ ಅವಳ ಸಹೋದರ ಮತ್ತು ಪತಿ ಮತ್ತು ಮಗನು ಹತನಾದ ವಿಷಯ ತಿಳಿಸುತ್ತಾ ಹೋದರು. ಆದರೆ ಅವಳು ಇದೇ

*(ಪುಟ 22 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ನಿಮಗೆ ಸುವಾರ್ತೆ ಇದೆ. ಎರಡು ಸಂಘಗಳಲ್ಲಿ ಒಂದು ಸಂಘದ ಮೇಲೆ ಜಯ ಗಳಿಸುವುದಾಗಿ ಅಲ್ಲಾಹನು ನನಗೆ ವಾಗ್ದಾನ ಮಾಡಿರುವೆನು. ಅಲ್ಲಾಹನಾಣೆ, ಶತ್ರು ಜನರು ಕೊಲ್ಲಲ್ಪಟ್ಟು ಬೀಳುವ ಜಾಗವನ್ನು ನಾನು ನೋಡುತ್ತಿದ್ದೇನೆ.

ಯಾ ರಸೂಲಲ್ಲಾಹ್! ಈಗ ನಿಮ್ಮ ಪ್ರಾಮಾಣಿಕತೆ ನಮಗೆ ಸ್ಪಷ್ಟವಾಯಿತು ಮತ್ತು ನಿಮ್ಮ ನಿಲುವು ನಮಗೆ ಸ್ಪಷ್ಟವಾಗಿದೆ, ಈಗ ಯಾವುದೇ ಒಪ್ಪಂದದ ಪ್ರಶ್ನೆ ಏನು? ಸಮುದ್ರವು ನಿಮ್ಮ ಮುಂದೆ ಇದೆ, ನೀವು ಆದೇಶಿಸಿದರೆ, ನಮ್ಮ ಕುದುರೆಗಳನ್ನು ಅದರಲ್ಲಿ ಹಾಕಲು ನಾವು ಸಿದ್ಧರಿದ್ದೇವೆ ಮತ್ತು ಯುದ್ಧ ನಡೆದರೆ, ಅಲ್ಲಾಹನಾಣೆ, ನಾವು ನಿಮ್ಮ ಬಲಗಡೆಯಿಂದಲೂ ಎಡಗಡೆಯಿಂದಲೂ ಮುಂದಿನಿಂದಲೂ ಹಿಂದಿನಿಂದಲೂ ಹೋರಾಡುವೆವು. ನಮ್ಮ ಶವಶರೀರವನ್ನು ತುಳಿಯದೇ ಶತ್ರುಗಳು ನಿಮ್ಮ ತನಕ ತಲುಪಲು ಸಾಧ್ಯವಲ್ಲ.

ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಸಂಬೋಧಿಸುತ್ತಾ ಹೇಳಿದರು: **ಹಾಝಾ ಮಕ್ಕತು ಖದ್ ಅಲ್‌ಖತ್ ಇಲೈಕುಮ್ ಅಫ್ಲಾಝು ಕಬಿದಿಹಾ** ಅಂದರೆ: ನೋಡಿರಿ, ಮಕ್ಕಾ, ಕರುಳಿನ ತುಂಡುಗಳನ್ನು ಹೊರಗೆ ಹಾಕಿ ನಿಮ್ಮ ಮುಂದೆ ಹಾಕಿರುವರು.

ಯಾ ರಸೂಲಲ್ಲಾಹ್, ನಾವು ಹಝ್ರತ್ ಅಬೂಬಕರ್(ರ)ರನ್ನು ನಿಮ್ಮ ಸಂರಕ್ಷಣೆಗಾಗಿ ನಿಶ್ಚಯಿಸಿದ್ದೇವೆ ಮತ್ತು ಈ ಅತ್ಯಂತ ವೇಗದ ಒಂಟೆಯನ್ನು ನಿಮ್ಮ ಸಮೀಪ ಕಟ್ಟಿದ್ದೇವೆ. ನಾವು ಒಂದು ವೇಳೆ ಒಬ್ಬೊಬ್ಬರಾಗಿ ವಧಿಸಲ್ಪಟ್ಟರೆ, ಯಾ ರಸೂಲಲ್ಲಾಹ್, ಈ ಒಂಟೆ ಇಲ್ಲಿದೆ. ಇದರಲ್ಲಿ ನೀವು ಸವಾರರಾಗಿ ಮದೀನಕ್ಕೆ ಹೋಗಿರಿ.

ಹೇ ಅಲ್ಲಾಹ್, ಈ ಖುರೈಶಿಗಳು ಅಹಂಕಾರ ಮತ್ತು ಜಂಬದಿಂದ ನಿನ್ನ ವಿರುದ್ಧ ಹೋರಾಡಲು ಮತ್ತು ನಿನ್ನ ಪ್ರವಾದಿಯನ್ನು ನಿರಾಕರಿಸಲು ಬಂದಿರುವರು. ನೀನು ನನ್ನೊಂದಿಗೆ ಮಾಡಿದ ಸಹಾಯದ ವಾಗ್ದಾನವನ್ನು ಈಡೇರಿಸು. ಅವರನ್ನು ಇಂದೇ ಮುಗಿಸುಬಿಡು.

## ಬದರ್ ಯುದ್ಧಕ್ಕಾಗಿ ಸಿದ್ಧತೆಗಳು ಹಾಗೂ ಘಟನೆಗಳು ಮತ್ತು ಸಹಾಬರವರ ತಮ್ಮ ಆತ್ಮೀಯ ಪ್ರವಾದಿ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರೊಂದಿಗೆ ಇದ್ದ ಪ್ರಾಮಾಣಿಕ ವಿಧೇಯತೆ ಹಾಗೂ ಪ್ರೀತಿಯ ಬಗ್ಗೆ ಪ್ರಸ್ತಾವನೆ

ಮಾನ್ಯ ಖಾರಿ ಮುಹಮ್ಮದ್ ಆಶಿಖ್ ಸಾಹಿಬ್ ಮತ್ತು ಮಾನ್ಯ ನೂರುದ್ದೀನ್ ಹಸ್ಮಿ ಸಾಹಿಬ್ ಅವರ ಗುಣಲಕ್ಷಣಗಳ ಪ್ರಸ್ತಾವನೆ ಹಾಗೂ ನಮಾಝು ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23–06–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ . اَلرَّحْمٰنِ الرَّحِيْمِ . مٰلِكِ يَوْمِ الدِّيْنِ .

اِيَّاكَ نَعْبُدُ وَاِيَّاكَ نَسْتَعِيْنُ . اِهْدِنَا الصِّرَاطَ الْمُسْتَقِيْمَ .

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ .

ಕಳೆದ ಖುತ್ಬದಲ್ಲಿ ಪ್ರಸ್ತಾಪಿಸಲಾದಂತೆ ಒಂದು ಸಂಘ ಅಥವಾ ಸೈನ್ಯ ಆಗಮಿಸುತ್ತಿರುವುದರ ಮಾಹಿತಿಯನ್ನು ಹಝ್ರತ್ ಪೈಗಂಬರ್(ಸ) ಕಳುಹಿಸಿದ ದೂತರು ನೀಡಿದ್ದರು. ವ್ಯಾಪಾರಿ ಸಂಘವನ್ನು ರಕ್ಷಿಸಲಿಕ್ಕಾಗಿ ಖುರೈಶಿನ ಸೈನ್ಯ ಬರುತ್ತಿದೆ ಎಂದು ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾದಾಗ ಅವರು ಸಹಾಬಿಯರೊಡನೆ ಸಲಹೆ ಕೇಳಿದರು ಮತ್ತು ಖುರೈಶಿಯರ ಸ್ಥಿತಿಗತಿಗಳ ಬಗ್ಗೆ ತಿಳಿಸಿದರು. ಆಗ ಹಝ್ರತ್ ಅಬೂಬಕರ್(ರ) ಎದ್ದು ನಿಂತು ಬಹಳ ಸುಂದರವಾಗಿ ಮಾತನಾಡಿದರು. ಅನಂತರ ಹಝ್ರತ್ ಉಮರ್(ರ) ಎದ್ದುನಿಂತುಕೊಂಡು ಬಹಳ ಸುಂದರವಾದ ಶೈಲಿಯಲ್ಲಿ ಮಾತುಕತೆ ನಡೆಸಿದರು. ಅನಂತರ ಹಝ್ರತ್ ಮಿಖ್‌ದಾದ್ ಬಿನ್ ಅಮ್ರ್(ರ) ಎದ್ದು ನಿಂತುಕೊಂಡು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಎಲ್ಲಿಗೆ ಹೋಗಲು ಅಲ್ಲಾಹನು ಆದೇಶ ನೀಡಿರುವನೋ ಅಲ್ಲಿಗೆ ನಮ್ಮನ್ನು ಕೊಂಡುಹೋಗಿರಿ. ನಾವು ನಿಮ್ಮೊಂದಿಗೆ ಇದ್ದೇವೆ. **ಫಝ್‌ಹಬ್ ಅನ್ತ ವ ರಬ್ಬುಕ ಫಖಾತಿಲಾ ಇನ್ನಾ ಹಾಹುನಾ ಖಾಯಿದೂನ್** (ಅಲ್‌ಮಾಯಿದಃ: 25) ನೀವು ಮತ್ತು ನಿಮ್ಮ ದೇವನು ಇಬ್ಬರೂ ಹೋರಾಡಿರಿ, ನಾವು ಇಲ್ಲಿ ಕುಳಿತುಕೊಳ್ಳುತ್ತೇವೆ ಎಂದು ಬನೀ ಇಸ್ರಾಈಲರು ಹಝ್ರತ್ ಮೂಸಾ(ಅ)ರಿಗೆ ಕೊಟ್ಟ ಉತ್ತರವನ್ನು ನಾವು ಅಲ್ಲಾಹನಾಣೆ ಖಂಡಿತ ನೀಡಲಾರೆವು. ಬದಲಾಗಿ ನಾವು ಹೀಗೆ ಹೇಳುವೆವು, ನೀವು ಮತ್ತು ನಿಮ್ಮ ಪ್ರಭು ಹೋಗಿರಿ ಮತ್ತು ಯುದ್ಧ ಮಾಡಿರಿ. ನಾವು ಸಹ ನಿಮ್ಮೊಂದಿಗೆ ಸೇರಿಕೊಂಡು ಯುದ್ಧ ಮಾಡುವೆವು.

ನಿಮ್ಮನ್ನು ಸತ್ಯದಿಂದ ಕಳುಹಿಸಿದ ಆ ಅಲ್ಲಾಹನ ಆಣೆ ಹಾಕಿ ಹೇಳುತ್ತೇನೆ, ನೀವು ನಮ್ಮನ್ನು ಬರ್ಕುಲ್ ಗ಼ಮಾದ್ ತನಕ ಕೊಂಡು ಹೋದರೂ ನಾವು ನಿಮ್ಮ ಜೊತೆಗೆ ಬರುವೆವು. ನಿಮ್ಮ ಜೊತೆಗೆ ಶತ್ರುಗಳ ವಿರುದ್ಧ ಹೋರಾಡುವೆವು. ಇದನ್ನು ಆಲಿಸಿಕೊಂಡು ಹಝ್ರತ್ ಪೈಗಂಬರ್(ಸ) ಅವರನ್ನು ಹೊಗಳಿದರು ಮತ್ತು ಅವರಿಗಾಗಿ ದುಆ ಮಾಡಿದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಯಾಮ್, ಪುಟ–420–421, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಗ್ಹಝುವಾತುನ್ನಬೀ(ಸ), ಅಬುಲ್ ಕಲಾಮ್ ಆಝಾದ್, ಪುಟ–30, ಸಿಟೀ ಬುಕ್ ಪೊಯಿಂಟ್ 2014)

ಬರ್ಕುಲ್ ಗಮಾದ್ ಮುಖ್ಯ ಹೆದ್ದಾರಿಯಿಂದ ದೂರದಲ್ಲಿರುವ ಮಕ್ಕಾದ ದಕ್ಷಿಣಕ್ಕೆ ನಾನೂರ ಮೂವತ್ತು ಕಿಲೋಮೀಟರ್ ದೂರದಲ್ಲಿ ದೂರದ ಸ್ಥಳವಾಗಿದೆ ಎಂದು ಲೇಖಕರೊಬ್ಬರು ಬರೆದಿದ್ದಾರೆ, ಇದು ಪ್ರಯಾಣದ ದೂರ ಮತ್ತು ಕಷ್ಟಕ್ಕೆ ಭಾಷಾವೈಶಿಷ್ಟ್ಯವಾಗಿ ಬಳಸಲ್ಪಟ್ಟಿದೆ. ಇದನ್ನು ಉರ್ದುವಿನಲ್ಲಿ ಕುಹ್ ಕ್ವಾಫ್ ಎಂದು ಕರೆಯುತ್ತಾರೆ, ಇದು ದೂರದ ಅರ್ಥವನ್ನು ಸ್ಪಷ್ಟಪಡಿಸುತ್ತದೆ. ನೀವು ಬಯಸಿದಷ್ಟು ನಾವು ನಿಮ್ಮೊಂದಿಗೆ ಇರುತ್ತೇವೆ ಎಂದರ್ಥ. (ದಾಇರಃ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–6, ಪುಟ–139, ಬಝ್ಮ್ ಇಖ್ಬಾಲ್ ಲಾಹೋರ್, ಏಪ್ರಿಲ್ 2022)

ಈ ಸಂದರ್ಭದಲ್ಲಿ ಹಝ್ರತ್ ಮಿಕ್ದಾದ್(ರ) ಅವರು ಪಠಿಸಿದ ಆಯತ್ ಸೂರಾ ಮಾಇದಃದ ಆಯತ್ ಆಗಿದೆ ಮತ್ತು ಈ ಸೂರಾವು ಬಹಳ ನಂತರ ಅವತರಿಸಿದ ಸೂರಾ ಆಗಿದೆ, ಆದ್ದರಿಂದ ಈ ಆಯತ್ ಅನ್ನು ಪಠಿಸಿದ್ದಾರೆ ಎಂದು ಹೇಳುವುದು ಸೂಕ್ತವಲ್ಲ ಎಂದು ಕೆಲವು ಜೀವನಚರಿತ್ರೆಕಾರರು ಈ ಸಂದರ್ಭದಲ್ಲಿ ಪ್ರಶ್ನೆಯನ್ನು ಎತ್ತಿದ್ದಾರೆ ಎಂಬ ವಿವರಣೆಯೂ ಇದೆ. ಆದರೆ ನಂತರ ಈ ವ್ಯಾಖ್ಯಾನಕಾರರು ಸ್ವತಃ ಅದಕ್ಕೆ ಹಲವಾರು ಸಮರ್ಥನೆಗಳನ್ನು ಸಹ ಪ್ರಸ್ತುತಪಡಿಸುತ್ತಾರೆ, ಉದಾಹರಣೆಗೆ, ಅವರು ಇದನ್ನು ಬನೀ ಇಸ್ರಾಈಲ್‌ನ ಯಹೂದಿಗಳಿಂದ ಕೇಳಿರಬಹುದು ಅಥವಾ ನಂತರದ ನಿರೂಪಕರು ಈ ಆಯತ್ ಅನ್ನು ಸೇರಿಸಿದ್ದಾರೆ ಎಂದು ಹೇಳಿದ್ದಾರೆ. ಆದಾಗ್ಯೂ, ಈ ಆಕ್ಷೇಪಣೆಯು ಅಷ್ಟು ಮುಖ್ಯವಲ್ಲ ಏಕೆಂದರೆ ಈ ವರದಿಯನ್ನು ಹೆಚ್ಚಾಗಿ ಜೀವನಚರಿತ್ರೆಯ ಪುಸ್ತಕಗಳಲ್ಲಿ ವಿವರಿಸಲಾಗಿದೆ. ಅಲ್ಲದೆ, ಬುಖಾರಿಯ ಶರಹ್ ಫತಹ್ ಅಲ್–ಬಾರಿ, ಇದು ಇಬ್ನ್ ಹಜರ್ ಅವರ ಶರಾಹ್ ಆಗಿದೆ ಅದರಲ್ಲಿ ಅವರು ಹೀಗೆ ಬರೆದಿದ್ದಾರೆ ಸೂರಃ ಮಾಇದಃ, ಸಂಪೂರ್ಣ ಸೂರವು ಹಜ್ಜತುಲ್ ವಿದಾದ ಸಂದರ್ಭದಲ್ಲಿ ಅವತರಿಸಿದೆ ಎಂಬ ಮಾತು ತಪ್ಪಾಗಿದೆ. ಅದರ ಕೆಲವು ಆಯತ್‌ಗಳು ಬಹಳ ಹಿಂದೆಯೇ ಅವತೀರ್ಣಗೊಂಡಿದ್ದವು. ಅವುಗಳಲ್ಲಿ ಒಂದನ್ನು ಹಝ್ರತ್ ಮಿಕ್ದಾದ್(ರ) ಅವರು ಬದ್ರ್ ಸಂದರ್ಭದಲ್ಲಿ ಪಠಿಸಿದರು, ಆದರೆ ಏನೇ ಇರಲಿ ಅವರು ಯಹೂದಿಗಳಿಂದಲೇ ಮಾತುಗಳನ್ನು ಕೇಳಿದ್ದರು. ಅವುಗಳು ಸಹ ಸರಿ ಇದ್ದರು ಇರಬಹುದು.

ಈ ಮೂವರಾದ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಮಿಖ್‌ದಾದ್(ರ) ಮುಹಾಜಿರ್‌ಗಳಾಗಿದ್ದರು. ಅನ್ಸಾರರ

ಅಭಿಪ್ರಾಯವನ್ನು ತಿಳಿದುಕೊಳ್ಳಲು ಹಝ್ರ‌ತ್ ಪೈಗಂಬರ್(ಸ)ರಿಗೆ ಬಯಕೆಯಿತ್ತು. (ಅರ್ರಹೀಖುಲ್ ಮಖ್ತೂಮ್, ಮೌಲಾನ ಸಫೀ ಉರ್ರಹ್ಮಾನ್ ಮುಬಾರಕ್ಪೂರಿ, ಪುಟ–285, ಅಲ್‌ಮಕ್ತಬತುಸ್ಸಲಫೀಯ ಲಾಹೋರ್) (ಫತಹ್ ಅಲ್‌ಬಾರಿ, ಸಂಪುಟ–2, ಪುಟ–201, ದಾಏರೋ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–6, ಪುಟ–139, ಬಝ್ಮ್ ಇಖ್ಬಾಲ್ ಲಾಹೋರ್, ಏಪ್ರಿಲ್ 2022) ಆದ್ದರಿಂದ ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಎಲೈ ಜನರೇ, ನನಗೆ ಸಲಹೆ ನೀಡಿರಿ. ಹಝ್ರ‌ತ್ ಪೈಗಂಬರ್(ಸ) ಇಲ್ಲಿ ಅನ್ಸಾರ್‌ಗಳನ್ನು ಉದ್ದೇಶಿಸಿ ಹೇಳಿದ್ದರು. ಬಹುಶಃ ಇದಕ್ಕಿರುವ ಒಂದು ಕಾರಣವೇನೆಂದರೆ, ಉಖ್ಬ ಬೈಅತ್ತಿನ ವೇಳೆಯಲ್ಲಿ ಅನ್ಸಾರರು ಹೀಗೆ ಹೇಳಿದ್ದರು: ಯಾ ರಸೂಲಲ್ಲಾಹ್, ನೀವು ನಮ್ಮ ಪಟ್ಟಣಕ್ಕೆ ಬರುವ ತನಕ ನಿಮ್ಮನ್ನು ನೋಡುವ ಹೊಣೆಗಾರಿಕೆ ನಮಗಿಲ್ಲ. ಆದರೆ ನೀವು ಮದೀನಕ್ಕೆ ಬಂದರೆ, ನಿಮ್ಮನ್ನು ನೋಡುವ ಹೊಣೆಗಾರಿಕೆ ನಮ್ಮದು. ನಾವು ನಮ್ಮ ಮಕ್ಕಳನ್ನು ಮತ್ತು ಪತ್ನಿಯರನ್ನು ರಕ್ಷಿಸಲು ಏನೆಲ್ಲ ಮಾಡುತ್ತೇವೆಯೋ ಅವುಗಳನ್ನೆಲ್ಲ ನಿಮಗಾಗಿ ಮಾಡುವೆವು. ಈ ಮಾತಿನಿಂದ ಮದೀನದ ಮೇಲೆ ಶತ್ರುಗಳು ಅಚಾನಕ್ಕಾಗಿ ದಾಳಿ ಮಾಡಿದರೆ ಮಾತ್ರ ಹೋರಾಡುವೆವು ಮತ್ತು ಪಟ್ಟಣದಿಂದ ಹೊರಗೆ ಹೋರಾಡುವ ಅಗತ್ಯವಿಲ್ಲವೆಂದು ಅನ್ಸಾರರು ಉದ್ದೇಶಿಸಿರುವರೋ ಎಂಬ ಶಂಕೆಯನ್ನು ಹಝ್ರ‌ತ್ ಪೈಗಂಬರ್(ಸ) ವ್ಯಕ್ತಪಡಿಸುತ್ತಿದ್ದರು. ಆದರೆ ಹಝ್ರ‌ತ್ ಪೈಗಂಬರ್(ಸ) ಪುನಃ ಸಲಹೆಯನ್ನು ಕೇಳಿದಾಗ, ಹಝ್ರ‌ತ್ ಸಅದ್ ಬಿನ್ ಮುಆಧ್(ರ) ಹೇಳಿದರು: ಯಾ ರಸೂಲಲ್ಲಾಹ್, ನೀವು ನಮ್ಮ ಅಭಿಪ್ರಾಯವನ್ನು ಕೇಳುತ್ತಿದ್ದೀರಿ ಎಂದು ತೋರುತ್ತದೆ. ಹೌದೆಂದು ಹಝ್ರ‌ತ್ ಪೈಗಂಬರ್(ಸ) ಹೇಳಿದರು. ಆಗ ಹಝ್ರ‌ತ್ ಸಅದ್(ರ) ಹೇಳಿದರು: ನಿಸ್ಸಂಶಯವಾಗಿಯೂ ನಾವು ನಿಮ್ಮ ಮೇಲೆ ವಿಶ್ವಾಸವನ್ನು ಇರಿಸಿದ್ದೇವೆ. ನೀವು ತಂದ ಧರ್ಮ ಸತ್ಯವಾಗಿದೆ ಎಂಬುದಕ್ಕೆ ನಾವು ಸಾಕ್ಷಿಗಳಾಗಿದ್ದೇವೆ. ಅದಕ್ಕಾಗಿ ನಾವು ನಿಮ್ಮೊಂದಿಗೆ ವಾಗ್ದಾನಗಳನ್ನು ಮಾಡಿದ್ದೇವೆ. ನಿಮ್ಮ ಆದೇಶಗಳನ್ನು ಆಲಿಸುವುದಾಗಿ ಮತ್ತು ಅವುಗಳನ್ನು ಪಾಲಿಸುವುದಾಗಿ ನಾವು ಸುದೃಢವಾದ ಪ್ರತಿಜ್ಞೆಯನ್ನು ಮಾಡಿದ್ದೇವೆ. ನೀವು ಇಚ್ಛಿಸುವ ಜಾಗಕ್ಕೆ ನೀವು ಹೋಗಿರಿ. ನಾವು ನಿಮ್ಮೊಂದಿಗೆ ಇರುವೆವು. ನಿಮ್ಮನ್ನು ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನ ಆಣೆ ಹಾಕಿ ಹೇಳುತ್ತೇವೆ, ನೀವು ನಮ್ಮನ್ನು ಸಮುದ್ರದ ಬಳಿಗೆ ಕೊಂಡು ಹೋಗಿ ಸ್ವತಃ ಅದಕ್ಕೆ ಧುಮುಕಿದರೆ, ನಾವು ಕೂಡ ಸಮುದ್ರಕ್ಕೆ ಧುಮುಕುವೆವು. ನಮ್ಮಲ್ಲಿ ಒಬ್ಬರು ಕೂಡ ಹಿಂದೆ ಸರಿಯಲಾರೆವು. ನೀವು ನಾಳೆ ನಮ್ಮನ್ನು ನಿಮ್ಮ ಜೊತೆಗೆ ಕೊಂಡು ಹೋಗಿ ಶತ್ರುಗಳೊಡನೆ ಹೋರಾಡುವುದನ್ನು ನಾವು ಇಷ್ಟಪಡದೇ ಇರುವುದಿಲ್ಲ. ನಾವು ಯುದ್ಧದಲ್ಲಿ ಸಹನೆ ತೋರಿಸುವವರಾಗಿರುವೆವು. ಶತ್ರುಗಳೊಡನೆ ಮುಖಾಮುಖಿಯಾಗುವಾಗ ನಾವು ನಿಷ್ಠಾವಂತರಾಗಿರುವೆವು. ನಿಮ್ಮ ಕಣ್ಣುಗಳು ತಂಪುಗೊಳ್ಳುವಂತಹ ಕಾರ್ಯಗಳನ್ನು ಅಲ್ಲಾಹನು ನಮ್ಮಿಂದ ನಿಮಗೆ ತೋರಿಸಿಕೊಡುವನು ಎಂಬ ನಂಬಿಕೆ ನಮಗಿದೆ. ಆದ್ದರಿಂದ ಅಲ್ಲಾಹನ ಅನುಗ್ರಹದೊಂದಿಗೆ ನೀವು ನಮ್ಮನ್ನು ಕೊಂಡುಹೋಗಿರಿ.

ಸಹೀಹ್ ಮುಸ್ಲಿಮಿನ ಒಂದು ವರದಿಯಲ್ಲಿ ಈ ಮಾತುಗಳನ್ನು ಹಝ್ರ‌ತ್ ಸಅದ್ ಬಿನ್ ಉಬಾದ(ರ) ಹೇಳಿರುವುದಾಗಿ ವರದಿಯಾಗಿದೆ. ಆದರೆ ಹೆಚ್ಚಿನ ವರದಿಗಳ ಪ್ರಕಾರ ಅವರು ಬದ್ರ್ ಯುದ್ಧದಲ್ಲಿ ಭಾಗಿಯಾಗಿರಲಿಲ್ಲ. ಹೇಗಿದ್ದರೂ ಇದನ್ನು ಸಅದ್ ಬಿನ್ ಮುಆಧ್(ರ) ಹೇಳಿದ್ದರು. ಹಝ್ರ‌ತ್ ಸಅದ್(ರ)ರ ಈ ಮಾತನ್ನು ಕೇಳಿ ಹಝ್ರ‌ತ್ ಪೈಗಂಬರ್(ಸ) ಬಹಳಷ್ಟು ಸಂತೋಷಗೊಂಡರು ಮತ್ತು ಹೀಗೆ ಹೇಳಿದರು: ಹೊರಟು ಹೋಗಿರಿ. ನಿಮಗೆ ಸುವಾರ್ತೆ ಇದೆ. ಎರಡು ಸಂಘಗಳಲ್ಲಿ ಒಂದು ಸಂಘದ ಮೇಲೆ ಜಯ ಗಳಿಸುವುದಾಗಿ ಅಲ್ಲಾಹನು ನನಗೆ ವಾಗ್ದಾನ ಮಾಡಿರುವನು. ಅಲ್ಲಾಹನಾಣೆ, ಶತ್ರು ಜನರು ಕೊಲ್ಲಲ್ಪಟ್ಟು ಬೀಳುವ ಜಾಗವನ್ನು ನಾನು ನೋಡುತ್ತಿದ್ದೇನೆ. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಯಾಮ್, ಪುಟ–421, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಶರಹ್ ಅಝ್ಝುರ್‌ಖಾನಿ, ಸಂಪುಟ–2, ಪುಟ–270, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಹಝ್ರ‌ತ್ ಪೈಗಂಬರ್(ಸ)ರ ಈ ಮಾತನ್ನು ಕೇಳಿ ಸಹಾಬಿಯರು ಸಂತೋಷಗೊಂಡರು. ಆದರೆ ಅವರು ಆಶ್ಚರ್ಯಗೊಂಡು ಹೀಗೆ ಕೇಳಿದರು: **ಹಲ್ ಲಾ ಝಕರ್‌ತ ಲನಲ್ ಖಿತಾಲ ವ ನಸ್ತಯಿದ್**. ಎಂದರೆ ಯಾ ರಸೂಲಲ್ಲಾಹ್, ನಿಮಗೆ ಮೊದಲೇ ಖುರೈಶಿ ಸೈನ್ಯದ ಬಗ್ಗೆ ಗೊತ್ತಿದ್ದರೆ, ನೀವು ಮದೀನದಲ್ಲೇ ಯುದ್ಧದ ಸಾಧ್ಯತೆ ಬಗ್ಗೆ ಏಕೆ ಹೇಳಲಿಲ್ಲ. ಹಾಗಿದ್ದರೆ ನಾವು ಅದರ ಸ್ವಲ್ಪ ತಯಾರಿಯನ್ನು ಮಾಡಿ ಹೊರಡುತ್ತಿದ್ದೆವು. ಹೇಗಿದ್ದರೂ ಈ ಮಾಹಿತಿ ಮತ್ತು ಸಮಾಲೋಚನೆಯ ಇದ್ದೂ ಹಾಗೂ ಎರಡು ಸಂಘಗಳಲ್ಲಿ ಒಂದರ ಮೇಲೆ ಮುಸ್ಲಿಮರು ಖಂಡಿತ ವಿಜಯ ಸಾಧಿಸುವರು ಎಂದು ಹಝ್ರ‌ತ್ ಪೈಗಂಬರ್(ಸ)ರಿಗೆ ಅಲ್ಲಾಹನ ಕಡೆಯಿಂದ ದೈವಿಕ ಸುವಾರ್ತೆ ಇದ್ದೂ ಆ ಎರಡು ಸಂಘಗಳಲ್ಲಿ ಯಾವ ಸಂಘದೊಂದಿಗೆ ಮುಸ್ಲಿಮರ ಮುಖಾಮುಖಿಯಾಗುವುದು ಎಂಬುದರ ಬಗ್ಗೆ ಸರಿಯಾಗಿ ಗೊತ್ತಿರಲಿಲ್ಲ. ಸಹಜವಾಗಿಯೇ ದುರ್ಬಲ ಸಂಘದೊಂದಿಗೆ ಹೋರಾಟ ನಡೆಸಲು ಹೆಚ್ಚು ಬಯಸುತ್ತಿದ್ದರು. (ಸಿೀರ'ತ್ ಖಾತಮನ್ನಬೀಈನ್, ಹಝ್ರ‌ತ್ ಸಾಬಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ–355, 1996 ಮುದ್ರಣ)

ಹಝ್ರ‌ತ್ ಮುಸ್ಲಿಹ್ ಮೌಊದ್(ರ.ಅ) ಹೇಳುತ್ತಾರೆ: "ಬದ್ರ್ ಸಂದರ್ಭದಲ್ಲಿ ಮದೀನದ ಹೊರಗೆ ಯುದ್ಧ ಪ್ರಾರಂಭವಾದಾಗ, ಹಝ್ರ‌ತ್ ಪೈಗಂಬರ್(ಸ) ಅವರು ಎಲ್ಲಾ ಸಹಚರರನ್ನು ಒಟ್ಟುಗೂಡಿಸಿ ಹೇಳಿದರು, 'ಓ ಜನರೇ! ನನಗೆ ಸಲಹೆ ನೀಡಿ, ಏಕೆಂದರೆ ನಾವು ಒಂದು ಕಾರವಾನ್‌ನೊಂದಿಗೆ ಯುದ್ಧವಾಡುವುದಿಲ್ಲ ಬದಲಿಗೆ ಮಕ್ಕಾದದ ಒಂದು ದೊಡ್ಡ ಸೈನ್ಯದಿಂದ ಹೋರಾಡಬೇಕಾಗುವುದು ಎಂದು ತಿಳಿಸಲಾಗಿದೆ. ಆದ್ದರಿಂದ ಮುಹಾಜಿರೀನರು ಒಬ್ಬರ ನಂತರ ಒಬ್ಬರು ಎದ್ದು ನಿಂತು ಹೇಳಿದರು ಯಾ ರಸೂಲಲ್ಲಾಹ್! ನೀವು ನಿಸ್ಸಂದೇಹವಾಗಿ ಯುದ್ಧವಾಡಿರಿ ನಾವು ನಿಮ್ಮೊಪಂದಿಗಿದ್ದೇವೆ. ಆದರೆ ಮುಹಾಜಿರೀನರು ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಿದ ನಂತರ ಕುಳಿತುಕೊಂಡಾಗಲೆಲ್ಲಾ, ರಸೂಲುಲ್ಲಾಹ್(ಸ) ಹೇಳುತ್ತಿದ್ದರು ಓ ಜನರೇ! ನನಗೆ ಸಲಹೆ ನೀಡಿ. ಮುಹಾಜಿರೀನರು ಸಲಹೆ ನೀಡುತ್ತಿದ್ದರು ಎಂದು ನಿಮ್ಮ(ಸ) ಮನಸ್ಸಿನಲ್ಲಿತ್ತು. ನಿಜವಾದ ಪ್ರಶ್ನೆ ಅನ್ಸಾರ್‌ಗಳೊಂದಿಗೆ ಇತ್ತು ಮತ್ತು ಅನ್ಸಾರ್‌ಗಳು ಮೌನವಾಗಿದ್ದರು ಏಕೆಂದರೆ ಹೋರಾಡುತ್ತಿದ್ದ ಜನರು ಮೆಕ್ಕಾ ಜನರಾಗಿದ್ದರು, ಒಂದು ವೇಳೆ ನಾವು ಮಕ್ಕಾದ ಜನರೊಂದ ವಿರುದ್ಧ ಹೋರಢಲು ಸಿದ್ಧವಾದರೆ ನಮ್ಮ ಈ ಮಾತು ಮುಹಾಜಿರೀನರಿಗೆ ನೋವನ್ನುಂಟು ಮಾಡಬಹುದು ಏಕೆಂದರೆ ಈ ಜನರು ನಮ್ಮ ಸಹೋದರರ ಕತ್ತು ಕತ್ತರಿಸಲು ಮುಂದೆ ಹೋಗುತ್ತಿದ್ದಾರೆ ಎಂದು ಭಾವಿಸ ಬಹುದು ಎಂದು ಸಲಹೆ ನೀಡುತ್ತಿರಲಿಲ್ಲ. ಆದರೆ ಹಝ್ರ‌ತ್ ಪೈಗಂಬರ್(ಸ.ಅ) ರವರು ಪದೇ ಪದೇ ಹೇಳಿದರು, "ಓ ಜನರೇ! ನನಗೆ ಸಲಹೆ ನೀಡಿ, ಆಗ ಒಬ್ಬ ಅನ್ಸಾರಿ ಎದ್ದುನಿಂತು ಹೇಳಿದರು, ಯಾ ರಸೂಲಲ್ಲಾಹ್! ನೀವು ಸಲಹೆ ಪಡೆಯುತ್ತಿದ್ದೀರಿ. ಒಬ್ಬರ ನಂತರ ಒಬ್ಬರಂತೆ, ಮತ್ತೊಬ್ಬ ಮುಹಾಜಿರೀನರು ಎದ್ದುನಿಂತು, ಯಾ ರಸೂಲಲ್ಲಾಹ್! ನಿಸ್ಸಂದೇಹವಾಗಿ ನೀವು ಯುದ್ಧವಾಡಿರಿ ನಾವು ನಿಮ್ಮೊಂದಿಗೆ ಇದ್ದೇವೆ ಎಂದು ಸಲಹೆಗಳನ್ನು ಪಡೆಯುತ್ತಿದ್ದೀರಿ ಆದರೆ ನೀವು ಓ ಜನರೇ ಎಂದು ಪದೇ ಪದೇ ಹೇಳುತ್ತಿದ್ದೀರಿ! ನನಗೆ ಸಲಹೆ ನೀಡಿ. ಈ ಮೂಲಕ, ನೀವು ಬಹುಶಃ ನಮ್ಮನ್ನು ಅನ್ಸಾರ್‌ಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದೀರಿ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಇದು ಸರಿ. ಅದಕ್ಕೆ ಅವರು ಹೇಳಿದರು, ಯಾ ರಸೂಲಲ್ಲಾಹ್! ನಮ್ಮ ಮುಹಾಜಿರ್ ಸಹೋದರರು ತಮ್ಮ ಹೃದಯವನ್ನು ನೋಯಿಸಬಾರದು ಎಂಬ ಭಯದಿಂದ ನಾವು ಮೌನವಾಗಿದ್ದೇವೆ. ನಾವು ಹೋರಾಡಲು ಸಿದ್ಧ ಎಂದು ಹೇಳಿದರೆ, ಅವರು ನಮ್ಮ ಸಹೋದರರನ್ನು ಮತ್ತು ಸಂಬಂಧಿಕರನ್ನು ಕೊಲ್ಲಲು ಯೋಜಿಸುತ್ತಿದ್ದಾರೆ ಎಂದು ಅವರು ಭಾವಿಸುತ್ತಾರೆ. ಆಗ ಅವರು ಹೇಳಿದರು, ಯಾ ರಸೂಲಲ್ಲಾಹ್(ಸ)! ಬಹುಶಃ ನೀವು ಬೈಅತ್–ಎ–ಉಖ್ಬಾವನ್ನು ಉಲ್ಲೇಖಿಸುತ್ತಿದ್ದೀರಿ, ಇದರಲ್ಲಿ ಶತ್ರುಗಳು ಮದೀನಾದ ಮೇಲೆ ದಾಳಿ ಮಾಡಿದರೆ ನಾವು ನಿಮಗೆ ಬೆಂಬಲ ನೀಡುತ್ತೇವೆ, ಆದರೆ ನಾವು ಮದೀನಾದಿಂದ ಹೊರಗೆ ಹೋಗಿ ಹೋರಾಡಬೇಕಾದರೆ ನಮ್ಮ ಮೇಲೆ ಯಾವುದೇ ನಿರ್ಬಂಧವಿಲ್ಲ ಎಂದು. ಹಝ್ರ‌ತ್ ಪೈಗಂಬರ್(ಸ) ಹೌದು ಎಂದು ಹೇಳಿದರು. ನಾವು ಆ ಒಪ್ಪಂದವನ್ನು ಮಾಡಿಕೊಳ್ಳುವ ಸಮಯದಲ್ಲಿ, ನಿಮ್ಮ ಮಹಿಮೆ ಏನು ಎಂದು ನಮಗೆ "ಸರಿಯಾಗಿ" ತಿಳಿದಿರಲಿಲ್ಲ.

ಯಾ ರಸೂಲಲ್ಲಾಹ್! ಈಗ ನಿಮ್ಮ ಪ್ರಾಮಾಣಿಕತೆ ನಮಗೆ ಸ್ಪಷ್ಟವಾಯಿತು ಮತ್ತು ನಿಮ್ಮ ನಿಲುವು ನಮಗೆ ಸ್ಪಷ್ಟವಾಗಿದೆ, ಈಗ ಯಾವುದೇ ಒಪ್ಪಂದದ ಪ್ರಶ್ನೆ ಏನು? ಸಮುದ್ರವು ನಿಮ್ಮ ಮುಂದೆ ಇದೆ, ನೀವು ಆದೇಶಿಸಿದರೆ, ನಮ್ಮ ಕುದುರೆಗಳನ್ನು ಅದರಲ್ಲಿ ಹಾಕಲು ನಾವು ಸಿದ್ಧರಿದ್ದೇವೆ ಮತ್ತು ಯುದ್ಧ ನಡೆದರೆ, ಅಲ್ಲಾಹನಾಣೆ, ನಾವು ನಿಮ್ಮ ಬಲಗಡೆಯಿಂದಲೂ ಎಡಗಡೆಯಿಂದಲೂ ಮುಂದಿನಿಂದಲೂ ಹಿಂದಿನಿಂದಲೂ ಹೋರಾಡುವೆವು. ನಮ್ಮ ಶವಶರೀರವನ್ನು ತುಳಿಯದೇ ಶತ್ರುಗಳು ನಿಮ್ಮ ತನಕ ತಲುಪಲು ಸಾಧ್ಯವಲ್ಲ. (ಸೈರೆ ರೂಹಾನಿ, ಸಂಪುಟ–4, ಅನ್ವರ್ ಉಲ್ ಉಲೂಮ್, ಸಂಪುಟ–19, ಪುಟಗಳು 532–533)

ಈ ಸಮಾಲೋಚನೆಯ ನಂತರ ಹಝ್ರ‌ತ್ ಪೈಗಂಬರ್(ಸ) ಅಲ್ಲಿಂದ ಹೊರಟರು ಮತ್ತು ವಿವಿಧ ಮಾರ್ಗಗಳಿಂದ ಸಾಗುತ್ತಾ ಬದ್ರ್ ಮೈದಾನದ ಸಮೀಪಕ್ಕೆ ತಲುಪಿದರು.

ಬದ್ರ್ ಪ್ರದೇಶವು ಮದೀನದಿಂದ ನೂರೈವತ್ತು ಕಿ.ಮಿ. ದೂರದಲ್ಲಿ ಇದೆ. ಇದು ಐದುವರೆ ಮೈಲು ಉದ್ದ ಮತ್ತು ನಾಲ್ಕು ಮೈಲು ಅಗಲವಿರುವ ಮೊಟ್ಟೆಯ ಆಕಾರದ ಒಂದು ಮರುಭೂಮಿ ಮೈದಾನವಾಗಿದೆ. ಅದರ ಸುತ್ತಮುತ್ತ ಎತ್ತರದ ಬೆಟ್ಟಗಳಿವೆ. ಅದರಲ್ಲಿ ಅನೇಕ ಬಾವಿಗಳು ಮತ್ತು ತೋಟಗಳು ಕೂಡ ಇದ್ದುವು. ಅಲ್ಲಿ ವ್ಯಾಪಾರಿ ಸಂಘಗಳು ಸಾಮಾನ್ಯವಾಗಿ ಡೇರೆ ಹಾಕುತ್ತಿದ್ದುವು. ಬದ್ರ್ ಮೈದಾನದ ಸಮೀಪ ತಲುಪಿ ಸ್ವಲ್ಪ ಸಮಯವಾದಾಗ ಹಝ್ರ‌ತ್ ಪೈಗಂಬರ್(ಸ) ಮತ್ತು ಹಝ್ರ‌ತ್ ಅಬೂಬಕರ್(ರ) ಸವಾರರಾಗಿ ಅಲ್ಲಿಂದ ಹೊರಟರು. ಕೊನೆಗೆ ಅರೇಬಿಯನಾದ ಒಬ್ಬ ಮುದುಕನ ಸಮೀಪಕ್ಕೆ ಹೋಗಿ ನಿಂತರು. ಯಾರೆಂದು ತಿಳಿಸದೇ, ಅವರೊಡನೆ ಖುರೈಶಿಯರ ಬಗ್ಗೆ, ಮುಹಮ್ಮದ್(ಸ)ರ ಬಗ್ಗೆ, ಅವರ ಸಂಗಡಿಗರ ಕುರಿತು ಕೇಳಿದರು. ಮುದುಕ ಹೇಳಿದನು: ನೀವು ಯಾವ ಗೋತ್ರದವರು ಎಂದು ಹೇಳಿದರೆ, ನಾನು ಮಾಹಿತಿಗಳನ್ನು ಹೇಳುತ್ತೇನೆ. ಹಝ್ರ‌ತ್ ಪೈಗಂಬರ್(ಸ) ಹೇಳಿದರು: ನೀವು ಹೇಳಿದರೆ, ನಾವು ನಮ್ಮ ಬಗ್ಗೆ ಹೇಳುವೆವು. ಮುದುಕನು

ಹೇಳಿದನು: ಮುಹಮ್ಮದ್(ಸ) ಮತ್ತು ಅವರ ಸಂಗಡಿಗರು ಇಂತಿಂತಹ ದಿನದಲ್ಲಿ ಹೊರಟಿರುವವರು ಎಂದು ನನಗೆ ಗೊತ್ತಾಗಿದೆ. ನನಗೆ ಮಾಹಿತಿ ಕೊಟ್ಟವರು ಸತ್ಯವಾಗಿ ಹೇಳಿದ್ದರೆ, ಅವರು ಇಂದು ಇಂತಹ ಸ್ಥಳದಲ್ಲಿ ಇರುವರು. ಹೀಗೆ ಹಝ್ರತ್ ಪೈಗಂಬರ್(ಸ) ಇದ್ದ ಸ್ಥಳದ ಹೆಸರನ್ನು ಹೇಳಿದನು. ಅನಂತರ ಹೇಳಿದನು: ಖುರೈಶಿಗಳು ಇಂತಿಂತಹ ದಿನದಲ್ಲಿ ಹೊರಟಿರುವವರು. ಮಾಹಿತಿ ತಂದವರು ಸತ್ಯವನ್ನು ಹೇಳಿರುವುದಾದರೆ, ಅವರು ಈಗ ಇಂತಿಂತಹ ಸ್ಥಳದಲ್ಲಿ ಇರುವರು. ಖುರೈಶಿಗಳು ತಲುಪಿದ ಜಾಗದ ಹೆಸರನ್ನು ಮುದುಕ ಹೇಳಿದನು. ಎರಡೂ ಸಂಗತಿಗಳನ್ನು ಅವನು ಸರಿಯಾಗಿಯೇ ಹೇಳಿದನು. ಅವನು ತನ್ನ ಮಾತುಗಳನ್ನು ಮುಗಿಸಿದಾಗ, **"ನೀವು ಯಾರಿಂದ ಬಂದವರು?"** ಎಂದು ಕೇಳಿದನು.

ಹಝ್ರತ್ ಪೈಗಂಬರ್(ಸ) ರವರು ಹೇಳಿದರು: ನಾವು ನೀರಿನಿಂದ ಬಂದವರು ಎಂದು ಹೇಳಿ ರಸೂಲುಲ್ಲಾಹ್(ಸ) ಅವರು ಅವನಿಂದ ಹಿಂತಿರುಗಿದರು. ಆತನು ಹೇಳಯೊಡಗಿದನು ನೀರಿನಿಂದ? ಇದರ ಅರ್ಥವೇನು? ಇರಾಖ್ ನೀರಿನಿಂದ ಬಂದಿರುವರೇ? ನಿಮ್ಮ ಈ ಉತ್ತರವು ಬಹಳ ಸಮಂಜಸವೆನಿಸುತ್ತದೆ. ಇದನ್ನು ಇತಿಹಾಸಕಾರರು ಕೂಡ ಚರ್ಚಿಸಿದ್ದಾರೆ. ನಮ್ಮ ಉಲ್ಲೇಖದಾರರು ವಿವಿಧ ಇತಿಹಾಸಕಾರರಿಂದ ಈ ಬಗ್ಗೆ ವಿವರಣೆಯನ್ನು ಸಹ ನೀಡಿದ್ದಾರೆ, ನಾನು ಅದರ ಸಾರಾಂಶವನ್ನು ಇಲ್ಲಿ ನೀಡುತ್ತೇನೆ. ಹಝ್ರತ್ ಪೈಗಂಬರ್(ಸ.ಅ) ರವರು ವಾಗ್ದಾನದಂತೆ ಸರಿಯಾದ ಉತ್ತರವನ್ನು ನೀಡಲಿಲ್ಲ ಎಂದು ತೋರುತ್ತದೆ ಎಂದು ಇತಿಹಾಸಕಾರರು ಪ್ರಶ್ನೆಯನ್ನು ಎತ್ತಿದ್ದಾರೆ. ಹಝ್ರತ್ ಪೈಗಂಬರ್(ಸ) ಅವರಿಗೆ ತಪ್ಪು ಉತ್ತರವನ್ನು ನೀಡಿಲ್ಲ ಎಂದು ಲೇಖಕರು ಉತ್ತರಿಸುತ್ತಾರೆ. ಹೌದು, ಇದು ಸುಳ್ಳು ಅಲ್ಲ ಎಂಬುದಕ್ಕೆ ನೀವು ಈ ಅರ್ಥಪೂರ್ಣ ಉತ್ತರವನ್ನು ನೀಡಿದ್ದೀರಿ ಮತ್ತು ಈ ಅಪಾಯಕಾರಿ ಯುದ್ಧದ ಪರಿಸ್ಥಿತಿಯಲ್ಲಿ ನೀವು ನಿರ್ದಿಷ್ಟ ಸ್ಥಳದ ವಿಳಾಸವನ್ನು ಸಹ ನೀಡಲಿಲ್ಲ, ಏಕೆಂದರೆ ಹಝ್ರತ್ ಪೈಗಂಬರ್(ಸ) ರವರು ನಾವು ನೀರಿನಿಂದ ಬಂದಿದ್ದೇವೆ ಎಂದು ಅವರು ಹೇಳಿದರು, ಅವರು ಅದನ್ನು ಅರ್ಥೈಸಿದರು. ನಾವು ನೀರಿನಿಂದ ಪ್ರತಿ ಜೀವಿಯನ್ನು ಸೃಷ್ಟಿಸಿದ್ದೇವೆ ಎಂಬುದು ಪವಿತ್ರ ಖುರ್‌ಆನ್‌ನ ಹೇಳಿಕೆಯಾಗಿದೆ. ಇದು ಜೀವನಚರಿತ್ರೆಕಾರರಿಂದ ಬರೆಯಲ್ಪಟ್ಟಿದೆ. ಇದು ಅಬುಬಕರ್ ಜಾಬಿರ್ ಅಲ್-ಜಝಾಇರ್ ಆಗಿದ್ದಾರೆ, ಒಬ್ಬ ಅರಬ್ ಮಾರ್ಗವೆಂದರೆ ಜನರು ವಾಸಿಸುವ ಸ್ಥಳ, ಅವರು ನೀರಿನ ಹೆಸರಿನಿಂದ ಹೇಳುತ್ತಿದ್ದರು, ಅಂದರೆ ಚಿಲುಮೆ ಇತ್ಯಾದಿ. ಅಂತಹ ಪ್ರದೇಶ. ಇದು ಅಲ್ಲಮಾ ಬುರ್ಹಾನ್ ಹಲಬಿ, ಅವರು ಇದನ್ನು ಬರೆದಿದ್ದಾರೆ. ಈ ಮುದುಕ ಹೇಳಿದಂತೆ ಬದ್ರ್‌ನ ಅದೇ ನೀರಿನ ಬಗ್ಗೆ ಅಂದರೆ ಅವರು ತಂಗಿದ್ದ ಬುಗ್ಗೆಯ ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದರು ಎಂದು ಇದರಲ್ಲಿ ವಿವರಣೆ ಇರಬಹುದು, ಆದರೆ ಸೂಚನೆಯು ಇರಾಕ್‌ನ ದಿಕ್ಕನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಬದ್ರ್‌ನ ವಸಂತ ಮತ್ತು ಇರಾಕ್‌ನ ದಿಕ್ಕು ಒಂದೇ ಕಡೆ ಇರಬೇಕು ಎಂದು ಅವರು ಹೇಳಿದರು. ಆದಾಗ್ಯೂ, ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ.

ಅನಂತರ ಹಝ್ರತ್ ಪೈಗಂಬರ್(ಸ) ಸಹಾಬಿಯರ ಬಳಿಗೆ ಹೋದರು. ಸಂಜೆಯಾದಾಗ ಮಾಹಿತಿ ಪಡೆಯಲಿಕ್ಕಾಗಿ ಹಝ್ರತ್ ಅಲಿ(ರ), ಹಝ್ರತ್ ಝುಬೇರ್(ರ) ಮತ್ತು ಹಝ್ರತ್ ಸಅದ್ ಬಿನ್ ವಖಾಸ್(ರ)ರನ್ನು ಹಝ್ರತ್ ಪೈಗಂಬರ್(ಸ) ಕೆಲವು ಸಹಾಬಿಯರ ಜೊತೆಗೆ ಬದ್ರಿನ ಚಿಲುಮೆಯ ಕಡೆಗೆ ಕಳುಹಿಸಿದರು. ಅವರು ಇಬ್ಬರು ಗುಲಾಮರನ್ನು ಕಂಡರು. ಗುಲಾಮರನ್ನು ಹಿಡಿದುಕೊಂಡು ಬಂದು ಅವರಿಬ್ಬರೊಡನೆ ಪ್ರಶ್ನೆಗಳನ್ನು ಕೇಳಿದರು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ನಮಾಝ್ ನಿರ್ವಹಿಸುತ್ತಿದ್ದರು. ನಾವು ಖುರೈಶಿಗಳಿಗೆ ನೀರನ್ನು ಕೊಂಡು ಹೋಗುವವರಾಗಿರುವೆವು, ಖುರೈಶಿಗಳು ನಮ್ಮನ್ನು ನೀರನ್ನು ತರಲು ಕಳುಹಿಸಿರುವರು ಎಂದು ಅವರಿಬ್ಬರೂ ಹೇಳಿದರು. ಸಹಾಬಿಯರು ಅವರ ಮಾತನ್ನು ನಂಬಲಿಲ್ಲ. ಬಹುಶಃ ಅವರಿಬ್ಬರೂ ಅಬೂಸುಫ್ಯಾನಿನ ನೌಕರರು ಎಂದು ಭಾವಿಸಿಕೊಂಡು ಅವರಿಬ್ಬರನ್ನು ಗದರಿಸಿದರು ಮತ್ತು ಹೊಡೆದರು. ಬಹಳ ತೊಂದರೆ ಕೊಟ್ಟಾಗ, ಅವರು ಹೇಳಿದರು: ಹೌದು ನಾವು ಅಬೂಸುಫ್ಯಾನಿನ ನೌಕರರಾಗಿರುವೆವು. ಆಗ ಸಹಾಬಿಯರು ಅವರಿಬ್ಬರನ್ನು ಬಿಟ್ಟರು. ಹಝ್ರತ್ ಪೈಗಂಬರ್(ಸ) ನಮಾಝ್ ಮುಗಿಸಿದ ನಂತರ ಹೇಳಿದರು: ಅವರಿಬ್ಬರೂ ಸತ್ಯ ಹೇಳಿದಾಗ ನೀವು ಅವರಿಬ್ಬರನ್ನು ಹೊಡೆದಿರಿ. ಅವರಿಬ್ಬರೂ ಸುಳ್ಳು ಹೇಳಿದಾಗ ನೀವು ಅವರನ್ನು ಬಿಟ್ಟು ಬಿಟ್ಟಿರಿ. ಅವರು ಸತ್ಯವೇ ಹೇಳಿದ್ದರು. ಅವರು ನಿಶ್ಚಯವಾಗಿಯೂ ಖುರೈಶಿಗಳ ಗುಲಾಮರಾಗಿರುವರು. ಅನಂತರ ಅವರಿಬ್ಬರನ್ನು ಸಂಬೋಧಿಸಿಕೊಂಡು ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಖುರೈಶಿಗಳ ಬಗ್ಗೆ ಹೇಳಿಕೊಡಿರಿ. ಅವರಿಬ್ಬರು ಹೇಳಿದರು: ಖುರೈಶಿಗಳು ಈ ಪರ್ವತದ ಹಿಂದೆ ಕಣಿವೆಯ ಆಚೆ ಡೇರೆ ಹಾಕಿಕೊಂಡು ಇರುವರು. ಹಝ್ರತ್ ಪೈಗಂಬರ್(ಸ) ಕೇಳಿದರು: ಅವರು ಎಷ್ಟು ಜನರು ಇರುವರು. ಅವರು ಬಹಳಷ್ಟು ಇರುವರು ಎಂದು ಅವರು ಹೇಳಿದರು. ಅವರ ಸಂಖ್ಯೆ ಎಷ್ಟು ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ನಮಗೆ ಗೊತ್ತಿಲ್ಲವೆಂದು ಅವರು ಹೇಳಿದರು. ಹಝ್ರತ್ ಪೈಗಂಬರ್(ಸ) ಕೇಳಿದರು: ಅವರು ದಿನಾಲೂ ಊಟಕ್ಕಾಗಿ ಎಷ್ಟು ಒಂಟೆಗಳನ್ನು ಕೊಯ್ಯುತ್ತಾರೆ. ಕೆಲವೊಮ್ಮೆ ಒಂಬತ್ತು, ಕೆಲವೊಮ್ಮೆ ಹತ್ತು ಎಂದು ಅವರು ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರು ಸಾವಿರದಷ್ಟು ಇರಬಹುದು.

ಅನಂತರ ಹಝ್ರತ್ ಪೈಗಂಬರ್(ಸ) ಕೇಳಿದರು: ಅವರ ನಡುವೆ ಖುರೈಶಿ ಸರದಾರರಲ್ಲಿ ಯಾರೆಲ್ಲ ಇರುವರು? ಅವರು ಅಬೂಜಹಲ್, ಉತ್ಬ, ಶೈಬ, ಹಕೀಂ ಬಿನ್ ಜಝಾಮ್, ಉಮಯ್ಯ ಬಿನ್ ಖಲ್ಫ್ ಮುಂತಾದವರ ಹೆಸರನ್ನು ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಸಂಬೋಧಿಸುತ್ತಾ ಹೇಳಿದರು: **ಹಾಝಾ ಮಕ್ಕತು ಖದ್ ಅಲ್‌ಖತ್ ಇಲೈಕುಮ್ ಅಫ್‌ಲಕಬಿದಿಹಾ** ಮಕ್ಕಾದವರು ತಮ್ಮ ಕರುಳಿನ ತುಣುಕುಗಳನ್ನು ನಿಮ್ಮ ಮುಂದೆ ತೆಗೆದು ಹಾಕಿರುವರು.

(ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ-421-422, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ಅಟ್ಲಸ್ ಸೀರತುನ್ನಬವಿ, ಪುಟ-216, ದಾರುಸ್ಸಲಾಮ್ ರಿಯಾಝ್ 1421ಹಿ) (ಸೀರತ್ ಹಬೀಬ್ ದೊ ಆಲಮ್, ಅಬೂಬಕರ್ ಜಾಬಿರ್ ಅಲ್‌ಜಝಾಎರಿ, ಉರ್ದು ಅನುವಾದ, ಪುಟ-185, ಝಿಂಯಾಉಲ್ ಖುರ್‌ಆನ್ ಪಬ್ಲಿಕೇಷನ್ಸ್ ಲಾಹೋರ್ 2015) (ಗ್ಝುವಾತುನ್ನಬೀ(ಸ), ಅಲ್ಲಾಮ ಬಿರ್ಹಾನ್ ಹಲಬಿ, ಅನುವಾದಕ, ಪುಟ-81, ದಾರುಲ್ ಇಶಾಅತ್ ಕರಾಚಿ 2001)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಇದರ ಬಗ್ಗೆ ಟಿಪ್ಪಣಿ ಬರೆದಿರುವರು: ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಸಂಬೋಧಿಸುತ್ತಾ ಹೇಳಿದರು: **ಹಾಝಾ ಮಕ್ಕತು ಖದ್ ಅಲ್‌ಖತ್ ಇಲೈಕುಮ್ ಅಫ್ಲಾಝು ಕಬಿದಿಹಾ** ಅಂದರೆ: ನೋಡಿರಿ, ಮಕ್ಕಾ, ಕರುಳಿನ ತುಂಡುಗಳನ್ನು ಹೊರಗೆ ಹಾಕಿ ನಿಮ್ಮ ಮುಂದೆ ಹಾಕಿರುವರು. ಇದು ಹಝ್ರತ್ ಪೈಗಂಬರ್(ಸ)ರ ನಾಲಗೆಯಿಂದ ಅಚಾನಕ್ಕಾಗಿ ಹೊರಟ ಅತ್ಯಂತ ವಿವೇಕಯುತ ಮತ್ತು ಯುಕ್ತಿಪರವಾದ ಮಾತಾಗಿದೆ. ಖುರೈಶಿಗಳ ಇಷ್ಟು ಪ್ರಸಿದ್ಧ ಸರದಾರರ ಹೆಸರನ್ನು ಕೇಳಿ ಮುಸ್ಲಿಮರಲ್ಲಿ ದುರ್ಬಲರು ಭಯಗೊಳ್ಳಬಹುದಾಗಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರ ಈ ಮಾತು ಅವರ ಯೋಚನೆಯನ್ನು ಒಂದೇ ಸವನೆ ಬದಲಿಸಿತು. ಖುರೈಶಿನ ಈ ಸರದಾರರನ್ನು ಅಲ್ಲಾಹನು ಮುಸ್ಲಿಮರಿಗೆ ಬೇಟೆ ಮಾಡಲು ಒದಗಿಸಿ ಕೊಟ್ಟಿದ್ದಾನೆ ಎಂಬ ಯೋಚನೆ ಅವರಿಗೆ ಉಂಟಾಯಿತು. (ಸೀರತ್ ಖಾತಮುನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಃಇಬ್ ಎಂ.ಎ(ರ), ಪುಟ-356, 1996 ಮುದ್ರಣ)

ಅನಂತರ ಹಝ್ರತ್ ಪೈಗಂಬರ್(ಸ) ತನ್ನ ಸೈನ್ಯದೊಂದಿಗೆ ಬದ್ರಿನ ಸಮೀಪವಿರುವ ಕಾರಂಜಿಯ ಬಳಿಗೆ ತಲುಪಿದರು. ಹೀಗೆ ಇಶಾ ಸಮಯದಲ್ಲಿ, ಅವರು ಬದ್ರ್ನ ಹತ್ತಿರದ ಚಿಲುಮೆಗೆ ಇಳಿದರು. (ಅರ್ರಹೀಖುಲ್ ಮಖ್ತೂಮ್, ಮೌಲಾನ ಸಫೀ ಉರ್ರಹ್ಮಾನ್ ಮುಬಾರಕ್ಪೂರಿ, ಪುಟ-288, ಅಲ್ ಮಕ್ತಬತುಸ್ಸಲಫೀಯ ಲಾಹೋರ್)

ಈ ಸಂದರ್ಭದಲ್ಲಿ ಹಝ್ರತ್ ಹಬ್ಬಾಬ್ ಬಿನ್ ಮುಂಧಿರ್(ರ) ಒಂದು ಸಲಹೆಯನ್ನು ನೀಡಿದ್ದರು. ಹಝ್ರತ್ ಪೈಗಂಬರ್(ಸ) ಬದ್ರಿನ ಸಮೀಪದ ಚಿಲುಮೆಯ ಬಳಿ ತಂಗಿದಾಗ ಹಝ್ರತ್ ಹಬ್ಬಾಬ್ ಬಿನ್ ಮುಂಧಿರ್(ರ) ಕೇಳಿದರು: ಯಾ ರಸೂಲಲ್ಲಾಹ್, ನೀವು ಅಲ್ಲಾಹನ ಆದೇಶದ ಪ್ರಕಾರ ಈ ಜಾಗದಲ್ಲಿ ತಂಗಿರುವಿರೋ ಅಥವಾ ಇದು ಕೇವಲ ನಿಮ್ಮ ಅಭಿಪ್ರಾಯ ಅಥವಾ ಯುದ್ಧತಂತ್ರವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಇದು ಯುದ್ಧತಂತ್ರವಾಗಿದೆ. ಅವರು ಹೇಳಿದರು: ಹಾಗಾದರೆ ಈ ಜಾಗ ಅನುಯೋಜ್ಯವಲ್ಲ. ಶತ್ರುಗಳ ನೀರು ಇರುವ ಸಮೀಪದಲ್ಲಿ ತಂಗಬೇಕು ಮತ್ತು ಎಲ್ಲ ಬಾವಿಗಳನ್ನು ಮುಚ್ಚಬೇಕು ಮತ್ತು ನಮಗಾಗಿ ಒಂದು ಕೊಳದಲ್ಲಿ ನೀರು ತುಂಬಬೇಕು. ನಾವು ಶತ್ರುಗಳೊಡನೆ ಯುದ್ಧ ಮಾಡುವಾಗ ನಮಗೆ ನೀರು ಲಭಿಸುವುದು ಮತ್ತು ಶತ್ರುಗಳಿಗೆ ನೀರು ಲಭಿಸದು. ಈ ಸಲಹೆಯನ್ನು ಹಝ್ರತ್ ಪೈಗಂಬರ್(ಸ) ಇಷ್ಟಪಟ್ಟರು ಮತ್ತು ಶತ್ರುಗಳ ಅತ್ಯಂತ ಸಮೀಪವಿರುವ ಬಾವಿಗಳ ಬಳಿ ಡೇರೆ ಹಾಕಿದರು. ಇತರ ಬಾವಿಗಳನ್ನು ಮುಚ್ಚಲಾಯಿತು ಮತ್ತು ಒಂದು ಕೊಳವನ್ನು ತಯಾರಿಸಿ ಅದರಲ್ಲಿ ನೀರನ್ನು ತುಂಬಲಾಯಿತು. ಇದು ಸೀರತ್ ಇಬ್ನೆ ಹಶ್ಶಾಮ್‌ನ ಉಲ್ಲೇಖವಾಗಿದೆ. (ಸೀರತ್ ಇಬ್ನೆ ಹಿಶ್ಶಾಮ್, ಪುಟ-424, ದರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಸ್ಥಳದ ಆಯ್ಕೆಯ ನಂತರ ಹಝ್ರತ್ ಪೈಗಂಬರ್(ಸ) ರವರ ನಿವಾಸಕ್ಕೆ ಸ್ಥಳವನ್ನು ಸಿದ್ಧಪಡಿಸುವ ಹಂತವಿತ್ತು. ಔಸ್ ಗೋತ್ರದ ಸರದಾರ ಸಅದ್ ಬಿನ್ ಮುಆದ್(ರ)ರ ಸಲಹೆ ಪ್ರಕಾರ ಮೈದಾನದ ಒಂದು ಭಾಗದಲ್ಲಿ ಹಝ್ರತ್ ಪೈಗಂಬರ್(ಸ)ರಿಗಾಗಿ ಒಂದು ಚಪ್ಪರವನ್ನು ತಯಾರು ಮಾಡಲಾಯಿತು. ಹಝ್ರತ್ ಸಾಅದ್ ಬಿನ್ ಮುಆಝ್(ರ) ರವರು ಹುಝೂರ್(ಸ)ರವರಿಗೆ ಹೇಳಿದರು ಯಾ ರಸೂಲಲ್ಲಾಹ್! ನಾನು ನಿಮಗೋಸ್ಕರ ನಿಮ್ಮ ವಿಶ್ರಾಂತಿಗಾಗಿ ಚಪ್ಪರವನ್ನು ತಯಾರು ಮಾಡುತ್ತೇವೆ? (ಸೀರತ್ ಹಲಬೀಯ, ಸಂಪುಟ-2, ಪುಟ-213, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ರವರು ಈ ವಿಷಯದಲ್ಲಿ ವಿವರಿಸಿರುವ ವಿವರವನ್ನು ಈ ಹಿಂದೆ ಒಮ್ಮೆ ವಿವರಿಸಲಾಗಿದೆ, ಆದರೆ ಅದನ್ನು ಇಲ್ಲಿ ವಿವರಿಸಬೇಕಾಗಿದೆ, ಔಸ್ ಗೋತ್ರದ ಸರದಾರರಾದ ಹಝ್ರತ್ ಸಅದ್ ಬಿನ್ ಮುಆಝ್(ರ) ರವರ ಸಲಹೆ ಪ್ರಕಾರ ಮೈದಾನದ ಒಂದು ಭಾಗದಲ್ಲಿ ಹಝ್ರತ್ ಪೈಗಂಬರ್(ಸ) ಅವರಿಗಾಗಿ ಚಪ್ಪರವನ್ನು ತಯಾರು ಮಾಡಲಾಯಿತು.

ಅವರಿಗಾಗಿ ಸವಾರಿ ಮೃಗವನ್ನು ಕೂಡ ಅಲ್ಲಿ ಕಟ್ಟಲಾಯಿತು. ಅವರು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನೀವಿಲ್ಲಿ ತಂಗಿರಿ ಮತ್ತು ನಾವು ಯುದ್ಧ ಮಾಡುವೆವು. ನಾವು ಪರಾಜಿತರಾದರೆ, ನೀವು ಈ ಸವಾರಿಯಲ್ಲಿ ಮದೀನಕ್ಕೆ ಹೋಗಿರಿ. ಅಲ್ಲಿ ಪ್ರಾಮಾಣಿಕತೆಯಲ್ಲಿ ನಮಗಿಂತ ಕಡಿಮೆಯಿಲ್ಲದ ನಮ್ಮ ಸಹೋದರರೂ ಇದ್ದಾರೆ ಅವರು ನಿಮ್ಮ ಸಂರಕ್ಷಣೆ ಮಾಡುವರು. ಆದರೆ ಈ ಅಭಿಯಾನದಲ್ಲಿ ಯುದ್ಧ ಸಂಭವಿಸುತ್ತದೆ ಎಂದು ಅವರು ಭಾವಿಸದ ಕಾರಣ ಅವರು ನಮ್ಮೊಂದಿಗೆ ಬರಲಿಲ್ಲ, ಇಲ್ಲದಿದ್ದರೆ ಅವರು ಹಿಂದೆ ಉಳಿಯುತ್ತಿರಲಿಲ್ಲ, ಆದರೆ ಅವರಿಗೆ ಪರಿಸ್ಥಿತಿಯ ಟರಿವಾದಾಗ ಅವರು ನಿಮ್ಮ ರಕ್ಷಣೆಯಲ್ಲಿ ತಮ್ಮ ಪ್ರಾಣಕ್ಕಾಗಿ ಹೋರಾಡಲು ಹಿಂಜರಿಯುವುದಿಲ್ಲ. ಇದು ಸಅದ್(ರ) ಅವರ ಪ್ರಾಮಾಣಿಕತೆಯಾಗಿತ್ತು ಅದು ಪ್ರತಿ ಸಂದರ್ಭದಲ್ಲೂ ಪ್ರಶಂಸನೀಯವಾಗಿದೆ. ಇಲ್ಲವಾದರೆ ದೇವರ ಪ್ರವಾದಿಯವರು ಮೈದಾನದಿಂದ ಓಡಿಹೋಗುವನೇ, ಇದು ಹೇಗೆ ಸಂಭವಿಸುತ್ತದೆ? "ಹಾಗಾಗಿ ಹುನೈನ್ ಮೈದಾನದಲ್ಲಿ, ನಾವು ಹನ್ನೆರಡು ಸಾವಿರ ಸೈನಿಕರು ಬೆನ್ನು ತಿರುಗಿಸಿರುವುದನ್ನು ನಾವು ನೋಡಿದ್ದೇವೆ, ಆದರೆ ಈ ತೌಹೀದ್ ಕೇಂದ್ರವಾಗಿದೆ ಅಂದರೆ, ಹಝ್ರತ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ತಮ್ಮ ಸ್ಥಳದಿಂದ ಕದಲಲಿಲ್ಲ. ಆದಾಗ್ಯೂ, ಚಪ್ಪರವನ್ನು ಸಿದ್ಧಪಡಿಸಲಾಯಿತು ಮತ್ತು ಸಅದ್ ಮತ್ತು ಇತರ ಕೆಲವು ಅನ್ಸಾರ್‌ಗಳು ಅದರ ಸುತ್ತಲೂ ಕಾವಲು ಕಾಯುತ್ತಿದ್ದರು. ಹಝ್ರತ್ ಪೈಗಂಬರ್ (ಸ.ಅ) ಮತ್ತು ಹಝ್ರತ್ ಅಬುಬಕರ್(ರ.ಅ) ಅದೇ ಚಪ್ಪರದಲ್ಲಿ ರಾತ್ರಿಯನ್ನು ಕಳೆದರು. ಹಝ್ರತ್ ಅಬುಬಕರ್(ರ.ಅ) ರಕ್ಷಣೆಗಾಗಿ ಮೇಲಾವರಣದಲ್ಲಿ ತಮ್ಮ ಬೆತ್ತಲೆ ಕತ್ತಿಯೊಂದಿಗೆ ನಿಂತಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ರವರು ಇಡೀ ರಾತ್ರಿ ಸರ್ವಶಕ್ತನಾದ ಅಲ್ಲಾಹನಲ್ಲಿ ದುಆ ಮಾಡುತ್ತಿದ್ದರು ಎಂದು ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಮತ್ತು ಇಡೀ ಸೈನ್ಯದಲ್ಲಿ ಹಝ್ರತ್ ಪೈಗಂಬರ್(ಸ) ರವರು ಮಾತ್ರ ರಾತ್ರಿಯಿಡೀ ಎಚ್ಚರವಾಗಿದ್ದರು ಎಂದು ಬರೆಯಲಾಗಿದೆ, ಆದರೆ ಉಳಿದವರೆಲ್ಲರೂ ನಿದ್ರೆಗೆ ಜಾರಿದರು. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–357, 1996 ಮುದ್ರಣ) (ಸಬ್‌ಲುಲ್ ಹುದಾ, ಸಂಪುಟ–11, ಪುಟ–398, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಬದರ್‌ನ ಮೈದಾನಕ್ಕೆ ತಲುಪಿದಾಗ ಸಹಾಬಿಯರು ಒಂದು ಎತ್ತರದ ಜಾಗವನ್ನು ಮಾಡಿಕೊಂಡು ಹಝ್ರತ್ ಪೈಗಂಬರ್(ಸ)ರನ್ನು ಅಲ್ಲಿ ಕುಳ್ಳಿರಿಸಿದರು. ಅನಂತರ ಅತ್ಯಂತ ವೇಗದ ಒಂಟೆಯನ್ನು ಹಝ್ರತ್ ಪೈಗಂಬರ್(ಸ)ರ ಸಮೀಪ ಕಟ್ಟಿದರು. ಅದನ್ನು ಕಂಡಾಗ ಇದೇನೆಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಅವರು ಹೇಳಿದರು: ಯಾ ರಸೂಲಲ್ಲಾಹ್, ನಾವು ಕೆಲವೇ ಜನರಿದ್ದೇವೆ. ಶತ್ರುಗಳು ಬಹಳಷ್ಟು ಇರುವರು. ನಮ್ಮಲ್ಲಿ ಎಲ್ಲರೂ ಶಹೀದ್ ಆಗುವ ಸಾಧ್ಯತೆಯಿದೆ. ನಮಗೆ ನಮ್ಮ ಮರಣದ ಬಗ್ಗೆ ಯಾವುದೇ ದುಃಖವಿಲ್ಲ. ನಿಮಗೆ ಯಾವುದೇ ತೊಂದರೆಯಾಗದಿರಲಿ ಎಂಬ ಚಿಂತೆ ನಮಗೆ ಇದೆ. ನಾವು ಮೃತಪಟ್ಟರೆ ಇಸ್ಲಾಮಿಗೆ ಯಾವುದೇ ನಷ್ಟ ಉಂಟಾಗಲಾರೆವು. ಆದರೆ ನಿಮ್ಮೊಂದಿಗೆ ಇಸ್ಲಾಮಿನ ಜೀವನ ಹೊಂದಿಕೊಂಡಿದೆ. ಆದ್ದರಿಂದ ನಿಮ್ಮ ಸಂರಕ್ಷಣೆಯ ಏರ್ಪಾಡು ಮಾಡುವುದು ಅಗತ್ಯ.

ಯಾ ರಸೂಲಲ್ಲಾಹ್, ನಾವು ಹಝ್ರತ್ ಅಬೂಬಕರ್(ರ)ರನ್ನು ನಿಮ್ಮ ಸಂರಕ್ಷಣೆಗಾಗಿ ನಿಶ್ಚಯಿಸಿದ್ದೇವೆ ಮತ್ತು ಈ ಅತ್ಯಂತ ವೇಗದ ಒಂಟೆಯನ್ನು ನಿಮ್ಮ ಸಮೀಪ ಕಟ್ಟಿದ್ದೇವೆ. ನಾವು ಒಂದು ವೇಳೆ ಒಬ್ಬೊಬ್ಬರಾಗಿ ವಧಿಸಲ್ಪಟ್ಟರೆ, ಯಾ ರಸೂಲಲ್ಲಾಹ್, ಈ ಒಂಟೆ ಇಲ್ಲಿದೆ. ಇದರಲ್ಲಿ ನೀವು ಸವಾರರಾಗಿ ಮದೀನಕ್ಕೆ ಹೋಗಿರಿ.

ಅಲ್ಲಿ ನಮ್ಮ ಕೆಲವು ಸಹೋದರರು ಇರುವರು. ಯುದ್ಧ ನಡೆಯುವುದು ಎಂದು ಅವರಿಗೆ ಗೊತ್ತಿರಲಿಲ್ಲ. ಅವರಿಗೆ ಗೊತ್ತಿದ್ದರೆ ಅವರು ಕೂಡ ನಮ್ಮೊಂದಿಗೆ ಸೇರುತ್ತಿದ್ದರು. ನೀವು ಅವರ ಬಳಿಗೆ ತಲುಪಿರಿ. ಅವರು ನಿಮ್ಮ ಸಂರಕ್ಷಣೆಯನ್ನು ಮಾಡುವರು ಮತ್ತು ಶತ್ರುಗಳ ತೊಂದರೆಗಳಿಂದ ನಿಮ್ಮನ್ನು ಸಂರಕ್ಷಿಸುವರು. (ಬಾನಿ ಎ ಸಿಲ್‌ಸಿಲಾ ಕೊಯಿ ನಯಾ ದೀನದ ನಹೀ ಲಾಎ, ಅನ್ವಾರುಲ್ ಉಲೂಮ್, ಸಂಪುಟ–15, ಪುಟ–244–245) ಆದರೆ ಹಝ್ರತ್ ಪೈಗಂಬರ್(ಸ) ಅವರ ಮಾತನ್ನು ಒಪ್ಪಲಿಲ್ಲ ಮತ್ತು ಸಮ್ಮತಿಸಲು ಸಾಧ್ಯವೂ ಇಲ್ಲ. ಹೇಗಿದ್ದರೂ ಇದಾಗಿತ್ತು ಆ ಸಹಾಬರ ಆವೇಶ.

ಈ ಸಂಬಂಧವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಹಝ್ರತ್ ಅಲಿ(ರ) ಹೀಗೆ ಹೇಳಿದರು: ಸಹಾಬಿಯರಲ್ಲಿ ಅತ್ಯಂತ ಶೂರ ಮತ್ತು ಧೈರ್ಯಶಾಲಿ ಹಝ್ರತ್ ಅಬೂಬಕರ್(ರ) ಆಗಿದ್ದರು. ಬದ್ರ್ ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ)ರಿಗಾಗಿ ಒಂದು ಎತ್ತರದ ಚಪ್ಪರವನ್ನು ಮಾಡಲಾಯಿತು. ಆಗ ಇಂದು ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆಯ ಕೆಲಸವನ್ನು ಯಾರಿಗೆ ಒಪ್ಪಿಸಬೇಕು ಎಂಬ ಪ್ರಶ್ನೆ ಉಂಟಾಯಿತು. ಆಗ ಹಝ್ರತ್ ಅಬೂಬಕರ್(ರ) ಬೇಗನೇ ತೆರೆದ ಖಡ್ಗವನ್ನು ಎತ್ತಿಕೊಂಡು ನಿಂತರು ಮತ್ತು ಅತ್ಯಂತ ಅಪಾಯಕಾರಿ ಸಂದರ್ಭದಲ್ಲಿ ಅತ್ಯಂತ ಧೈರ್ಯದಿಂದ ಹಝ್ರತ್ ಪೈಗಂಬರ್(ಸ)ರ ಸಂರಕ್ಷಣೆಯ ಕರ್ತವ್ಯವನ್ನು ಈಡೇರಿಸಿದರು.

(ತಫ್ಸೀರೆ ಕಬೀರ್, ಸಂಪುಟ–7, ಪುಟ–364–365)

ಹೇಗಿದ್ದರೂ ಬೆಳಿಗ್ಗೆ ಖುರೈಶಿಗಳು ತಮ್ಮ ಜಾಗದಿಂದ ಮುಂದಕ್ಕೆ ಹೋದರು. ಹಝ್ರತ್ ಪೈಗಂಬರ್(ಸ) ಅವರನ್ನು ಕಂಡಾಗ ಹೀಗೆ ಹೇಳಿದರು: ಹೇ ಅಲ್ಲಾಹ್, ಈ ಖುರೈಶಿಗಳು ಅಹಂಕಾರ ಮತ್ತು ಜಂಬದಿಂದ ನಿನ್ನ ವಿರುದ್ಧ ಹೋರಾಡಲು ಮತ್ತು ನಿನ್ನ ಪ್ರವಾದಿಯನ್ನು ನಿರಾಕರಿಸಲು ಬಂದಿರುವರು. ನೀನು ನನ್ನೊಂದಿಗೆ ಮಾಡಿದ ಸಹಾಯದ ವಾಗ್ದಾನವನ್ನು ಈಡೇರಿಸು. ಅವರನ್ನು ಇಂದೇ ಮುಗಿಸುಬಿಡು.

ಮುಶ್ರಿಕರ ನಡುವೆ ಉತ್ಬ ಬಿನ್ ರಬೀಅ ಒಂದು ಕೆಂಪು ಒಂಟೆಯ ಮೇಲೆ ಸವಾರನಾಗಿರುವುದನ್ನು ಹಝ್ರತ್ ಪೈಗಂಬರ್(ಸ) ಕಂಡರು. ಹಝ್ರತ್ ಪೈಗಂಬರ್(ಸ) ಹೇಳಿದರು: ಅವರಲ್ಲಿ ಯಾರಲ್ಲಾದರೂ ಒಳಿತು ಇದ್ದರೆ, ಅದು ಆ ಕೆಂಪು ಒಂಟೆಯಲ್ಲಿ ಸವಾರನಾಗಿರುವವನ ಬಳಿಯಲ್ಲಿದೆ. ಖುರೈಶಿಗಳು ಅವನ ಮಾತನ್ನು ಕೇಳಿದರೆ, ಅವರು ನೇರವಾದ ಮಾರ್ಗಕ್ಕೆ ಬರುವರು.

ಹಝ್ರತ್ ಪೈಗಂಬರ್(ಸ)ರ ಕೊಳದಿಂದ ಸತ್ಯನಿಷೇಧಿಗಳು ನೀರು ಕುಡಿದ ಘಟನೆಯೂ ವರದಿಯಾಗಿದೆ. ನೀರಿನ ಕೊಳ ಮುಸ್ಲಿಮರ ವಶದಲ್ಲಿ ಇತ್ತು. ಆದರೆ ಖುರೈಶಿಗಳು ಬದ್ರಿನ ಮೈದಾನಕ್ಕೆ ಬಂದಾಗ, ಅವರಲ್ಲಿ ಒಂದು ಸಂಘ ಹಝ್ರತ್ ಪೈಗಂಬರ್(ಸ)ರ ಕೊಳಕ್ಕೆ ಬಂದು ನೀರು ಕುಡಿಯಲು ಆರಂಭಿಸಿದರು. ಅವರಲ್ಲಿ ಹಕೀಂ ಬಿನ್ ಹಝ್ಝಾಂ ಕೂಡ ಇದ್ದರು. ಖುರೈಶಿಗಳನ್ನು ನೀರು ಕುಡಿಯಲು ಸಮ್ಮತಿಸಿರಿ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆ ದಿನದಂದು ಹಕೀಂ ಬಿನ್ ಹಝ್ಝಾಂ ಹೊರತುಪಡಿಸಿ ಆ ಕೊಳದಿಂದ ನೀರು ಕುಡಿದ ಎಲ್ಲರೂ ಯುದ್ಧದಲ್ಲಿ ಕೊಲ್ಲಲ್ಪಟ್ಟರು. ಅವರು ಅನಂತರ ಮುಸ್ಲಿಮರಾದರು.

(ಸೀರತ್ ಇಬ್ನೆ ಹಿಶ್ಶಾಮ್, ಪುಟ–424, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಯುದ್ಧಕ್ಕಾಗಿ ಪಂಕ್ತಿಗಳನ್ನು ಸರಿಪಡಿಸಿದ ಬಗ್ಗೆ ಹೀಗೆ ಬರೆಯಲಾಗಿದೆ: ಬೆಳಿಗ್ಗೆ ಖುರೈಶಿಯರು ಬರುವುದಕ್ಕೆ ಮುಂಚಿತವಾಗಿ ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಸಾಲಾಗಿ ನಿಲ್ಲಿಸಿದರು. ಹಝ್ರತ್ ಪೈಗಂಬರ್(ಸ) ತನ್ನ ಬಾಣದಿಂದ ಪಂಕ್ತಿಗಳನ್ನು ಸರಿಪಡಿಸುತ್ತಿದ್ದರು. ಪಂಕ್ತಿ ನೇರವಾಗುವ ತನಕ ಮುಂದೆಯಾಗಿರಿ, ಹಿಂದೆಯಾಗಿರಿ ಎಂದೆಲ್ಲ ಬಾಣದಿಂದ ಸೂಚಿಸಿಕೊಂಡು ಹೇಳುತ್ತಿದ್ದರು. ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ)ರಿಗೆ ಹಝ್ರತ್ ಪೈಗಂಬರ್(ಸ) ಧ್ವಜವನ್ನು ನೀಡಿದರು. ಅವರು ಹಝ್ರತ್ ಪೈಗಂಬರ್(ಸ) ಅವರಿಗೆ ಆದೇಶಿಸಿದ ಸ್ಥಳದಲ್ಲಿ ಇರಿಸಿದರು. ಹಝ್ರತ್ ಪೈಗಂಬರ್(ಸ) ಅವರು ಪಂಕ್ತಿಗಳನ್ನು ಪರೀಕ್ಷಿಸಲು ಪ್ರಾರಂಭಿಸಿದಾಗ ಅವರು(ಸ) ಪಶ್ಚಿಮಕ್ಕೆ ಮುಖ ಮಾಡಿದ್ದರು. (ಸಬ್‌ಲುಲ್ ಹುದಾ ವರ್‍ರಶ್ಶಾದ್, ಸಂಪುಟ–4, ಪುಟ–33, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಪೈಗಂಬರ್(ಸ) ಸಾಲುಗಳನ್ನು ಸರಿಪಡಿಸುತ್ತಿದ್ದಾಗ ಒಂದು ವಿಸ್ಮಯಕರವಾದ ಘಟನೆ ನಡೆಯಿತು. ಅದು ಹಝ್ರತ್ ಸುಆದ್ ಬಿನ್ ಗ್ಹಝಿಯರದ್ದಾಗಿದೆ. ಅದರಿಂದ ಅವರಿಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದ ಪ್ರೇಮದ ಬಗ್ಗೆ ತಿಳಿದುಬರುತ್ತದೆ. ಬದ್ರ್ ಯುದ್ಧದಲ್ಲಿ ಪಂಕ್ತಿಗಳನ್ನು ಸರಿಪಡಿಸುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಸುವಾದ ಬಿನ್ ಗ್ಹಝಿಯರ ಬಳಿಯಿಂದ ದಾಟಿ ಹೋಗುತ್ತಿದ್ದರು. ಅವರು ಪಂಕ್ತಿಯಿಂದ ಸ್ವಲ್ಪ ಹಿಂದೆ ಆಗಿದ್ದರು. ಅವರ ಬೆನ್ನಿಗೆ ಬಾಣವನ್ನು ತಗುಲಿಸಿಕೊಂಡು ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಹೇ ಸುವಾದ್ ನೇರವಾಗಿ ನಿಲ್ಲು. ಹಝ್ರತ್ ಸುವಾದ್(ರ) ಹೇಳಿದರು: ಯಾ ರಸೂಲುಲ್ಲಾಹ್ ನೀವು ನನಗೆ ತೊಂದರೆ ಕೊಟ್ಟಿದ್ದೀರಿ. ಅಲ್ಲಾಹನು ನಿಮ್ಮನ್ನು ನ್ಯಾಯ ಮತ್ತು ನೀತಿಯೊಂದಿಗೆ ಕಳುಹಿಸಿರುವನು. ನೀವು ಇದಕ್ಕೆ ಪ್ರತಿಫಲವನ್ನು ನೀಡಿರಿ. ನನ್ನ ಬೆನ್ನಿಗೆ ನೀವು ಬಾಣವನ್ನು ತಗುಲಿಸಿದ್ದೀರಿ. ಹಝ್ರತ್ ಪೈಗಂಬರ್(ಸ) ತನ್ನ ದೇಹದಿಂದ ಅಂಗಿಯನ್ನು ಕಳಚಿದರು ಮತ್ತು ಪ್ರತೀಕಾರವನ್ನು ಪಡೆಯಿರಿ ಎಂದು ಅವರೊಡನೆ ಹೇಳಿದರು. ಹಝ್ರತ್ ಸುವಾದ್(ರ) ಹಝ್ರತ್ ಪೈಗಂಬರ್(ಸ)ರನ್ನು ಆಲಂಗಿಸಿದರು ಮತ್ತು ಅವರ ದೇಹವನ್ನು ಚುಂಬಿಸಲು ತೊಡಗಿದರು. ಹಝ್ರತ್ ಪೈಗಂಬರ್(ಸ) ಕೇಳಿದರು: ಹೇ ಸುವಾದ್, ನೀನೇಕೆ ಹೀಗೆ ಮಾಡಿದೆ. ಸುವಾದ್(ರ) ಹೇಳಿದರು: ಯಾ ರಸೂಲಲ್ಲಾಹ್, ಇದು ಯಾವ ಸಮಯವೆಂದು ನೀವು ನೋಡುತ್ತಿದ್ದೀರಿ. ಇದು ಯುದ್ಧದ ಸಮಯವಾಗಿದೆ. ನಾನು ಇನ್ನು ಜೀವಂತವಾಗಿ ಇರುವನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಮ್ಮ ದೇಹದೊಂದಿಗೆ ನನ್ನ ದೇಹ ಸ್ಪರ್ಶಿಸುವ ರೀತಿಯಲ್ಲಿ ನನ್ನ ಕೊನೆಯ ಗಳಿಗೆ ದಾಟಿಹೋಗಲಿ ಎಂದು ನಾನು ಬಯಸಿದೆ. ಹಝ್ರತ್ ಪೈಗಂಬರ್(ಸ) ಅವರಿಗೆ ಒಳಿತಿನ ದುಆವನ್ನು ಮಾಡಿದರು. (ಅಸ್ಸೀರತುಲ್ ಹಲಬೀಯ, ಸಂಪುಟ–32, ಪುಟ–220–221, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) ಇದಾಗಿದೆ ಪ್ರೀತಿ ಪ್ರೇಮದ ದೃಶ್ಯಗಳು.

ಈ ವಿಷಯ ಮುಂದುವರೆಯುವುದು. ಇನ್‌ಶಾಅಲ್ಲಾಹ್

ಈ ಸಮಯದಲ್ಲಿ, ನಾನು ಕೆಲವು ದಿವಂಗತರ ಬಗ್ಗೆ ಉಲ್ಲೇಖಿಸಲು ಬಯಸುತ್ತೇನೆ, ಅವರಲ್ಲಿ ಒಬ್ಬರು ಜಾಮಿಯಾ ಅಹ್ಮದಿಯ್ಯದ ಶಿಕ್ಷಕರಾಗಿದ್ದ ಮತ್ತು ಮದ್ರಸತುಲ್ ಹಿಫ್ಝ್‌ನ ಮೇಲ್ವಿಚಾರಕ ಮತ್ತು ಪ್ರಾಂಶುಪಾಲರಾಗಿದ್ದ ಮಾನ್ಯ ಖಾರಿ ಮುಹಮ್ಮದ್ ಆಶಿಖ್ ಸಾಹಿಬ್. ಅವರು ಇತ್ತೀಚೆಗೆ ಎಂಬತ್ತೈದು ವರ್ಷ

ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**

ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಯಾಗಿದ್ದರು. ಪವಿತ್ರ ಖುರ್‌ಆನ್ ಅನ್ನು ಕಂಠಪಾಠ ಮತ್ತು ತಾಜ್ವೀದ್ ಕಲಿತ ನಂತರ, ಖಾರಿ ಆಶಿಖ್ ಸಾಹಿಬ್ ಅವರು ಅಹ್ಮದಿಯ್ಯತ್ ಅನ್ನು ಸ್ವೀಕರಿಸುವ ಮೊದಲು ಪಾಕಿಸ್ತಾನದ ವಿವಿಧ ಸ್ಥಳಗಳಲ್ಲಿ ಅಹ್ಲ್-ಎ-ಹದೀಸ್ನ ಮದರಸಾಗಳಲ್ಲಿ ಕಲಿಸಲು ಅವಕಾಶವನ್ನು ಪಡೆದರು. ಅವರು ಸ್ವತಃ ಬೈಅತ್ ಮಾಡಿದ್ದರು. ಖಾರಿ ಆಶಿಖ್ ಸಾಹಿಬ್ ಬೈಅತ್ ಮಾಡುವ ಮೊದಲು ಅಹ್ಲೆ ಹದೀಸ್ ಪಂಥಕ್ಕೆ ಸೇರಿದವರು. ಖಾರಿ ಸಾಹಿಬ್ ಅವರು ತಮ್ಮ ಬಗ್ಗೆ ಬರೆದ ಪುಸ್ತಕದಲ್ಲಿ ಸ್ವತಃ ವಿವರಿಸಿದ್ದಾರೆ. ಅವರು ಹೇಳುತ್ತಾರೆ 1957 ರಲ್ಲಿ ನಾನು ಕರಾಚಿಯಲ್ಲಿದ್ದಾಗ ಅಲ್ಲಿ ಕೆಲವು ವಿದ್ವಾಂಸ ಸ್ನೇಹಿತರ ಜೊತೆ ಕುಳಿತಿದ್ದೆ. ನಾನು ಆಗಾಗ ಅವರ ಬಳಿ ಹೋಗುತ್ತಿದ್ದೆ. ಅವರು ಅಲ್ಲಿ ದಿನಪತ್ರಿಕೆ ಓದುತ್ತಿದ್ದರು ಮತ್ತು ಕೆಲವು ವಿದ್ವಾಂಸರೊಂದಿಗೆ ಸಭೆಗಳನ್ನು ನಡೆಸುತ್ತಿದ್ದರು. ಒಂದು ದಿನ ನಾನು ಅಲ್ಲಿ ದಿನಪತ್ರಿಕೆ ಓದುತ್ತಾ ಕುಳಿತಿದ್ದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕವನ್ನು ಓದುತ್ತಿದ್ದ ಸ್ನೇಹಿತರೊಬ್ಬರು ಹೇಳಿದರು, ಓಹ್, ಅದ್ಭುತವಾಗಿದೆ! ಅದಕ್ಕೆ ನಾನು ಅವರಿಗೆ ಕೇಳಿದೆ, ಸಹೋದರನೇ, ಏನು ಅದ್ಭುತವಾಗಿದೆ? ನಮ್ಮ ವಿದ್ವಾಂಸರು ವಿವಿಧ ಆಯತ್‌ಗಳನ್ನು ರದ್ದುಗೊಳಿಸುವುದನ್ನು ನಂಬುತ್ತಾರೆ ಆದರೆ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಖಾದಿಯಾನಿ ಅವರು ಪವಿತ್ರ ಖುರ್‌ಆನ್‌ನ ಒಂದು ಆಯತ್ ಅನ್ನು ಸಹ ರದ್ದುಗೊಳಿಸುವುದಿಲ್ಲ ಎಂದು ಹೇಳುತ್ತಾರೆ. ಹೀಗೆ ನನಗೆ ಇದರ ಬಗ್ಗೆ ಕುತೂಹಲ ಮೂಡಿತು. ಇವರು ಸತ್ಯಾವಂತರೂ ಅಥವಾ ಸುಳ್ಳುಗಾರರೋ ಎಂದು ತನಿಖೆ ನಡೆಸಲು ಯೋಚಿಸಿದೆ. ನಂತರ ಅವರು ತಮ್ಮ ಆತ್ಮಚರಿತ್ರೆಯಲ್ಲಿ ಬರೆದಿದ್ದಾರೆ, ಒಂದು ದಿನ ಅವರು ಅಹ್ಮದಿಯಾ ಹಾಲ್ ಕರಾಚಿಗೆ ನಮಾಝ್‌ನ ನಂತರ ಅಹ್ಮದಿಯಾ ಬಗ್ಗೆ ಪರಿಚಯವನ್ನು ಪಡೆಯಲು ಹೋದರು. ಒಬ್ಬ ಅಹ್ಮದಿಯನ್ನು ಭೇಟಿಯಾದರು. ವಿವಾದಾತ್ಮಕ ವಿಷಯಗಳ ಬಗ್ಗೆ ನನಗೆ ಸ್ವಲ್ಪ ಮಾಹಿತಿ ಬೇಕು ಎಂದು ನಾನು ಅವರಿಗೆ ಹೇಳಿದೆ. ದಯವಿಟ್ಟು ಈ ನಿಟ್ಟಿನಲ್ಲಿ ನನಗೆ ಸಹಾಯ ಮಾಡಿ ಮತ್ತು ಮಾರ್ಗದರ್ಶನ ನೀಡಿ. ಅಲ್ಲಿ ಕುಳಿತಿದ್ದ ಗೆಳೆಯನೊಬ್ಬ ನನ್ನನ್ನು ಅಹ್ಮದೀಯ ಹಾಲ್ ನಿಂದ ಅವರ ಮನೆಗೆ ಕರೆದುಕೊಂಡು ಹೋಗಿ ನನಗೆ ಓದಲು ಕೆಲವು ಪುಸ್ತಕಗಳನ್ನು ನೀಡಿದನು. ನಾನು ಆ ಪುಸ್ತಕಗಳನ್ನು ಅಧ್ಯಯನ ಮಾಡಿದ್ದೇನೆ ಮತ್ತು ಇದು ನಿಜವಾದ ಇಸ್ಲಾಂ ಎಂದು ನನ್ನ ಕಲಿತ ಸ್ನೇಹಿತರಲ್ಲೊಬ್ಬರಾದ ಮೌಲ್ವಿ ಸಾಹಿಬ್‌ಗೆ ತೋರಿಸಿ ಹೇಳಿದೆ ಇವು ಇಸ್ಲಾಮ್ ಧರ್ಮದ ಪ್ರಕಾರವೇ ಆಗಿದೆ. ಅದಕ್ಕೆ ಆ ಮೌಲ್ವಿ ಸಾಹೇಬರು ನೀವು ತುಂಬಾ ಸಭ್ಯರು ನಿಮಗೆ ತಿಳಿದಿಲ್ಲ, ಹಾಗಾಗಿ ನಾನು ನಿಮಗೆ ತಿಳಿಸುತ್ತೇನೆ ಮಿರ್ಝಾ ಸಾಹಿಬ್ ಅವರ ಸಣ್ಣ ಪುಸ್ತಕಗಳಲ್ಲಿ ದಾಖಲಾಗಿರುವ ನಂಬಿಕೆಗಳು ಇಸ್ಲಾಂ ಧರ್ಮಕ್ಕೆ ಅನುಗುಣವಾಗಿವೆ ಇವುಗಳನ್ನು ಅವರು ಪ್ರಾರಂಭಿಕ ಜೀವಿತ ಕಾಲದಲ್ಲಿ ಬರೆದಿರುವರು ಆದರೆ ನಂತರ ಬರೆದಿರುವ ದೊಡ್ಡ ಪುಸ್ತಕಗಳಲ್ಲಿ ಮಿರ್ಝಾ ಸಾಹಿಬ್ ಅವುಗಳಲ್ಲಿ ಸುಳ್ಳು ವಿಚಾರಗಳನ್ನು ಮತ್ತು ನಂಬಿಕೆಗಳನ್ನು ಬರೆದಿದ್ದಾರೆ. ಬರಾಹೀನೆ ಅಹ್ಮದಿಯಾ ಗ್ರಂಥವನ್ನು ಅವರು ಆರಂಭದಲ್ಲಿಯೇ ಬರೆಯಲಾಗಿದ್ದರೂ ಅದು ಇಸ್ಲಾಂ ಧರ್ಮದ ಮೂಲವಾಗಿದೆ. ನಂತರ ಹೆಚ್ಚು ಪುಸ್ತಕಗಳಿವೆ. ಆದಾಗ್ಯೂ, ಅವರ ಸಂಪರ್ಕದ ನಂತರ, ಖಾರಿ ಸಾಹಿಬ್ ಮತ್ತೆ ಹೋಗಿ ದೊಡ್ಡ ಪುಸ್ತಕವನ್ನು ನೀಡುವಂತೆ ಕೇಳಿದರು, ಆದರೆ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕಗಳಲ್ಲಿ ಯಾವುದೇ ವಿರೋಧಾಭಾಸವಿಲ್ಲದಿದ್ದರೂ ದೊಡ್ಡ ಪುಸ್ತಕಗಳನ್ನು ನೀಡಲು ನಿರಾಕರಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ಅವರ ಮೊದಲ ಪುಸ್ತಕಗಳಾಗಲೀ ಅಥವಾ ನಂತರ ಬರೆದ ಕೊನೆಯ ಪುಸ್ತಕಗಳಾಗಲಿ ಎಲ್ಲದರಲ್ಲೂ ಒಂದೇ ನಂಬಿಕೆಗಳನ್ನು ಕರೆಯಲಾಗಿದೆ ಆದರೆ ಆಗ ಆ ಅಹ್ಮದಿಯ ಬುದ್ಧಿವಂತಿಕೆ ಏನಾಗಿತ್ತು, ಅವರು ಏಕೆ ಪುಸ್ತಕಗಳನ್ನು ನೀಡಲಿಲ್ಲ ಎಂಬುದು ಅಲ್ಲಾಹನೆ ಬಲ್ಲವನಾಗಿದ್ದಾನೆ. ಆದರೆ ಹೇಗಾದರೂ, ಆ ನಂತರ ಖಾರಿ ಸಾಹಿಬ್ ಅವರ ಸಂಪರ್ಕವನ್ನು ಕಳೆದುಕೊಂಡರು. ತದನಂತರ, ಖಾರಿ ಸಾಹಿಬ್ ಅವರ ಆತ್ಮಚರಿತ್ರೆಯ ಪ್ರಕಾರ, ವಿಶೇಷ ದೈವಿಕ ವಿಧಿಯು ಅವರ ಹೃದಯದಲ್ಲಿ ಹಂಬಲವನ್ನು ಸೃಷ್ಟಿಸಿತು ಮತ್ತು ಖಾರಿ ಸಾಹಿಬ್ ಹಲವಾರು ಸಂದರ್ಭಗಳಲ್ಲಿ ರಬ್ವಾಗೆ ಭೇಟಿ ನೀಡುವುದನ್ನು ಮುಂದುವರೆಸಿದರು ಮತ್ತು ಸ್ಥಳೀಯ ಮಟ್ಟದಲ್ಲಿ ಅಹ್ಮದಿ ಸ್ನೇಹಿತರೊಂದಿಗೆ ಸಂಪರ್ಕದಲ್ಲಿರುತ್ತಿದ್ದರು. ಅವರೂ ಪ್ರಾರ್ಥನೆಯನ್ನು ಮುಂದುವರೆಸಿದರು. ಈ ಪ್ರಾರ್ಥನೆಯ ಸ್ಥಿತಿಯಲ್ಲಿ, ಅವರು ಅನೇಕ ಕನಸುಗಳನ್ನು ಹೊಂದಿದ್ದರು. ಈ ಕನಸುಗಳ ನಡುವೆ, ಇಸ್ಮೂ ಸೌತಸ್ಸಮಾಇ ಜಾಅಲ್ ಮಸೀಹ್ ಜಾಅಲ್ ಮಸೀಹ್ ಅಂದರೆ ಮಸೀಹನು ಆಗಮಿಸಿದ್ದಾನೆ ಆಕಾಶದ ಧ್ವನಿಯನ್ನು ಆಲಿಸಿ ಎಂಬ ಧ್ವನಿಯ ಕನಸ್ಸು ಕೂಡ ಇತ್ತು. ಆ ಸಮಯದಲ್ಲಿ ಈ ಮಾತುಗಳಿಂದ ನನ್ನ ಗಮನವು ಅಹ್ಮದೀಯರ ಕಡೆಗೆ ತಿರುಗಲಿಲ್ಲ, ಆದರೆ ಅಹ್ಮದಿಯಾದ ನಂತರ ಆ ಕನಸುಗಳು ಈಡೇರಿವೆ ಎಂದು ನಾನು ನೆನಪಿಸಿಕೊಂಡಿದ್ದೇನೆ ಎಂದು ಖಾರಿ ಸಾಹಿಬ್ ಹೇಳುತ್ತಾರೆ. ಇದು ಅವರ ವಿಭಿನ್ನ ಕನಸುಗಳಲ್ಲಿ ಒಂದಾಗಿದೆ. ಖಾರಿ ಸಾಹಿಬ್ ಬರೆಯುತ್ತಾರೆ, ನಾನು ನನ್ನ ಜೀವನದ ಘಟನೆಗಳನ್ನು ಹಿಂತಿರುಗಿ ನೋಡಿದಾಗ, ನನ್ನ ಗಮನವನ್ನು ಪದೇ ಪದೇ ಅಹಮದಿಯಾ ಜಮಾತ್‌ನತ್ತ ಸೆಳೆಯಲು ಮತ್ತು ನನಗೆ ಮಾರ್ಗದರ್ಶನದ ಅನುಗ್ರಹ ಸಿಕ್ಕಿದ್ದು ಸರ್ವಶಕ್ತನಾದ ಅಲ್ಲಾಹನ ಅನುಗ್ರಹವಾಗಿದೆ ಎಂದು ನಾನು ಭಾವಿಸುತ್ತೇನೆ.

ನಂತರ ಅವರು ಬರೆಯುತ್ತಾರೆ ಅವರು ಅನ್ಸಾರ್‌ಉಲ್ಲಾಹ್ ಅವರ ಇಜ್ತಿಮಾದಲ್ಲಿ ಲಾಹೋರ್‌ನ ಶೇಖ್ ಅಬ್ದುಲ್ ಖಾದಿರ್ ಸಾಹಿಬ್ ಸೌದಾಗರ್ ಮಿಲ್ ಮುರಬ್ಬಿ ಸಿಲ್ ಸಿಲಾದೊಂದಿಗೆ ಭೇಟಿಯಾದರು. ಅವರು ಅನ್ಸಾರ್‌ಗಳ ಇಜ್ತಿಮಾಗೆ ಹೋದರು ಮತ್ತು ಆ ಸಮಯದಲ್ಲಿ ಬೈಅತ್ ಮಾಡಿರಲಿಲ್ಲ. ಇಜ್ತಿಮಾದ ಮೊದಲ ದಿನದ ಎಲ್ಲ ಕಾರ್ಯಕ್ರಮಗಳನ್ನು ನೋಡಿದ್ದೇನೆ ಎನ್ನುತ್ತಾರೆ. ಬಹುಶಃ ಇಜ್ತಿಮಾದ ಎರಡನೇ ಅಥವಾ ಮೂರನೇ ದಿನದಂದು ನಾನು ಬೈಅತ್ ಮಾಡುವ ಬಯಕೆಯನ್ನು ವ್ಯಕ್ತಪಡಿಸಿದೆ. ಆದ್ದರಿಂದ ನಾವು ಇಸ್ಲಾಹ್ ವಾ ಇರ್ಷಾದ್ ಮರ್ಕಝಿಯಾ ಅವರ ಕಛೇರಿಗೆ ಹೋಗಿ ಈ ವಿನೀತ ಬೈಅತ್ ಫಾರ್ಮ್ ಅನ್ನು ಭರ್ತಿ ಮಾಡಿ ಅಹ್ಮದೀಯತ್‌ನ ಪ್ರಕಾಶದಿಂದ ಪ್ರಬುದ್ಧನಾದೆನು.

(ಮೇರೀ ದಾಸ್ತಾನ್, ಹಾಫಿಝ್ ಮಸ್ರೂರ್ ಅಹ್ಮದ್ ಮತ್ತು ಮುಹಮ್ಮದ್ ಮಖ್ಸೂದ್ ಅಹ್ಮದ್, ಪುಟ-11 ರಿಂದ 22, ಝಿಯಾಉಲ್ ಇಸ್ಲಾಮ್ ಪ್ರೆಸ್ ರಬ್ವಾಹ್, ಜನವರಿ 2013)

ಅಹ್ಮದಿಯಾತ್ ಅನ್ನು ಸ್ವೀಕರಿಸಿದ ನಂತರ, ನೀವು ಪ್ರಯೋಗಗಳ ಮೂಲಕ ಹೋಗಬೇಕಾಗಿತ್ತು. ಮತ್ತೊಂದೆಡೆ, ಅವರ ಜಮಾಅತ್ ಅಲ್ಲದ ಶಿಷ್ಯರು ಮತ್ತು ಮುಖಂಡರಿಂದ ಅವರನ್ನು ಬೇರೆ ಬೇರೆ ರೀತಿಯಲ್ಲಿ ಮರಳಿ ಕರೆತರಲು ಪ್ರಯತ್ನಗಳು ನಡೆದವು. ಆಮಿಷಗಳನ್ನೂ ಕೊಟ್ಟರು, ಕಷ್ಟಗಳನ್ನೂ ನೀಡಿದರು. ಖಾರಿ ಸಾಹಿಬ್ ಹೇಳುತ್ತಾರೆ ಅಹ್ಮದೀಯತ್ ಅನ್ನು ಸ್ವೀಕರಿಸಿದ ನಂತರ, ನನ್ನ ದಾರಿಯಲ್ಲಿ ಅನೇಕ ತೊಂದರೆಗಳು ಬಂದವು, ಆದರೆ ಸರ್ವಶಕ್ತನಾದ ಅಲ್ಲಾಹನು ನನ್ನನ್ನು ದೃಢವಾಗಿ ಇರಿಸಿದನು ಮತ್ತು ಅವನು ಸೂಚಿಸಿದ ಮಾರ್ಗವನ್ನು ಅನುಸರಿಸಿದನು. ಅಲ್ಲಾಹನ ಮಾರ್ಗದರ್ಶನವು ಇತ್ತು, ಆದ್ದರಿಂದ ಯಾವುದೇ ಲೌಕಿಕ ಪ್ರಲೋಭನೆಯು ನನ್ನನ್ನು ಸರಿಯಾದ ಮಾರ್ಗದಿಂದ ತಿರುಗಿಸಲು ಸಾಧ್ಯವಾಗಲಿಲ್ಲ. ಅಹ್ಮದಿಯಾ ಜಮಾಅತ್ ಅನ್ನು ದ್ವೇಷಿಸಲು ಮತ್ತು ನನ್ನನ್ನು ಅಹ್ಲ್ ಅಲ್-ಹದೀಸ್ ಜಮಾಅತ್‌ಗೆ ಹಿಂತಿರುಗಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಲಾಯಿತು, ಆದರೆ ಅಲ್ಲಾಹನ ಅನುಗ್ರಹದಿಂದ ನನ್ನ ಮೇಲೆ ಬಂದ ನಂಬಿಕೆಯ ಬಣ್ಣದಿಂದಾಗಿ, ಸಾಕಷ್ಟು ಪ್ರಯತ್ನಗಳ ಹೊರತಾಗಿಯೂ, ನನಗೆ ಹಿಂದಿರುಗಿಸಲು ಅವರು ವಿಫಲರಾದರು.

(ಮೇರೀ ದಾಸ್ತಾನ್, ಹಾಫಿಝ್ ಮಸ್ರೂರ್ ಅಹ್ಮದ್ ಮತ್ತು ಮುಹಮ್ಮದ್ ಮಖ್ಸೂದ್ ಅಹ್ಮದ್, ಪುಟ-27, ಝಿಯಾಉಲ್ ಇಸ್ಲಾಮ್ ಪ್ರೆಸ್ ರಬ್ವಾಹ್, ಜನವರಿ 2013)

ಅವರು ವಿಧವೆಯನ್ನು ಮದುವೆಯಾಗಿದ್ದರು, ಅವರಿಗೆ ಮೂರು ಮಕ್ಕಳಿದ್ದರು. ಅವರಿಗೆ ಮಗಳು ಜನಿಸಿದಳು.

ಜಮಾಅತ್ತಿನ ಸೇವೆಗಳ ಬಗ್ಗೆ ಬರೆಯಲಾಗಿದೆ. ಸೂಫಿ ಖುದಾ ಬಕ್ಷ್ ಝ್ಯುರ್ವಿ ಸಾಹಿಬ್ ಅವರು ಒಂದು ದಿನ ಮಸೀದಿಯಲ್ಲಿ ನನ್ನನ್ನು ಭೇಟಿಯಾದರು ಮತ್ತು ಆ ಸಮಯದಲ್ಲಿ ವಕ್ಫ್ ಜಾದೀದ್‌ನ ಉಸ್ತುವಾರಿ ವಹಿಸಿದ್ದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹಿಬ್(ರ) ಅವರು ನಿಮಗೆ ರಬ್ವಾವನ್ನು ಕರೆತರಲು ಸಂದೇಶವನ್ನು ಹೊಂದಿದ್ದರು ಎಂದು ಹೇಳಿದರು. ಅವರು ಬೈಅತ್ ಮಾಡಿದ್ದರು. ನಾನು ಅವರ ಸೇವೆಗೆ ಬಂದಾಗ, ಹಝ್ರತ್ ಮಿಯಾನ್ ಸಾಹಿಬ್ ಅವರು ಮೊದಲು ಅವರ ಪಠಣವನ್ನು ಆಲಿಸಿದರು ಮತ್ತು ನಂತರ ತಾಜ್‌ವೀದ್ ಜೊತೆಗೆ ವಕ್ಫ್ ಜದೀದ್‌ನ ಮುಅಲ್ಲಿಮ್‌ಗಳಿಗೆ ಪವಿತ್ರ ಖುರ್‌ಆನ್ ಕಲಿಸುವ ಕರ್ತವ್ಯವನ್ನು ವಹಿಸಿದರು ಮತ್ತು ವಕ್ಫ್ ಜದೀದ್‌ನಲ್ಲಿ ವಸತಿಗೆ ವ್ಯವಸ್ಥೆ ಮಾಡಿದರು ಎಂದು ಹೇಳಲಾಗುತ್ತದೆ. ಇದು 1964ರ ವಿಷುವಾಗಿದೆ. (ಮೇರೀ ದಾಸ್ತಾನ್, ಹಾಫಿಝ್ ಮಸ್ರೂರ್ ಅಹ್ಮದ್ ಮತ್ತು ಮುಹಮ್ಮದ್ ಮಖ್ಸೂದ್ ಅಹ್ಮದ್, ಪುಟ-27-28, ಝಿಯಾಉಲ್ ಇಸ್ಲಾಮ್ ಪ್ರೆಸ್ ರಬ್ವಾಹ್, ಜನವರಿ 2013)

ಜನವರಿ 1, 1965 ರಂದು ವಕ್ಫ್ ಜದೀದ್‌ನಲ್ಲಿ ಖಾರಿ ಸಾಹಿಬ್ ಅವರನ್ನು ಔಪಚಾರಿಕವಾಗಿ ಮುಅಲ್ಲಿಮ್ ಆಗಿ ನೇಮಿಸಲಾಯಿತು ಎಂದು ಹೇಳಲಾಗುತ್ತದೆ. ಅದೇ ಸಮಯದಲ್ಲಿ, ಜಾಮಿಯಾ ಅಹ್ಮದಿಯ್ಯದವರ ವಿದ್ಯಾರ್ಥಿಗಳು ಪವಿತ್ರ ಖುರ್‌ಆನ್ ಓದಲು ದಫ್ತರ್ ವಕ್ಫ್ ಜದೀದ್‌ಗೆ ಬರುತ್ತಿದ್ದರು ಮತ್ತು ನಂತರ ಜಾಮಿಯಾ ಅಹ್ಮದಿಯ್ಯದ ಪ್ರಾಂಶುಪಾಲರಾಗಿದ್ದ ಗೌರವಾನ್ವಿತ ಮೀರ್ ದಾವೂದ್ ಅಹ್ಮದ್ ಸಾಹಿಬ್ ಅವರ ಕೋರಿಕೆಯ ಮೇರೆಗೆ ಖಾರಿ ಸಾಹಿಬ್ ಜಾಮಿಯಾ ಅಹ್ಮದಿಯಾಗೆ ಸ್ವತಃ ಆಗಮಿಸಿ ಕಲಿಸಲು ಪ್ರಾರಂಭಿಸಿದರು. ಇದರೊಂದಿಗೆ ಜಮಾಅತ್ತಿನ ಕಾಲೇಜಾಗಿದ್ದ ಜಾಮಿಯಾ ನುಸ್ರತ್ ಬಾಲಕಿಯರ ಕಾಲೇಜಿನಲ್ಲಿ ಪರ್ದಾದ ವ್ಯವಸ್ಥೆಯೊಂದಿಗೆ ಅಲ್ಲಿನ ಹುಡುಗಿಯರಿಗೆ ಪವಿತ್ರ ಖುರ್‌ಆನ್ ಕಲಿಸಿದರು. (ಮೇರೀ ದಾಸ್ತಾನ್, ಹಾಫಿಝ್ ಮಸ್ರೂರ್ ಅಹ್ಮದ್ ಮತ್ತು ಮುಹಮ್ಮದ್ ಮಖ್ಸೂದ್ ಅಹ್ಮದ್, ಪುಟ-35-36, ಝಿಯಾಉಲ್ ಇಸ್ಲಾಮ್ ಪ್ರೆಸ್ ರಬ್ವಾಹ್, ಜನವರಿ 2013)

ಜನವರಿ 1969 ರಲ್ಲಿ, ಹಾಫಿಝ್ ಕ್ಲಾಸ್ ರಬ್ವಾಹ್ ಅವರ ಉಸ್ತುವಾರಿ ಹಾಫಿಝ್ ಶಫೀಕ್ ಸಾಹಿಬ್ ನಿಧನರಾದರು, ನಂತರ ಪ್ರಾಂಶುಪಾಲ ಜಾಮಿಯಾ ಮೀರ್ ದೌದ್ ಅಹ್ಮದ್ ಸಾಹಿಬ್ ಅವರು ಹಾಫಿಝ್ ಸಾಹಿಬ್ ಅವರನ್ನು ತರಗತಿಗೆ ಬರಲು ಹೇಳಿದರು. ಆ ದಿನಗಳಲ್ಲಿ ಮುಬಾರಕ್ ಮಸೀದಿಯಲ್ಲಿ ಈ ತರಗತಿ ನಡೆಯುತ್ತಿತ್ತು. ನನಗೂ ಮಸೀದಿಯಲ್ಲಿ ನೆನಪಿದೆ ಹುಡುಗರು ಕುಳಿತಲ್ಲೇ ಕಂಠಪಾಠ ಮಾಡುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ರವರು ನಂತರ ಖಾರಿ ಸಾಹಿಬ್ ಅವರನ್ನು ಹಾಫಿಝ್ ತರಗತಿಯಲ್ಲಿ ನೇಮಿಸಿ,

ಅವರ ಅನುಮೋದನೆಯನ್ನು ನೀಡಿದರು ಮತ್ತು ಅವರು ಇದರೊಂದಿಗೆ ವಕ್ಫ್ ಜದೀದ್‌ಗೂ ತರಗತಿಯಲ್ಲಿ ಕಲಿಸುತ್ತಾರೆ ಮತ್ತು ಹಾಫಿಝ್ ತರಗತಿಯಲ್ಲೂ ಕಲಿಸುತ್ತಾರೆ ಎಂದು ಬರೆದರು. ಆದ್ದರಿಂದ, 1969 ರಲ್ಲಿ, ಅವರು ಹಾಫಿಝ್ ಕ್ಲಾಸ್‌ನಲ್ಲಿ ನೇಮಕಗೊಂಡರು. (ಮೇರೀ ದಾಸ್ತಾನ್, ಹಾಫಿಝ್ ಮಸ್ರೂರ್ ಅಹ್ಮದ್ ಮತ್ತು ಮುಹಮ್ಮದ್ ಮಖ್ಸೂದ್ ಅಹ್ಮದ್, ಪುಟ–40–41, ಝಿಯಾಉಲ್ ಇಸ್ಲಾಮ್ ಪ್ರೆಸ್ ರಬ್ವಾಹ್, ಜನವರಿ 2013)

1998 ರಲ್ಲಿ, ಅವರು ನಿವೃತ್ತರಾದರು. (ಮೇರೀ ದಾಸ್ತಾನ್, ಹಾಫಿಝ್ ಮಸ್ರೂರ್ ಅಹ್ಮದ್ ಮತ್ತು ಮುಹಮ್ಮದ್ ಮಖ್ಸೂದ್ ಅಹ್ಮದ್, ಪುಟ–52, ಝಿಯಾಉಲ್ ಇಸ್ಲಾಮ್ ಪ್ರೆಸ್ ರಬ್ವಾಹ್, ಜನವರಿ 2013)

ಆದರೆ ಇದರ ಹೊರತಾಗಿಯೂ, ಅವರು 2019 ರವರೆಗೆ ಮದರಸಾ ಅಲ್–ಹಿಫ್‌ಝ್ ಮತ್ತು ಮದರಸಾ ಅಲ್–ಝುಫರ್‌ನಲ್ಲಿ ಪವಿತ್ರ ಖುರ್‌ಆನ್ ಅನ್ನು ಕಲಿಸುವುದನ್ನು ಮುಂದುವರೆಸಿದರು. ಜಲ್ಸಾ ಸಾಲಾನ 1964 ರ ಅನುಗ್ರಹದಾಯಕ ಸಂದರ್ಭದಲ್ಲಿ, ನೀವು ಮೊದಲ ಬಾರಿಗೆ ತಿಲಾವತ್ ಸೌಭಾಗ್ಯವನ್ನು ಹೊಂದಿದ್ದೀರಿ.

ಖಾರಿ ಸಾಹಿಬ್ ತಮ್ಮ ಒಂದು ಘಟನೆಯನ್ನು ಹೀಗೆ ಬರೆಯುತ್ತಾರೆ. ಅವರು ಹೇಳುತ್ತಾರೆ ಫೆಬ್ರವರಿ 1965 ರಲ್ಲಿ, ನಾನು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರನ್ನು ಭೇಟಿ ಮಾಡುವ ಸುಯೋಗವನ್ನು ಹೊಂದಿದ್ದೇನೆ. ಗೌರವ ಹಸ್ತಲಾಘವ ಸ್ವೀಕರಿಸಿದಾಗ ಆ ಕ್ಷಣ ನನ್ನ ಬದುಕನ್ನೇ ಬದಲಿಸುವ ರೀತಿಯಲ್ಲಿ ಐತಿಹಾಸಿಕ ಸಭೆಯ ಘಟನೆ ಹೇಳುತ್ತಿದ್ದರು. ಪ್ರೈವೆಟ್ ಸೆಕ್ರೇಟರಿ ಅವರು ಹುಝೂರ್ ಅವರಿಗೆ ಖಾರಿ ಮುಹಮ್ಮದ್ ಆಶಿಕ್ ಸಾಹಿಬ್ ಎಂದು ನನಗೆ ಪರಿಚಯಿಸಿದರು. ಅವರು ನನ್ನನ್ನು ಪರಿಚಯಿಸುತ್ತಿರುವಾಗ ಹುಝೂರ್ ಅವರು ನನ್ನ ಮೇಲೆ ಕರುಣೆದೋರಿ ತಮ್ಮ ತುಂಬಿದ ಕಣ್ಣುಗಳಿಂದ ನನ್ನನ್ನು ನೋಡುತ್ತಿದ್ದರು ಮತ್ತು ನಾನು ಕೂಡ ಹುಝೂರ್ ಅವರ ಅನುಗ್ರಹದಾಯಕ ಕೈಯನ್ನು ಹಿಡಿದು ಅವರನ್ನು ಭೇಟಿಯಾಗುತ್ತಿದ್ದೆ. (ಮೇರೀ ದಾಸ್ತಾನ್, ಹಾಫಿಝ್ ಮಸ್ರೂರ್ ಅಹ್ಮದ್ ಮತ್ತು ಮುಹಮ್ಮದ್ ಮಖ್ಸೂದ್ ಅಹ್ಮದ್, ಪುಟ–28–30, ಝಿಯಾಉಲ್ ಇಸ್ಲಾಮ್ ಪ್ರೆಸ್ ರಬ್ವಾಹ್, ಜನವರಿ 2013)

ಹದಿನೈದು ವರ್ಷಗಳ ಕಾಲ ರಂಝಾನ್ ಪವಿತ್ರ ಮಾಸದಲ್ಲಿ ಮಸ್ಜಿದ್ ಮುಬಾರಕ್‌ನಲ್ಲಿ ನಮಾಝ್ ತರಾವೀಹ್ ನಿರ್ವಹಿಸಲು ಕರ್ತವ್ಯವಾಗಿತ್ತು. ಇಸ್ಲಾಹ್ ವ ಇರ್ಷಾದ್ ಮರ್ಕಝೀಯಾದ ನಾಝಿರ್ ಆಗಿದ್ದ ಮೌಲಾನಾ ಅಬ್ದುಲ್ ಮಾಲಿಕ್ ಖಾನ್ ಸಾಹಿಬ್ ಅವರು ಒಮ್ಮೆ ಹೇಳಿದರು ಮಸ್ಜಿದ್ ಮುಬಾರಕ್‌ನಲ್ಲಿ ನಮಝು ತಹಜ್ಜುದ್ ಹಾಗೂ ನಮಾಝು ತರಾವಿ ನಿರ್ವಹಿಸಲು ಕರ್ತವ್ಯವಹಿಸಲು ನೇಂಇಸಲು ಕಾರಣ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ರವರು ನಿಮ್ಮ ಪಠಣವನ್ನು ಬಹಳ ಇಷ್ಟ ಪಡುತ್ತಾರೆ. (ಮೇರೀ ದಾಸ್ತಾನ್, ಹಾಫಿಝ್ ಮಸ್ರೂರ್ ಅಹ್ಮದ್ ಮತ್ತು ಮುಹಮ್ಮದ್ ಮಖ್ಸೂದ್ ಅಹ್ಮದ್, ಪುಟ–35–37, ಝಿಯಾಉಲ್ ಇಸ್ಲಾಮ್ ಪ್ರೆಸ್ ರಬ್ವಾಹ್, ಜನವರಿ 2013)

ಅವರ ಶಿಷ್ಯರೂ ಅಸಂಖ್ಯಾತರಾಗಿದ್ದಾರೆ ಮತ್ತು ಈಗ ಪ್ರಪಂಚದ ವಿವಿಧ ಸ್ಥಳಗಳಲ್ಲಿ ಹರಡಿದ್ದಾರೆ. ಅವರ ಬಗ್ಗೆ ಅನೇಕ ಪತ್ರಗಳು ನನಗೆ ಬಂದಿವೆ ಅವುಗಳಲ್ಲಿ ಅವರ ಸದ್ಗುಣಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಸರ್ವಶಕ್ತನಾದ ಅಲ್ಲಾಹನು ದಿವಂಗತರ ಶ್ರೇಣಿಯನ್ನು ಹೆಚ್ಚಿಸಲಿ ಮತ್ತು ಅವರ ಮಕ್ಕಳು ಮತ್ತು ಪೀಳಿಗೆಯಲ್ಲಿ ಅವರ ಇಚ್ಛೆಗೆ ಅನುಗುಣವಾಗಿ ಪ್ರಾರ್ಥನೆಗಳು ಮತ್ತು ಪ್ರಾಮಾಣಿಕತೆಯ ಸ್ಥಿತಿಯನ್ನು ಸೃಷ್ಟಿಸಲಿ.

ಎರಡನೆಯ ಉಲ್ಲೇಖವು ಸೀರಿಯಾದ ಅತ್ಯಂತ ಹಳೆಯ ಅಹ್ಮದಿಯಾಗಿದ್ದ ಮಾನ್ಯ ನೂರುದ್ದೀನ್ ಅಲ್–ಹಸ್ನಿ ಸಾಹಿಬ್ ಅವರದ್ದಾಗಿದೆ. ಅವರು ಪ್ರಸ್ತುತ ಸೌದಿ ಅರೇಬಿಯಾದಲ್ಲಿದ್ದರು. ಹಲವು ವರ್ಷಗಳ ಕಾಲ ಸೌದಿ ಅರೇಬಿಯಾದ ಜೈಲಿನಲ್ಲಿ ಅಹಮದಿ ಎಂಬ ಕಾರಣಕ್ಕೆ ಬಂಧಿಯಾಗಿದ್ದ. ಅವರು ಅಸೀರಾನೆ ರಾಹೆ ಮೌಲಾ ಆಗಿದ್ದರು. ಅನಾರೋಗ್ಯ ಮತ್ತು ಕಷ್ಟಗಳ ಹೊರತಾಗಿಯೂ, ಅವರು ತಮ್ಮ ನಂಬಿಕೆಯಲ್ಲಿ ದೃಢವಾಗಿ ಉಳಿದರು ಮತ್ತು ಅಂತಿಮವಾಗಿ ಮೇ 25 ರಂದು 82 ನೇ ವಯಸ್ಸಿನಲ್ಲಿ ಸೆರೆಯಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**

ಅವರ ತಂದೆ ಅಲ್ಹಾಜ್ ಅಬ್ದುಲ್ ರವೂಫ್ ಅಲ್–ಹೊಸ್ನಿ ಸಾಹಿಬ್ 1938 ರಲ್ಲಿ ಬೈಅತ್ ಮಾಡಿದ್ದರು. ಮಾನ್ಯ ಮುನೀರ್ ಅಲ್–ಹೊಸ್ನಿ ಮಾಜಿ ಅಮೀರ್ ಜಮಾಅತ್–ಎ–ಶಾಮ್ ದಿವಂಗತ ನೂರುದ್ದೀನ್ ಅಲ್–ಹೊಸ್ನಿ ಅವರ ತಾಯಿಯ ಚಿಕ್ಕಪ್ಪ ಆಗಿದ್ದರು. ಮೃತರು ಬಾಲ್ಯದಿಂದಲೂ ಇಸ್ಲಾಮಿಕ್ ನೈತಿಕತೆ ಮತ್ತು ಮೌಲ್ಯಗಳು ಮತ್ತು ಖಿಲಾಫತ್‌ನ ಪ್ರೀತಿಯ ವಾತಾವರಣದಲ್ಲಿ ಬೆಳೆದರು. ಅವರ ತಂದೆ ನಿಧನಹೊಂದಿದಾಗ ಅವರಿಗೆ ಹದಿಮೂರು ಅಥವಾ ಹದಿನಾಲ್ಕು ವರ್ಷ ವಯಸ್ಸಾಗಿತ್ತು. ಮೃತರು ಆಗಾಗ್ಗೆ ಮಾನ್ಯ ಮುನೀರ್ ಅಲ್ ಹುಸ್ನಿ ಸಾಹಿಬ್ ಅವರ ಸಹವಾಸದಲ್ಲಿದ್ದರು ಮತ್ತು ಅವರಿಂದ ಜಮಾತ್ ಬಗ್ಗೆ ಸಾಕಷ್ಟು ಕಲಿತರು. 1955 ರಲ್ಲಿ ಹಝ್ರತ್ ಮುಸ್ಲೆಹ್ ಮೌಊದ್ (ರ.ಅ) ಅವರು ಡಮಾಸ್ಕಸ್ಗೆ ಭೇಟಿ ನೀಡಿದಾಗ ಅವರ ಚಿಕ್ಕಪ್ಪರಾದ ಮಾನ್ಯ ದಿವಂಗತ ಬದ್ರುದ್ದೀನ್ ಅಲ್–ಹೊಸ್ನಿಯವರ ಮನೆಯಲ್ಲಿ ತಂಗಿದ್ದರು. ಆ ದಿನಗಳಲ್ಲಿ, ಮೃತರಿಗೆ ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಅವರ ಮುಂದೆ ತಿಲಾವತ್ ಮಾಡುವ ಗೌರವವೂ ಲಭಿಸಿತ್ತು. ಅವರು ಬಹಳಷ್ಟು ಉಪವಾಸಗಳನ್ನು ಅನುಷ್ಠಿಸುತ್ತಿದ್ದರು. ಸೋಮವಾರ ಮತ್ತು ಗುರುವಾರಗಳನ್ನು ವಿಶೇಷ ಉಪವಾಸಗಳಾಗಿ ಇರಿಸಲಾಯಿತು. ಅವರು ಪವಿತ್ರ ಖುರ್‌ಆನ್‌ನ ಪಠಣವನ್ನು ತುಂಬಾ ಇಷ್ಟಪಡುತ್ತಿದ್ದರು. ತಹಜುದ್ ಪ್ರಾರ್ಥನೆ ಬಿಡಲೇ ಇಲ್ಲ. ತಮ್ಮ ಜೀವನದ ಕೊನೆಯ ದಿನದವರೆಗೂ ಜೈಲಿನಲ್ಲಿದ್ದರೂ ಅವರು ತಮ್ಮ ನಂಬಿಕೆಗೆ ನಿಷ್ಠರಾಗಿ ಜಮಾಅತ್‌ನೊಂದಿಗೆ ದೃಢವಾಗಿ ಉಳಿದರು. ಅಲ್ಲಾಹನ ಸಹಾಯ ಹತ್ತಿರವಿದೆ ಎಂಬ ನಂಬಿಕೆ ಇತ್ತು. ಜೈಲಿನಲ್ಲಿ ಭೇಟಿಯಾದ ಎಲ್ಲರಿಗೂ ಇದನ್ನು ಹೇಳುತ್ತಿದ್ದರು. ಅವರು ಅಹ್ಮದಿ ಇದ್ದ ತಮ್ಮ ವಿಧವೆ ಪತ್ನಿ ಮತ್ತು ತಮ್ಮ ಪತಿಯೊಂದಿಗೆ ನಿಷ್ಠಾವಂತ ಸಂಬಂಧವನ್ನು ಉಳಿಸಿಕೊಂಡಿದ್ದಾರೆ. ಈ ಮಹಿಳೆ ತನ್ನ ಜೈಲುವಾಸದಲ್ಲಿ ಸಾಕಷ್ಟು ತ್ಯಾಗ ಮಾಡಿದ್ದಾಳೆ. ಮಕ್ಕಳಲ್ಲಿ ಮೂವರು ಪುತ್ರರಾದ ಅಬ್ದುಲ್ ರವೂಫ್ ಅಲ್ ಹೊಸ್ನಿ ಸಾಹಿಬ್ ಮತ್ತು ಮುಹಮ್ಮದ್ ಮೋಜ್ ಅಲ್ ಹೊಸ್ನಿ ಮತ್ತು ಫವಾಜ್ ಅಲ್ ಹೊಸ್ನಿ ಮತ್ತು ಒಬ್ಬ ಮಗಳು ಜೈನಾಬ್ ಅಲ್ ಹೊಸ್ನಿ ಇವರನ್ನೆಲ್ಲ ಅಗಲಿದ್ದಾರೆ. ಮೊಮ್ಮಕ್ಕಳೂ ಇದ್ದಾರೆ. ಅಲ್ಲಾಹನ ಕೃಪೆಯಿಂದ ಎಲ್ಲರೂ ಪ್ರಾಮಾಣಿಕ ಅಹ್ಮದಿಯರಾಗಿದ್ದಾರೆ.

ದಿವಂಗತರ ಪುತ್ರ ಮುಆಝ್ ಅಲ್–ಹೊಸ್ನಿ ಸಾಹಿಬ್ ಹೇಳುತ್ತಾರೆ: ನಮ್ಮೆಲ್ಲ ಸಹೋದರ–ಸಹೋದರಿಯರು ಜಮಾಅತ್‌ಗೆ ಪೂರ್ಣ ತೃಪ್ತಿಯಿಂದ ಪ್ರವೇಶಿಸಬೇಕೆಂದು ನನ್ನ ತಂದೆ ಬಯಸಿದ್ದರು ಮತ್ತು ನಾವು ಅಲ್‌ಹಮ್ದುಲಿಲ್ಲಾಹ್ ಪೂರ್ಣ ವಿಶ್ವಾಸದಿಂದ ಬೈಅತ್ ಮಾಡಿದ್ದೇವೆ ಮತ್ತು ನಾವು ಸೌದಿ ಅರೇಬಿಯಾದಲ್ಲಿದ್ದಾಗ ಜಮಾಅತ್‌ನ ಹುಡುಕಾಟ ನಡೆಸಿದ್ದೇವೆ. ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುತ್ತಿದ್ದ ಹಾಶಿಮ್ ಸಾಹಿಬ್ ಇದ್ದಾರೆ ಅವರು ಯುಕೆ ಯ ನಿವಾಸಿಯಾಗಿದ್ದರು ಅವರನ್ನು ಭೇಟಿಯಾದರು ಮತ್ತು ನಂತರ ನಾವು ಸಂಪರ್ಕಕ್ಕೆ ಬಂದಾಗ ನಮ್ಮ ತಂದೆ ಕೊನೆಯವರೆಗೂ ಜಮಾಅತ್‌ನ ಕೆಲಸದಲ್ಲಿ ನಿರತರಾಗಿದ್ದರು ಎಂದು ಹೇಳುತ್ತಾರೆ. ಅವರು ತುಂಬಾ ಕರುಣಾಮಯಿ ಮತ್ತು ಮುಕ್ತ ಹೃದಯದವರಾಗಿದ್ದರು. ನೀವು ಇತರರಿಗೆ ಸಹಾಯ ಮಾಡಲು ಇಷ್ಟಪಡುತ್ತೀರಿ. 2019 ರಲ್ಲಿ ಅವರನ್ನು ಕರೆಸಿ ಜೈಲಿಗೆ ಹಾಕಲಾಯಿತು ಎಂದು ಬರೆದುಕೊಂಡಿದ್ದಾರೆ. ಸಾಕಷ್ಟು ಪ್ರಯತ್ನ ಮತ್ತು ಹೋರಾಟದ ನಂತರ, ತಂದೆಯನ್ನು ಅಹ್ಮದಿ ಎಂದು ಆರೋಪಿಸಿ ಸಾಮಾಜಿಕ ಮಾಧ್ಯಮದಲ್ಲಿ ಬೋಧಿಸುತ್ತಿರುವುದು ಕಂಡುಬಂದಿದೆ. ಎರಡು ವರ್ಷಗಳಿಂದ ಅವರನ್ನು ಬಿಡುಗಡೆ ಮಾಡಲು ಎಲ್ಲ ಪ್ರಯತ್ನ ಮಾಡಿದ್ದೇವೆ ಎನ್ನುತ್ತಾರೆ. ಹಲವಾರು ವಕೀಲರನ್ನು ನೇಮಿಸಿಕೊಂಡರು. ಅವರ ಬಿಡುಗಡೆಗೆ ಆದೇಶ ಕೂಡ ಜಾರಿಯಾಗಿ ಬಿಡುಗಡೆ ಕೂಡ ಜಾರಿಯಾಗಿತ್ತು, ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಠಾಣೆಗೆ ಕರೆಸಿ ಮತ್ತೆ ಬಂಧಿಸಿದ ಪೊಲೀಸರು ಈ ಬಾರಿ ಹಿಂದಿಗಿಂತಲೂ ಕಠೋರವಾಗಿ ವರ್ತಿಸಿದ್ದಾರೆ. ಅವರನ್ನು ಭೇಟಿಯಾಗಲು ಬಿಡಲಿಲ್ಲ. ಫೋನ್‌ನಲ್ಲಿ ಮಾತನಾಡಲು ಅವಕಾಶವಿರಲಿಲ್ಲ. ಅವರ ಆರೋಗ್ಯ ಹದಗೆಟ್ಟಿತ್ತು. ವಯೋಸಹಜವಾಗಿ ಅಸ್ವಸ್ಥಗೊಂಡು ಆಸ್ಪತ್ರೆಗೆ ತೆರಳುತ್ತಿದ್ದ ಅವರು ಕುಟುಂಬ ಸದಸ್ಯರನ್ನು ಭೇಟಿಯಾಗಲಿಲ್ಲ.

ಕೆನಡಾದಲ್ಲಿರುವ ಅವರ ಹಿರಿಯ ಪುತ್ರ ಅಬ್ದುಲ್ ರೌಫ್ ಅಲ್–ಹೊಸ್ನಿ ಸಾಹಿಬ್ ಅವರ ಬಗ್ಗೆ ಬರೆಯುತ್ತಾರೆ: ಜಮಾಅತ್‌ನ ಬಗ್ಗೆ ಅಪಾರವಾದ ಪ್ರಾಮಾಣಿಕತೆ ಮತ್ತು ಪ್ರೀತಿ ಇತ್ತು. ಅವರು ತಮ್ಮ ನಂಬಿಕೆಯಲ್ಲಿ ದೃಢವಾಗಿ ಸ್ಥಾಪಿತರಾಗಿದ್ದರು ಮತ್ತು ನಂತರ ಅವರು ಪೂಜೆ ಮತ್ತು ಪ್ರಾಮಾಣಿಕತೆಯ ಬಗ್ಗೆ ವಿಶೇಷ ಉಲ್ಲೇಖವನ್ನು ಮಾಡಿದ್ದಾರೆ. 2016ರಲ್ಲಿ ಜೈಲಿನಲ್ಲಿದ್ದಾಗ ಉಪವಾಸವಿದ್ದು, ಜೈಲಿನಲ್ಲಿ ಕಷ್ಟ ಅನುಭವಿಸಬೇಕಾಗುತ್ತದೆ ಎಂದು ಗೊತ್ತಿದ್ದರೂ ಉಪವಾಸ ಮುರಿಯಲು ಇಷ್ಟಪಡಲಿಲ್ಲ ಎಂದು ವಿವರವಾಗಿ ಬರೆದುಕೊಂಡಿದ್ದಾರೆ. ಅಧಿಕಾರಿಗಳು ನೀರು ಕೊಟ್ಟಾಗ ನಾನು ಉಪವಾಸ ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ. ನಂತರ ಅವರು ಅಸರ್ ಪ್ರಾರ್ಥನೆಯನ್ನು ಓದಲು ಅನುಮತಿ ಕೇಳಿದರು, ಅವರು ಅನುಮತಿ ನೀಡಿದರು. ನೀವು ಅವರ ಮುಂದೆ ಪ್ರಾರ್ಥನೆ ಮಾಡಿದ ನಂತರ, ನೀವು ನಮ್ಮಂತೆಯೇ ಪ್ರಾರ್ಥಿಸುತ್ತೀರಿ ಎಂದು ಹೇಳಿದರು. ಅದು ಅವನ ಮೇಲೆ ಪರಿಣಾಮ ಬೀರಿದರೂ, ಅವರು ಆ ಸಮಯದಲ್ಲಿ ಅವರನ್ನು ತೊರೆದನು. ನಂತರ ಡಿಸೆಂಬರ್ 2019 ರಲ್ಲಿ, ಯಾವುದೇ ಕಾರಣವನ್ನು ನೀಡದೆ, ಅವರನ್ನು ಮತ್ತೆ ಪೊಲೀಸರಿಗೆ ಹಿಡಿದು ಜೈಲಿಗೆ ಹಾಕಲಾಯಿತು ಮತ್ತು ಸೆರೆಯಲ್ಲಿ ಈ ಸ್ಥಿತಿಯಲ್ಲಿ ನಿಧನರಾದರು. ಸರ್ವಶಕ್ತನಾದ ಅಲ್ಲಾಹನು ಅವರನ್ನು ಮಗ್‌ಫಿರತ್ ಮತ್ತು ಕರುಣೆಯಿಂದ ನಡೆಸಿಕೊಳ್ಳಲಿ, ಅವರ ಶ್ರೇಣಿಯನ್ನು ಹೆಚ್ಚಿಸಲಿ. ಅವರ ಮಕ್ಕಳೂ ಸಹ ಅವರ ಸದ್ಗುಣಗಳನ್ನು ಅಳವಡಿಸಿಕೊಳ್ಳಲು ಅನುಗ್ರಹಿಸಲಿ. ನಮಾಝ್‌ನ ನಂತರ, ನಾನು ನಮಾಝು ಜನಾಝುವನ್ನು ಸಹ ನಿರ್ವಹಿಸಲಾಗುವುದು. ಇನ್‌ಶಾಅಲ್ಲಾಹ್.

...*...*...*...


**ವಿನಂತಿ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

ಜಲ್ಸ ಸಾಲಾನ ಖಾದಿಯಾನ್ 2022ರ ಭಾಷಣ

# ಶಾಂತಿ ಸ್ಥಾಪನೆಗೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳು ಮತ್ತು ಅವರ ಉತ್ತಮ ಮಾದರಿ

(ಮೌಲಾನ ಮುಹಮ್ಮದ್ ಇನಾಮ್ ಘೋರಿ, ಸಾಝಿರ್ ಅಲ್‌ಲಾ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್)

**ಯಹ್‌ದೀ ಬಿಹಿಲ್ಲಾಹು ಮನಿತ್ತಬಅ ರಿಝ್ವಾನಹೂ ಸುಬುಲಸ್ಸಲಾಮಿ ವ ಯುಖ್‌ರಿಜುಹುಮ್ ಮಿನ ಝ್ಝುಲುಮಾತಿ ಇಲನ್ನೂರಿ ಬಿ ಇಝ್‌ನಿಹೀ ವ ಯಹ್‌ದೀಹಿಮ್ ಇಲಾ ಸಿರಾತಿನ್ ಮುಸ್ತಖೀಮ್.**

ಅಲ್ಲಾಹನು ಅದರ ಮೂಲಕ (ಎಂದರೆ ಪ್ರಕಾಶಮಾನವಾದ ಗ್ರಂಥವಾಗಿರುವ ಪವಿತ್ರ ಖುರ್‌ಆನ್ ಮೂಲಕ) ತನ್ನ ಸಂತೃಪ್ತಿಯನ್ನು ಬಯಸುವವರಿಗೆ ರಕ್ಷಾ ಮಾರ್ಗದೆಡೆಗೆ ದಾರಿ ತೋರಿಸುತ್ತಾನೆ. ತನ್ನ ಇಚ್ಛಾನುಸಾರ ಅವರನ್ನು ಅವನು ಅಂಧಕಾರಗಳಿಂದೆಲ್ಲ ಹೊರಗೆ ತಂದು ಪ್ರಕಾಶದೆಡೆಗೆ ಕೊಂಡೊಯ್ಯುತ್ತಾನೆ ಹಾಗೂ ಅವರಿಗೆ ಸತ್ಪಥದೆಡೆಗೆ ದಾರಿ ತೋರಿಸುತ್ತಾನೆ. (ಪವಿತ್ರ ಖುರ್‌ಆನ್ 5:17).

ಇಸ್ಲಾಮ್ ಪದದ ಅರ್ಥ ಶಾಂತಿ ಮತ್ತು ಸುರಕ್ಷೆ ಎಂದಾಗಿದೆ. ಇಸ್ಲಾಮ್ ಧರ್ಮದ ಸ್ಥಾಪಕರಾದ

ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಜಾಗತಿಕ ಶಾಂತಿ ಮತ್ತು ಸುರಕ್ಷೆಯ ಸಂದೇಶವಾಹಕರಾಗಿದ್ದಾರೆ.

ನೆನಪಿಡಬೇಕಾದುದೇನೆಂದರೆ ಶಾಂತಿ, ಸುಖ ಮತ್ತು ನೆಮ್ಮದಿ ಮೂಲತಃ ಎರಡು ರೀತಿಗಳಲ್ಲಿರುತ್ತದೆ. ಒಂದು, ವೈಯಕ್ತಿ ಶಾಂತಿ. ಎರಡು, ಸಾಮೂಹಿಕ ಶಾಂತಿ. ವೈಯಕ್ತಿಕ ಶಾಂತಿ ಮನುಷ್ಯನ ಹೃದಯ, ಮಸ್ತಿಷ್ಕ, ಶಾರೀರಿಕ ಆರೋಗ್ಯ, ತನ್ನ ಕುಟುಂಬದ ಸದಸ್ಯರೊಂದಿಗೆ ಅವನ ಸಂಬಂಧ, ಅವನ ಹೊಣೆಗಾರಿಕೆಗಳು, ಅವನ ವೃತ್ತಿಯ ವಲಯ ಮೊದಲಾದುಗಳಿಗೆ ಸಂಬಂಧಿಸಿರುತ್ತದೆ. ಸಾಮಾಹಿಕ ಶಾಂತಿ, ಮನುಷ್ಯನ ಸಾಮಾಜಿಕ ಜೀವಿತ, ಅವನ ಬಡಾವಣೆ, ಅವನ ನಗರ, ಅವನ ದೇಶ ಮತ್ತು ಲೋಕದ ಶಾಂತಿಯೊಂದಿಗೆ ಸಂಬಂಧಿಸಿರುತ್ತದೆ.

ಪ್ರತಿಯೊಬ್ಬ ಮನುಷ್ಯನು ಶಾಂತಿ ಮತ್ತು ನೆಮ್ಮದಿ ಭರಿತ ಜೀವಿತ ನಡೆಸಲು ಇಚ್ಛಿಸುತ್ತಾನೆ. ಅವನ ಸ್ವಂತ ಆರೋಗ್ಯ ಚೆನ್ನಾಗಿರಬೇಕು, ಯೋಗ್ಯವಾದ ಆಹಾರ ಲಭಿಸಬೇಕು, ವಾಸ್ತವ್ಯಕ್ಕೆ ಯೋಗ್ಯ ವ್ಯವಸ್ಥೆ ಆಗಬೇಕು, ಒಳ್ಳೆಯ ಪತ್ನಿ ಲಭಿಸಬೇಕು, ಒಳ್ಳೆಯವರಾದ ಸಾತ್ವಿಕರಾದ ಮಕ್ಕಳು ದಯಪಾಲಿಸಲ್ಪಡಬೇಕು ಎಂದು ಮನುಷ್ಯನು ಇಚ್ಛಿಸುತ್ತಾನೆ. ತನ್ನ ತಂದೆ ತಾಯಂದಿರು, ಸಹೋದರ ಸಹೋದರಿಯರು, ಇತರ ಸಂಬಂಧಿಕರು, ದೂರ ಮತ್ತು ಸಮೀಪದ ಎಲ್ಲರೂ ಸುಖವಾಗಿರಲಿ, ಪರಸ್ಪರ ಜಗಳಗಳು ಇಲ್ಲದಿರಲಿ ಎಂದು ಸಹ ಆಶಿಸುತ್ತಾನೆ.

ನಾಗರಿಕ ಸಮಾಜದ ಪ್ರತಿಯೊಬ್ಬ ವ್ಯಕ್ತಿ ಅವನು ವಿದ್ಯಾವಂತನಾಗಿದ್ದರೂ ವಿದ್ಯೆರಹಿತನಾಗಿದ್ದರೂ ಶ್ರೀಮಂತನಾಗಿದ್ದರೂ ಬಡವನಾಗಿದ್ದರೂ ಬಿಳಿ ವರ್ಣದವನಾಗಿದ್ದರೂ ಕಪ್ಪು ವರ್ಣದವನಾಗಿದ್ದರೂ ಅರಬಿ ವಂಶಜನಾದರೂ ಅನರಬಿ ವಂಶಜನಾದರೂ ಪೂರ್ವ ದೇಶಗಳಿಗೆ ಸೇರಿದವನಾಗಿದ್ದರೂ ಪಶ್ಚಿಮ ದೇಶಗಳಿಗೆ ಸೇರಿದವನಾಗಿದ್ದರೂ ಇಚ್ಛಿಸುವುದು ತನಗೆ ಶಾಂತಿ ಸುಖ ಸಮಾಧಾನ ಭರಿತ ಜೀವಿತ ಲಭಿಸಬೇಕೆಂದಾಗಿದೆ. ತನ್ನ ಸುಖಕ್ಕೋಸ್ಕರ ಇತರರನ್ನು ಅವನು ಕಷ್ಟಕ್ಕೀಡಾಗುವಂತೆ ಮಾಡುತ್ತಾನೆ. ಸ್ವಾರ್ಥ ಲಾಭಕ್ಕೋಸ್ಕರ ಅನ್ಯರಿಗೆ ಹಾನಿಯನ್ನುಂಟು ಮಾಡಲು ಹಿಂಜರಿಯುವುದಿಲ್ಲ. ಇನ್ನೊಬ್ಬ ವ್ಯಕ್ತಿ ಸಹ ತನ್ನ ಸ್ವಂತ ಸುಖಕ್ಕೋಸ್ಕರ, ತನ್ನ ಕಷ್ಟವನ್ನು ನಿವಾರಿಸಲಿಕ್ಕೋಸ್ಕರ, ತನಗಾಗುವ ಹಾನಿಯನ್ನು ನಿವಾರಿಸಲು ತನ್ನೊಂದಿಗೆ ವರ್ತಿಸಿದ ಮೊದಲು ಪ್ರಸ್ತಾಪಿಸಿದ ವ್ಯಕ್ತಿಯ ಹಾಗೆಯೇ ವರ್ತಿಸುತ್ತಾನೆ. ಈ ರೀತಿ ಇಬ್ಬಗೆಯ ಅಶಾಂತಿಯ ಸರಪಳಿ ಪ್ರಾರಂಭವಾಗುತ್ತದೆ. ವೈಯಕ್ತಿಕ ಅಶಾಂತಿಯು ಮನೆಯಿಂದ ಹೊರಟು ಬಡಾವಣೆಯನ್ನೂ ಬಡಾವಣೆಯಿಂದ ಪಟ್ಟಣವನ್ನೂ ಪಟ್ಟಣದಿಂದ ದೇಶಕ್ಕೂ ವ್ಯಾಪಿಸುತ್ತದೆ. ಈ ಅಶಾಂತಿ ಪರಿಸ್ಥಿತಿಗಳೇ ದಿನಗಳೆದಂತೆ ಅಂತರ್ರಾಷ್ಟ್ರೀಯ ಅಶಾಂತಿಯಾಗಿ ಪರಿಣಮಿಸುತ್ತದೆ.

ಇದೊಂದು ಕಟ್ಟು ಕಥೆಯಲ್ಲ, ವಾಸ್ತವಿಕವಾಗಿದೆ. ನಾವು ಲೋಕದ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಿಗೆ ದೃಷ್ಟಿ ಹಾಯಿಸುವುದಾದರೆ ತಿಳಿಯುತ್ತದೆ ಜಾಗತಿಕ ಅಶಾಂತಿ ಹಗಲಿನ ನೆಮ್ಮದಿಯನ್ನೂ ರಾತ್ರಿಯ ನಿದ್ರೆಯನ್ನೂ ಕೆಡಿಸಿದೆ ಎನ್ನುವುದು ನಿರಾಕರಿಸಲಾಗದ ವಾಸ್ತವಿಕತೆಯಾಗಿದೆ. ಇದು ಎಲ್ಲರೂ ಅಂಗೀಕರಿಸುವ ವಿಷಯವಾಗಿದ್ದು ಪ್ರಿಂಟ್ ಮೀಡಿಯಾ, ಇಲೆಕ್ಟ್ರೋನಿಕ್ ಮೀಡಿಯಾ ಸೋಶಿಯಲ್ ಮೀಡಿಯಾದ ವೇದಿಕೆಗಳಲ್ಲಿ ಇದರ ಬಗ್ಗೆ ಬೊಬ್ಬೆ ಹಾಕಲಾಗುತ್ತಿದೆ.

ಈಗ ಎದ್ದೇಳುವ ಪ್ರಶ್ನೆ ಏನೆಂದರೆ ವೈಯಕ್ತಿಕ, ಸಾಮುದಾಯಿಕ ಮತ್ತು ಅಂತರ್ರಾಷ್ಟ್ರೀಯ ಶಾಂತಿ ಹೇಗೆ ಸ್ಥಾಪಿಸಬಹುದು? ಇದಕ್ಕಿರುವ ಉತ್ತರ ಇದಾಗಿದೆ: ಕೇವಲ ಪ್ರಕಟಣೆಗಳನ್ನು ನೀಡುವ ಮೂಲಕ ಮತ್ತು ಘೋಷಣೆಗಳನ್ನು ಕೂಗುವ ಮೂಲಕ ಈ ಸಮಸ್ಯೆ ಪರಿಹರಿಸಲ್ಪಡಲಾರದು. ಸಕ್ರಿಯ ಕ್ರಮಗಳು ಆವಶ್ಯಕವಾಗಿದೆ. ಈ ಪ್ರಕ್ರಿಯೆ ಮನೆಯಿಂದ ಪ್ರಾರಂಭಿಸಿ, ನೆರೆಹೊರೆಯವರಿಗೆ, ಬಡಾವಣೆಯವರಿಗೆ ನಗರ ವಾಸಿಗಳಿಗೆ, ದೇಶವಾಸಿಗಳಿಗೆ ವಿಸ್ತರಿಸಿ ಅಂತರ್ರಾಷ್ಟ್ರೀಯ ಹಂತಕ್ಕೆ ತಲಪುವ ಮತ್ತು ತಲಪಿಸುವ ಆವಶ್ಯಕತೆ ಇರುತ್ತದೆ.

ಈ ವಿಷಯಕ್ಕೆ ಸಂಬಂಧಿಸಿ ಮಾನವೀಯತೆಗೆ ಹಿತಕಾರಿಯಾಗಿದ್ದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಜೀವನ ಚರಿತ್ರೆಯ ಮೇಲೆ ದೃಷ್ಟಿ ಹಾಯಿಸುತ್ತೇವೆ ಮತ್ತು ಶಾಂತಿ ಸ್ಥಾಪನೆ ಬಗ್ಗೆ ಇಸ್ಲಾಮಿನ ಉಪದೇಶಗಳು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ಮಾದರಿಗೆ ಸಂಬಂಧಿಸಿ ಸ್ವಲ್ಪ ವಿವರಿಸುತ್ತೇವೆ.

**ಮನೆಗಳಲ್ಲಿ ಶಾಂತಿ:**

ಮೊತ್ತಮೊದಲು ನೋಡಬೇಕಾದುದು ಮನೆಗಳಲ್ಲಿ ಶಾಂತಿಯನ್ನು ಸ್ಥಾಪಿಸುವುದು ಹೇಗೆಂದು. ಇದಕ್ಕೆ ಸಂಬಂಧಿಸಿ ಪತಿ ಪತ್ನಿಯರ ಹಕ್ಕುಗಳ ಬಗ್ಗೆ ಮತ್ತು ಹೊಣೆಗಾರಿಕೆಗಳ ಬಗ್ಗೆ ಗಮನ ಹರಿಸಬೇಕಾಗಿದೆ. ಒಬ್ಬರಿನ್ನೊಬ್ಬರ ಭಾವನೆಗಳ ಬಗ್ಗೆ ಗಮನವಿರಿಸುವುದು ಆವಶ್ಯಕವಾಗಿದೆ. ತನ್ನ ಸುಖದ ಮೇಲೆ ತನ್ನ ಜೊತೆಗಾರ್ತಿ ಅಥವಾ ಜೊತೆಗಾರನ ಸುಖದ ಬಗ್ಗೆ ಆದ್ಯತೆ ನೀಡಬೇಕಾಗಿದೆ. ಹಾಗೆ ಮಾಡದಿದ್ದರೆ ಪ್ರತಿದಿನ ಪತಿ ಪತ್ನಿಯರ ಮಧ್ಯೆ ಜಗಳ ಪ್ರಾರಂಭವಾಗಿ ಮನೆಯ ಶಾಂತಿ ಕೆಟ್ಟುಹೋಗುತ್ತದೆ. ಅದು ಮಕ್ಕಳ ತರಬೇತಿಯ ಮೇಲೆ ಕೆಟ್ಟ ಪ್ರಭಾವ ಬೀರುತ್ತದೆ. ಅದರ ಬಗ್ಗೆ ಹೆಚ್ಚು ವಿವರಿಸಲು ಈಗ ಸಾಧ್ಯವಾಗದು. ಈ ವಿಷಯಕ್ಕೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶಾಂತಿ ಭರಿತ ಗೃಹ ಜೀವನಕ್ಕೆ ಸಂಬಂಧಿಸಿದ ಕೆಲವು ಹದೀಸುಗಳನ್ನು ನಿಮ್ಮ ಮುಂದಿರಿಸುತ್ತೇನೆ.

1. ತಿರ್ಮಿಧಿಯಲ್ಲಿರುವ ಒಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳುತ್ತಾರೆ: ನಿಮ್ಮ ಮನೆಯಲ್ಲಿರುವವರೊಂದಿಗೆ ಉತ್ತಮವಾಗಿ ವರ್ತಿಸುವವನೇ ನಿಮ್ಮ ಪೈಕಿ ಉತ್ತಮನಾಗಿದ್ದಾನೆ. ನಾನು ನಿಮಗಿಂತ ಮಿಗಿಲಾಗಿ ನನ್ನ ಮನೆಯಲ್ಲಿರುವವರೊಂದಿಗೆ ಉತ್ತಮವಾಗಿ ವರ್ತಿಸುವವನಾಗಿದ್ದೇನೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತರಬೇತಿಯನ್ನು ನೀಡಲಿಕ್ಕಾಗಿ ಮತ್ತು ಸಾಮುದಾಯಿಕ ಆವಶ್ಯಕತೆಗಳನ್ನು ಈಡೇರಿಸಲು ಹಲವು ವಿವಾಹಗಳನ್ನು ಮಾಡಬೇಕಾಯಿತು. ಒಮ್ಮೆ ಒಂಬತ್ತು ಪತ್ನಿಯರು ಅವರ ಮನೆಗಳಲ್ಲಿದ್ದರು. ಅವರೆಲ್ಲರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ವರ್ತನೆ ಮತ್ತು ನ್ಯಾಯನಿಷ್ಠೆಯ ಕಾರಣದಿಂದ ತೃಪ್ತಿಯಿಂದ ಜೀವಿಸುತ್ತಿದ್ದರು.

2. ಮುಸ್ಲಿಮ್ ಹದೀಸು ಗ್ರಂಥದಲ್ಲಿರುವ ಒಂದು ಹದೀಸಿನಲ್ಲಿ ತ್ಯಾಗ ಮನೋಭಾವವನ್ನು ಬೋಧಿಸುತ್ತಾ ಪತಿ ಪತ್ನಿಯರು ಒಬ್ಬರಿನ್ನೊಬ್ಬರ ಒಳಿತುಗಳನ್ನು ಅನ್ವೇಷಿಸಬೇಕೆಂದು ಉಪದೇಶಿಸುತ್ತಾ ಹೀಗೆ ಹೇಳಿದ್ದಾರೆ:

ನಿಮಗೆ ಇನ್ನೊಬ್ಬರಲ್ಲಿ ಯಾವುದಾದರೂ ನ್ಯೂನತೆ ಕಂಡರೆ ಮತ್ತು ಅವರ ವರ್ತನೆ ನಿಮಗೆ ಇಷ್ಟಕರವಾಗಿರದಿದ್ದರೆ ನೀವು ನಿಮಗೆ ಇಷ್ಟವಾಗುವ ಅವರ ವರ್ತನೆಗಳ ಬಗ್ಗೆ ಲಕ್ಷ್ಯ ನೀಡಿ ತ್ಯಾಗ ಮನೋಭಾವದಿಂದ ಅವರೊಂದಿಗೆ ವರ್ತಿಸಿ ಸೌಹಾರ್ದದ ವಾತಾವರಣವನ್ನು ಸೃಷ್ಟಿಸಬೇಕು.

3. ಮಸ್‌ನದ್ ಅಹ್ಮದ್ ಹದೀಸು ಗ್ರಂಥದಲ್ಲಿರುವ ಇನ್ನೊಂದು ಹದೀಸು ಹೀಗಿದೆ, ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರೊಂದಿಗೆ ಒಬ್ಬರು ಕೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮನೆಯಲ್ಲಿ ಏನು ಮಾಡುತ್ತಿದ್ದರು? ಹಝ್ರತ್ ಆಯಿಶಾ(ರ) ಹೇಳಿದರು: ಅವರು ಇತರ ಎಲ್ಲ ಮನುಷ್ಯರ ಹಾಗೆ ಒಬ್ಬ ಮನುಷ್ಯರಾಗಿದ್ದರು. ಅವರು ಬಟ್ಟೆಗಳಿಗೆ ಸ್ವತಃ ತೇಪೆ ಹಾಕುತ್ತಿದ್ದರು. ಹೆಣ್ಣಾಡಿನ ಹಾಲು ಸ್ವತಃ ಹಿಂಡುತ್ತಿದ್ದರು. ಅವರು ಸ್ವಂತ ಕೆಲಸ ತಾನೇ ಮಾಡುತ್ತಿದ್ದರು.

4. ಮುಸ್ಲಿಮ್ ಹದೀಸು ಗ್ರಂಥದಲ್ಲಿರುವ ಇನ್ನೊಂದು ಹದೀಸು ಹೀಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಾತ್ರಿ ತಡವಾಗಿ ಮನೆಗೆ ಬಂದರೆ ಯಾರಿಗೂ ತೊಂದರೆ ನೀಡದೆ ನಿದ್ರೆಯಿಂದ

ಎಬ್ಬಿಸದೆ ಆಹಾರವನ್ನು ಭಕ್ಷಿಸುತ್ತಿದ್ದರು. ಅಥವಾ ಹಾಲು ಕುಡಿಯುತ್ತಿದ್ದರು.

5. ತಿರ್ಮಿಧಿ ಹದೀಸು ಗ್ರಂಥದಲ್ಲಿ ಒಂದು ಹದೀಸು ಹೀಗಿದೆ: ಹಝ್‌ರತ್ ಆಯಿಶ(ರ) ಹೀಗೆ ಹೇಳಿದರು: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಇತರ ಎಲ್ಲ ಮನುಷ್ಯರಿಗಿಂತ ಮೃದು ಸ್ವಭಾವ ಹೊಂದಿದವರೂ ಎಲ್ಲರಿಗಿಂತ ಹೆಚ್ಚು ದಯೆವುಳ್ಳವರೂ ಸಾಮಾನ್ಯ ಮನುಷ್ಯರ ಹಾಗೆ ಸೌಮ್ಯವಾಗಿ ಮನೆಯಲ್ಲಿ ಜೀವಿಸುವವರೂ ಆಗಿದ್ದರು. ಅವರು ಯಾರ ವಿರುದ್ಧವೂ ಹುಬ್ಬೇರಿಸಲಿಲ್ಲ. ಯಾವಾಗಲೂ ಮುಗುಳು ನಗುತ್ತಿದ್ದರು. ಅವರು ತಮ್ಮ ಜೀವಿತವಿಡೀ ಎಂದೂ ಯಾವುದೇ ಪತ್ನಿಯ ಮೇಲೆ ಕೈ ಎತ್ತಿರಲಿಲ್ಲ ಮತ್ತು ತನ್ನ ಯಾವುದೇ ಸೇವಕನಿಗೆ ಹೊಡೆದಿರಲಿಲ್ಲ.

ನಮ್ಮ ಯಜಮಾನರಾದ ನಮ್ಮ ನೇತಾರರಾದ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆದರ್ಶ ಉತ್ತಮ ವರ್ತನೆಗಳು ಅವರ ಗಾರ್ಹಿಕ ಜೀವಿತವನ್ನು ಶಾಂತಿ ಭರಿತವೂ ಸ್ವರ್ಗ ಸಮಾನವೂ ಆಗಿ ಮಾಡಿತು. ಇದೇ ಕಾರಣದಿಂದ ಅವರ ಎಲ್ಲ ಪತ್ನಿಯರು ಯಾವಾಗಲೂ ಅವರಲ್ಲಿ ಅನುರಕ್ತೆಯರಾಗಿರುತ್ತಿದ್ದರು. **ಅಲ್ಲಾಹುಮ್ಮ ಸಲ್ಲಿಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್ ವ ಬಾರಿಕ್ ವ ಸಲ್ಲಿಮ್.**

**ಬಡಾವಣೆಯಲ್ಲಿರುವವರ ಶಾಂತಿ:**

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: ಮಾತಾಪಿತರಿಗೆ ಒಳಿತನ್ನು ಮಾಡಿರಿ. ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ ಒಳಿತನ್ನು ಮಾಡಿರಿ. (ಪವಿತ್ರ ಖುರ್‌ಆನ್ 4:37).

ಈ ವಿಷಯಕ್ಕೆ ಸಂಬಂಧಿಸಿ ಕೆಲವು ಹದೀಸುಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ.

1. ಇಬ್ನುಮಾಜ ಹದೀಸು ಗ್ರಂಥದಲ್ಲಿರುವ ಒಂದು ಹದೀಸು ಹೀಗಿದೆ: ಹಝ್‌ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ: ಒಬ್ಬ ವ್ಯಕ್ತಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ನಿವೇದಿಸಿದನು: ನಾನು ಒಳ್ಳೆಯದಾಗಿ ವರ್ತಿಸುತ್ತಿದ್ದೇನೆ ಅಥವಾ ಕೆಟ್ಟದಾಗಿ ವರ್ತಿಸುತ್ತಿದ್ದೇನೆ ಎಂದು ನನಗೆ ಹೇಗೆ ತಿಳಿದುಕೊಳ್ಳಲು ಸಾಧ್ಯವಿದೆ? ಆಗ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿನ್ನ ನೆರೆಹೊರೆಯವರು ನೀನು ಒಳ್ಳೆಯವನೆಂದು ಹೇಳುತ್ತಾರೆಂದು ನೀನು ಆಲಿಸಿದರೆ ನೀನು ತಿಳಿದುಕೊಳ್ಳು ನಿನ್ನ ವರ್ತನೆ ಒಳ್ಳೆಯದಾಗಿದೆ ಎಂದು. ನಿನ್ನ ನೆರೆಹೊರೆಯವರು ನಿನ್ನ ಬಗ್ಗೆ ನೀನು ಕೆಟ್ಟವನೆಂದು ಹೇಳುತ್ತಿರುವುದಾಗಿ ನೀನು ಆಲಿಸಿದರೆ ನೀನು ತಿಳಿದುಕೊಳ್ಳು ನಿನ್ನ ವರ್ತನೆ ಕೆಟ್ಟದಾಗಿದೆ ಎಂದು.

2. ಬುಖಾರಿಯ ಒಂದು ಹದೀಸು ಹೀಗಿದೆ: ಹಝ್‌ರತ್ ಇಬ್ನು ಉಮರ್(ರ) ಮತ್ತು ಹಝ್‌ರತ್ ಆಯಿಶ(ರ) ಹೇಳುತ್ತಾರೆ: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಜಿಬ್ರೀಲ್ ನನ್ನೊಂದಿಗೆ ನೆರೆಹೊರೆಯವರೊಂದಿಗೆ ಉತ್ತಮವಾಗಿ ವರ್ತಿಸಬೇಕೆಂದು ಎಷ್ಟು ಒತ್ತಿ ಹೇಳುತ್ತಾ ಇರುತ್ತಾರೆಂದರೆ ನಾನು ಯೋಚಿಸಿದೆ – ನೆರೆಹೊರೆಯವರನ್ನು ವಾರೀಸುದಾರರನ್ನಾಗಿ ಮಾಡುವರೋ ಎಂದು.

3. ಬುಖಾರಿಯ ಒಂದು ಹದೀಸು ಹೀಗಿದೆ: ಹಝ್‌ರತ್ ಅಬೂಹುರೈರ(ರ) ಹೇಳಿದರು: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಲ್ಲಾಹನಾಣೆ ಆ ವ್ಯಕ್ತಿ ಸತ್ಯವಿಶ್ವಾಸಿ ಅಲ್ಲ. ಅಲ್ಲಾಹನಾಣೆ ಆ ವ್ಯಕ್ತಿ ಸತ್ಯವಿಶ್ವಾಸಿ ಅಲ್ಲ. ಅಲ್ಲಾಹನಾಣೆ ಆ ವ್ಯಕ್ತಿ ಸತ್ಯವಿಶ್ವಾಸಿ ಅಲ್ಲ. (ಮೂರು ಸಾರಿ ಹಾಗೆ ಹೇಳಿದರು). ಅವರೊಂದಿಗೆ ಕೇಳಲಾಯಿತು: ಯಾ ರಸೂಲುಲ್ಲಾಹ್, ಸತ್ಯವಿಶ್ವಾಸಿಯಾಗಿರದವನು ಯಾರು? ಅವರು ಹೇಳಿದರು: ಯಾರ ನೆರೆಹೊರೆಯವ ಅವನ ಉಪದ್ರವಗಳಿಂದಲೂ ಅಚಾನಕ ಆಕ್ರಮಣಗಳಿಂದಲೂ ಸುರಕ್ಷಿತನಾಗಿಲ್ಲವೋ ಅಂತಹ ವ್ಯಕ್ತಿ ಸತ್ಯವಿಶ್ವಾಸಿ ಅಲ್ಲ.

ಈಗಿನ ಕಾಲದಲ್ಲಿ ಅಚಾನಕ ಆಕ್ರಮಣ ವಿವಿಧ ರೀತಿಗಳಲ್ಲಿ ನಡೆಯುತ್ತವೆ. ರಾತ್ರಿ ಹೊತ್ತು ರೇಡಿಯೋ, ಟಿ.ವಿ. ಕಾರ್ಯಕ್ರಮಗಳನ್ನು ಉಚ್ಚ ಧ್ವನಿಯಲ್ಲಿ ಆಲಿಸುತ್ತಾ ಇರುವಾಗ ನೆರೆಹೊರೆಯವರು ಸುಖವಾಗಿ ನಿದ್ರಿಸಲಾರರು. ಕೆಲವು ಸಾರಿ ಒಬ್ಬನ ಮನೆಯ ಕಸ ಇನ್ನೊಬ್ಬನ ಮನೆ ಮುಂದೆ ಹಾಕಲಾಗುತ್ತಿದೆ ಇವುಗಳೆಲ್ಲ ಆಕ್ರಮಣಗಳಾಗಿವೆ.

4. ಮುಸ್ಲಿಮ್ ಹದೀಸು ಗ್ರಂಥದಲ್ಲಿ ಈ ಕೆಳಗಿನ ಹದೀಸು ಇದೆ: ಹಝ್‌ರತ್ ಅಬೂಝರ್(ರ)ರೊಂದಿಗೆ ಹಝ್‌ರತ್ ಪೈಗಂಬರ್(ಸ) ಹೇಳಿದರು: ಅಬೂಝರ್ ನೀವು ಮನೆಯಲ್ಲಿ ಒಳ್ಳೆಯ ಸಾರು ಮಾಡಿದರೆ ಅದಕ್ಕೆ ನೀರು ಸೇರಿಸಿ ಬೇಯಿಸಿರಿ ಮತ್ತು ನಿಮ್ಮ ನೆರೆಹೊರೆಯವರ ಬಗ್ಗೆ ಗಮನಿಸಿರಿ. ಎಂದರೆ ಯಾವುದಾದರೂ ನೆರೆಹೊರೆಯವನಿಗೆ ಸಹ ಸಾರಿನ ಒಂದು ಪಾಲು ನೀಡಿರಿ.

ಬಡಾವಣೆಯ ಎಲ್ಲರೂ ತಂತಮ್ಮ ನೆರೆಹೊರೆಯವರ ಬಗ್ಗೆ ಈ ರೀತಿ ಗಮನಿಸುವುದಾದರೆ ಮತ್ತು ಎಲ್ಲ ರೀತಿಯ ಉಪದ್ರವಗಳಿಂದ ದೂರ ಸರಿಯುವುದಾದರೆ ಬಡವಾಣೆಯಲ್ಲಿ ಪೂರ್ಣವಾಗಿ ಶಾಂತಿ ಸ್ಥಾಪಿತವಾಗುವುದು.

**ನಗರಗಳಲ್ಲಿ ಶಾಂತಿ:**

ನಗರದ ನಾಗರಿಕರ ಹಕ್ಕುಗಳ ಬಗ್ಗೆ ಮತ್ತು ಹೊಣೆಗಾರಿಕೆಗಳ ಬಗ್ಗೆ ಸರಿಯಾದ ಜ್ಞಾನ ಗಳಿಸಿ ಅವುಗಳನ್ನು ಈಡೇರಿಸಲು ಪ್ರಯತ್ನಿಸುವಾಗ ನಗರವು ಶಾಂತಿದಾಮವಾಗಲು ಸಹಾಯಕವಾಗುವುದು. ಇದಕ್ಕೆ ಸಂಬಂಧಿಸಿ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೆಲವು ಉಪದೇಶಗಳನ್ನೂ ಮಾರ್ಗದರ್ಶನಗಳನ್ನೂ ಆಲಿಸಿರಿ.

1. ಒಬ್ಬರಿನ್ನೊಬ್ಬರನ್ನು ಕಾಣುವಾಗ ಅಸ್ಸಲಾಮು ಅಲೈಕುಮ್ ಹೇಳಿರಿ. ಹಿಂದೂಸ್ಥಾನದಲ್ಲಿ ವಿವಿಧ ಧರ್ಮಗಳ ಅನುಯಾಯಿಗಳು ತಂತಮ್ಮ ರೀತಿಯಲ್ಲಿ ನಮಸ್ತೆ, ನಮಸ್ಕಾರ, ಸತ್‌ಶ್ರೀ ಅಕಾಟ್, ಗುಡ್‌ಮಾರ್ನಿಂಗ್ ಮೊದಲಾದ ಶಬ್ದಗಳನ್ನು ಬಳಸಿ ಒಬ್ಬರಿನ್ನೊಬ್ಬರನ್ನು ಅಭಿವಂದಿಸುತ್ತಾರೆ. ಪರಸ್ಪರ ಹಸ್ತದಾನ ಮಾಡುತ್ತಾರೆ. ಇದರಿಂದ ಪ್ರೀತಿ ವಿಶ್ವಾಸಗಳು ವರ್ಧಿಸುತ್ತವೆ. ಜುಗುಪ್ಸೆ ಮತ್ತು ಅಸಹ್ಯತೆ ದೂರ ಸರಿಯುತ್ತದೆ.

2. ಮಾರ್ಗಗಳಿಗೆ ಕೊಳಕು ವಸ್ತುಗಳನ್ನೂ ಕಸವನ್ನೂ ಹಾಕಬಾರದು. ಮಾರ್ಗದಲ್ಲಿ ನಡೆಯುವವರಿಗೆ ಕಷ್ಟವನ್ನುಂಟುಮಾಡುವ ವಸ್ತುಗಳನ್ನು ದೂರ ಸರಿಸಬೇಕು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಸಹ ಹೇಳಿದ್ದಾರೆ: ಮಾರ್ಗಗಳಿಂದ ನಡೆಯುವವರಿಗೆ ಕಷ್ಟ ನೀಡುವ ವಸ್ತುಗಳನ್ನು ದೂರ ಸರಿಸುವುದು ಒಂದು ಸದಖ (ದಾನಧರ್ಮ) ಆಗಿದೆ ಎಂದು.

3. ಮಾರ್ಗಗಳಲ್ಲಿ ವಲಯಾಕೃತಿಯಲ್ಲಿ ಕುಳಿತುಕೊಳ್ಳುವುದು, ನಿಲ್ಲುವುದು ತಡೆಗಟ್ಟಬೇಕು. ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇಯ್ಯಾಕುಮ್ ವಲ್ ಜುಲೂಸು ಅಲತ್ತುರುಖಾತ್. ಎಚ್ಚರಿಕೆ ನೀಡುತ್ತೇನೆ ಮಾರ್ಗಗಳಲ್ಲಿ ಕುಳಿತುಕೊಳ್ಳಬೇಡಿರಿ. ಸಹಾಬರು ಹೇಳಿದರು: ಯಾ ರಸೂಲುಲ್ಲಾಹ್ ನಮಗೆ ಅಂತಹ ಸಭೆ ನಡೆಸದಿರಲಾಗುವುದಿಲ್ಲ. ಅಲ್ಲಿ ನಾವು ಮಾತನಾಡುತ್ತೇವೆ ಮತ್ತು ಸಮಾಲೋಚನೆ ನಡೆಸುತ್ತೇವೆ. ಆಗ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿಮಗೆ ಅಲ್ಲಿ ಕುಳಿತುಕೊಳ್ಳಲೇ ಬೇಕಾಗಿದ್ದರೆ ಮಾರ್ಗದ ಹಕ್ಕುಗಳನ್ನು ಈಡೇರಿಸಿರಿ. ಮಾರ್ಗಗಳ ಹಕ್ಕುಗಳೇನೆಂದು ಸಹಾಬರು ಕೇಳಿದಾಗ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀವು ನಿಮ್ಮ ದೃಷ್ಟಿಗಳನ್ನು ತಗ್ಗಿಸಿರಿ. ಯಾರಿಗೂ ಕಷ್ಟ ನೀಡಬೇಡಿರಿ, ಸಲಾಮ್‌ಗೆ ಉತ್ತರ ಹೇಳಿರಿ. ಉತ್ತಮ ವಿಷಯಗಳ ಬಗ್ಗೆ ಉಪದೇಶ ನೀಡಿರಿ. ಕೆಟ್ಟ ವಿಷಯಗಳನ್ನು ತಡೆಯಿರಿ. (ಎಲ್ಲರೂ ಅಂಗೀಕರಿಸಿದ ಹದೀಸು)

4. ರೋಗಿಗಳನ್ನು ಸಂದರ್ಶಿಸಬೇಕು. ಅವರಿಗೆ ಧೈರ್ಯ ಹೇಳಬೇಕು ಮತ್ತು ಒಳ್ಳೆಯ ಸಲಹೆ ನೀಡಬೇಕು. ಅವರಿಗೋಸ್ಕರ ಪ್ರಾರ್ಥಿಸಬೇಕು.

5. ಮೃತನಾದವನನ್ನು ದಫನು ಮಾಡಲು ಸಹಕಾರ ನೀಡಬೇಕು. ಮೃತರಿಗೆ ಗೌರವ ನೀಡಬೇಕು. ಒಬ್ಬ ಯಹೂದಿಯ ಮೃತ ದೇಹವನ್ನು ಕೊಂಡೊಯ್ಯುತ್ತಿದ್ದಾಗ ಅದನ್ನು ನೋಡಿ ಹಝ್‌ರತ್ ಪೈಗಂಬರರು ಗೌರವಭಾವದಿಂದ ಎದ್ದು ನಿಂತರು. ಸಹಾಬರು ಹೇಳಿದರು– ಅದು ಯಹೂದಿಯ ಮೃತದೇಹವೆಂದು. ಆಗ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಏನು ಅವನಲ್ಲಿ ಮನುಷ್ಯಾತ್ಮ ಇರಲಿಲ್ಲವೇ? ಎಂದರೆ ಎಲ್ಲ ಮನುಷ್ಯರು ಮನುಷ್ಯರೆಂಬ ನೆಲೆಯಲ್ಲಿ ಸಮಾನರು.

ಇದೇ ರೀತಿ ಅಸಂಖ್ಯಾತ ಮಾರ್ಗದರ್ಶಕ ಉಪದೇಶಗಳಿವೆ. ನಗರವಾಸಿಗಳಿಗೆ ಶಾಂತಿ ಮತ್ತು ಸುಖ ನೀಡಲು ಮತ್ತು ಶಾಂತಿಯ ವಾತಾವರಣ ಸೃಷ್ಟಿಸಲ್ಪಡು ಅವು ಸಹಕಾರಿಗಳಾಗಿವೆ. ನಾನು ಸಮಯಾವಕಾಶದ ಕೊರತೆಯ ಕಾರಣದಿಂದ ಇದಕ್ಕೆ ಸಂಬಂಧಿಸಿ ಕೆಲವು ಹದೀಸುಗಳನ್ನು ಮಾತ್ರ ನಿಮ್ಮ ಮುಂದೆ ಇರಿಸುತ್ತೇನೆ.

1. ಹಝ್‌ರತ್ ಅಬ್ದುಲ್ಲಾ ಬಿನ್ ಉಮರ್ ಹೇಳುತ್ತಾರೆ: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಒಬ್ಬರಿನ್ನೊಬ್ಬರ ವಿರುದ್ಧ ಅಸೂಯೆಪಡಬೇಡಿರಿ. ಒಬ್ಬರಿನ್ನೊಬ್ಬರಿಗೆ ಹಾನಿಯನ್ನುಂಟುಮಾಡಲು ಹೆಚ್ಚು ಹೆಚ್ಚಾಗಿ ಬೆಲೆ ಹೇಳಬೇಡಿರಿ. ಒಬ್ಬರಿನ್ನೊಬ್ಬರ ಬಗ್ಗೆ ದ್ವೇಷ ಹೊಂದಬೇಡಿರಿ. ಒಬ್ಬರಿನ್ನೊಬ್ಬರಿಗೆ ಬೆನ್ನು ತಿರುಗಿಸಬೇಡಿರಿ. ಎಂದರೆ ಸಂಬಂಧ ವಿಚ್ಛೇದಿಸಬೇಡಿರಿ. ಒಬ್ಬನು ವ್ಯಾಪಾರ ಮಾತುಕತೆ ನಡೆಸುವಾಗ ಮಧ್ಯೆ ಪ್ರವೇಶಿಸಿ ವ್ಯಾಪಾರ ಮಾಡಬೇಡಿರಿ. ನೀವು ಅಲ್ಲಾಹನ ದಾಸರಾಗಿರುವಿರಿ. ಪರಸ್ಪರ ಸಹೋದರರ ಹಾಗೆ ಜೀವಿಸಿರಿ.

(ಮುಸ್ಲಿಮ್).

2. ಹಝ್ರತ್ ಅಮರ್ ಬಿನ್ ಶುಐಬ್ ತನ್ನ ಪಿತ ಮತ್ತು ತಾತರಿಂದ ವರದಿ ಮಾಡುತ್ತಾ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಕಿರಿಯರ ಮೇಲೆ ಕರುಣೆ ದೋರದವನು ಮತ್ತು ಹಿರಿಯರನ್ನು ಗೌರವಿಸದವನು ನಮ್ಮೊಂದಿಗೆ ಸೇರಿದವನಲ್ಲ. (ತಿರ್ಮಿಧಿ)

3. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್ ಹೇಳಿದರು: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಸೃಷ್ಟಿಗಳೆಲ್ಲವೂ ಅಲ್ಲಾಹನ ಕುಟುಂಬದವರಾಗಿದ್ದಾರೆ. ತನ್ನ ಕುಟುಂಬದವರೊಂದಿಗೆ ಒಳ್ಳೆಯ ರೀತಿ ವರ್ತಿಸಿ ಅವರ ಆವಶ್ಯಕತೆಗಳನ್ನು ಈಡೇರಿಸುವ ಬಗ್ಗೆ ಲಕ್ಷ್ಯ ನೀಡುವವನನ್ನು ಅಲ್ಲಾಹನು ಬಹಳ ಇಷ್ಟಪಡುತ್ತಾನೆ. (ಮಿಷ್ಕಾತ್).

4. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮನ ಚಿಹ್ನೆ ಇದಾಗಿದೆ ಎಂದು ಹೇಳಿದರು: ಯಾವುದೇ ಮನುಷ್ಯನಿಗೆ ನಿಷ್ಕಾರಣವಾಗಿ ಯಾವುದೇ ಕಷ್ಟ ಅವನಿಂದ ತಲಪಲಾರದು.

ಹಝ್ರತ್ ಅಬೂ ಹುರೈರ(ರ) ಹೀಗೆ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಮುಸ್ಲಿಮ್ ಯಾರೆಂದರೆ ಅವನ ಕೈಯಿಂದ ಮುಸ್ಲಿಮನು ಸುರಕ್ಷಿತನಾಗಿರುತ್ತಾನೆ. ಯಾರಿಂದ ಜನರ ಜೀವಕ್ಕೆ ಮತ್ತು ಸಂಪತ್ತಿಗೆ ಯಾವುದೇ ಅಪಾಯವಿರುವುದಿಲ್ಲವೋ ಅವನೇ ಮೂಮಿನ್ ಆಗಿದ್ದಾನೆ. (ತಿರ್ಮಿಧಿ).

5. ಮನುಷ್ಯರಿಗೆ ಮಾತ್ರವಲ್ಲ ಪ್ರಾಣಿಗಳಿಗೂ ಕಷ್ಟ ನೀಡುವುದನ್ನು ತಡೆಗಟ್ಟಲಾಗಿದೆ. ಹಝ್ರತ್ ಇಬ್ನು ಉಮರ್(ರ) ಹೇಳುತ್ತಾರೆ: ಒಬ್ಬ ಮಹಿಳೆ ಒಂದು ಬೆಕ್ಕನ್ನು ಕಟ್ಟಿಹಾಕಿ ಅದು ಹಸಿವೆಯಿಂದ ಸಾಯುವಂತೆ ಮಾಡಿದುದರಿಂದ ಶಿಕ್ಷೆ ನೀಡಲಾಯಿತು. ಆಕೆ ಆಹಾರ ನೀರು ಕೊಡಲಿಲ್ಲ. ಅದು ಅಲೆದಾಡಿ ಇಲಿ ಮೊದಲಾದುವುಗಳನ್ನು ತಿಂದು ಬದುಕಲು ಬಿಡಲಿಲ್ಲ. ಈ ದೌರ್ಜನ್ಯದ ಕಾರಣದಿಂದ ನರಕಾಗ್ನಿಗೆ ಹಾಕಲ್ಪಟ್ಟಳು. (ಮುಸ್ಲಿಮ್).

6. ಹಝ್ರತ್ ಅಬ್ದುಲ್ಲಾ(ರ) ಹೇಳುತ್ತಾರೆ: ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಪ್ರಯಾಣಿಸುತ್ತಿದ್ದಾಗ ಅವರು ಯಾವುದೋ ಆವಶ್ಯಕತೆಗೋಸ್ಕರ ನಮ್ಮಿಂದ ದೂರ ಹೋದರು. ನಾವು ಹುಮ್ರ ಎಂಬ ಪಕ್ಷಿಯನ್ನು ಕಂಡೆವು. ಅದರ ಜೊತೆ ಅದರ ಎರಡು ಮರಿಗಳಿದ್ದುವು. ನಾವು ಆ ಪಕ್ಷಿಯ ಆ ಎರಡು ಮರಿಗಳನ್ನು ಹಿಡಿದುಕೊಂಡೆವು. ಆಗ ಪಕ್ಷಿ ನಮ್ಮ ತಲೆಗಳ ಮೇಲೆ ಸುತ್ತಾಡಲು ತೊಡಗಿತು. ಅಷ್ಟರಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಳಿ ಬಂದರು. ಅವರು ಹೇಳಿದರು: ಆ ಪಕ್ಷಿಗೆ ತೊಂದರೆ ಕೊಟ್ಟವರು ಯಾರು? ಆ ಪಕ್ಷಿಯ ಮರಿಗಳನ್ನು ಅದಕ್ಕೆ ಮರಳಿಸಿರಿ.

ಅನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೋಡಿದರು ಯಾರೋ ಇರುವೆಗಳ ಬಿಲವನ್ನು ಸುಡುತ್ತಿದ್ದಾರೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನ ಹೊರತು ಬೇರೆ ಯಾರಿಗೂ ಜೀವಿಗಳನ್ನು ಬೆಂಕಿಯಿಂದ ಸುಟ್ಟುಹಾಕುವ ಅಧಿಕಾರವಿಲ್ಲ. (ಅಬೂದಾಊದ್).

ಇವುಗಳು ಚಿಕ್ಕ ಮತ್ತು ಸಾಮಾನ್ಯ ಉಪದೇಶಗಳೆಂದು ಕಾಣಿಸುವುದಾದರೂ ಮನುಷ್ಯರನ್ನೂ ಇತರ ಸೃಷ್ಟಿಗಳನ್ನೂ ಕಷ್ಟಗಳಿಂದ ರಕ್ಷಿಸಲು, ಸುಖವನ್ನು ನೀಡಲು ಮತ್ತು ಶಾಂತಿ ಕಾಪಾಡಲು ಬಹಳ ಮಹತ್ವಪೂರ್ಣವಾಗಿವೆ.

**ಸರಕಾರದ ಹಕ್ಕುಗಳು ಮತ್ತು ಹೊಣೆಗಾರಿಕೆಗಳು**

ಇಷ್ಟರ ತನಕ ಮನುಷ್ಯರ ಪರಸ್ಪರ ಸಂಬಂಧಗಳ ಬಗ್ಗೆ ಅವರ ಹಕ್ಕುಗಳ ಬಗ್ಗೆ, ಹೊಣೆಗಾರಿಕೆಗಳ ಬಗ್ಗೆ ವಿವರಿಸಿದೆ. ಇನ್ನು ಮುಂದೆ ಸರಕಾರದ ಮತ್ತು ರಾಜ್ಯದ ಹಕ್ಕುಗಳ ಬಗ್ಗೆ ಮತ್ತು ಹೊಣೆಗಾರಿಕೆಗಳ ಬಗ್ಗೆ ವಿವರಿಸುವುದು ಆವಶ್ಯಕವೆಂದು ಭಾವಿಸುತ್ತೇನೆ.

ಪ್ರತಿಯೊಂದು ದೇಶದ ಸರಕಾರದ ಪ್ರಥಮ ಹೊಣೆಗಾರಿಕೆ ದೇಶದ ಜನರ ಮೂಲಭೂತ ಆವಶ್ಯಕತೆಗಳಾದ ಯೋಗ್ಯ ಆಹಾರ, ಯೋಗ್ಯ ಪೋಷಾಕು ಮತ್ತು ಸರಕಾರದ ಸಾಧನ ಸಂಪತ್ತುಗಳಿಗನುಸಾರವಾಗಿ ವಾಸ್ತವ್ಯ ವ್ಯವಸ್ಥೆ ಮಾಡಬೇಕಾಗಿದೆ ಎನ್ನುವುದಾಗಿದೆ.

ಪವಿತ್ರ ಖುರ್‌ಆನ್ ಮನುಷ್ಯರ ಮೂಲಭೂತ ಆವಶ್ಯಕತೆಗಳ ಬಗ್ಗೆ ಮಾರ್ಗದರ್ಶಕ ತತ್ವವನ್ನು ಹೀಗೆ ವಿವರಿಸಿದೆ:

**ಇನ್ನಲಕ ಅಲ್ಲಾ ತಜೂಅ ಫೀಹಾ ವಲಾ ತಅ್‌ರಾ ವ ಇನ್ನಕ ಲಾ ತತ್‌ಮಊ ಫೀಹಾ ವಲಾ ತಝ್‌ಹಾ.**

ಇಲ್ಲಿ ನಿನಗೆ ಹಸಿವೆ ಮತ್ತು ನಗ್ನತೆಯ ಬಾಧೆ ತಟ್ಟದು. ಬಾಯಾರಿಕೆ ಮತ್ತು ಬಿಸಿಲ ಬೇಗೆಗೆ ಕೂಡ ನೀನು ತುತ್ತಾಗಲಾರೆ. (ಪವಿತ್ರ ಖುರ್‌ಆನ್ 29:119, 120).

ಹಸಿವು, ದಾಹ, ನಿವಾರಿಸಲು ಮತ್ತು ಪೋಷಾಕು ಒದಗಿಸಲು ಜನರು ಪರಸ್ಪರ ಸಹಾಯ ನೀಡುತ್ತಾರಾದರೂ ವಿವಿಧ ಸಂಸ್ಥೆಗಳು ಮತ್ತು ಓಊಔಗಳು ಮಾನವರ ಸೇವೆಗೋಸ್ಕರ ಕಾರ್ಯಪ್ರವರ್ತಕರಾಗುತ್ತಾರಾದರೂ ಸರಕಾರದ ಮಹತ್ವಪೂರ್ಣ ಹೊಣೆಗಾರಿಕೆ ತನ್ನ ಜನರಿಗೆ ಸ್ಥಿರವಾದ ವ್ಯವಸ್ಥೆ ಮಾಡುವುದಾಗಿದೆ. ಆ ಮೂಲಕ ಜನರಿಗೆ ಅವರ ಆವಶ್ಯಕತೆಗನುಸಾರವಾಗಿ ಆಹಾರ, ಬಟ್ಟೆ ಮತ್ತು ವಾಸ್ತವ್ಯ ಲಭಿಸುವಂತಾಗಬೇಕು. ಸರಕಾರ ಈ ನಿಟ್ಟಿನಲ್ಲಿ ತನ್ನ ಹೊಣೆಗಾರಿಕೆಗಳನ್ನು ಈಡೇರಿಸಲು ನಿರ್ಲಕ್ಷಿಸುವುದಾದರೆ ಮತ್ತು ಸುವ್ಯವಸ್ಥೆ ಸ್ಥಾಪಿಸುವುದಿಲ್ಲವಾದರೆ ಜನರಲ್ಲಿ ಅತೃಪ್ತಿ ಮತ್ತು ಅಶಾಂತಿ ಹಬ್ಬುತ್ತದೆ ಮತ್ತು ಅವುಗಳ ಪರಿಣಾಮವಾಗಿ ದೇಶದಲ್ಲಿ ವಿವಿಧ ಅಪರಾಧಗಳು ವರ್ಧಿಸಲು ಪ್ರಾರಂಭಿಸುತ್ತವೆ.

ಇದಕ್ಕೆ ಸಂಬಂಧಿಸಿ ಮಹತ್ವಪೂರ್ಣವಾದ ವಿಷಯವೇನೆಂದರೆ ಜನರಿಗೆ ಅವರಿಗೆ ಅರ್ಹವಾದ ಜೀವನಾಧಾರ ಒದಗಿಸಬೇಕು ಮತ್ತು ಅವರ ಸಾಮರ್ಥ್ಯಕ್ಕೆ ಅನುಸಾರವಾಗಿ ಅವರ ಸ್ವಂತ ಕಾಲಿನ ಮೇಲೆ ಅವರು ನಿಲ್ಲುವಂತೆ ಮಾಡಬೇಕು. ಅವರನ್ನು ಭಿಕ್ಷಾಟನೆಯಿಂದ ರಕ್ಷಿಸಬೇಕು. ಈ ವಿಷಯಕ್ಕೆ ಸಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶಗಳನ್ನು ನೀಡಿದ್ದಾರೆ ಮತ್ತು ತನ್ನ ಕರ್ಮಗಳ ಮೂಲಕ ಮಾದರಿ ತೋರಿಸಿದ್ದಾರೆ.

1. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಲ್ಲಾಹನು ನಿಗದಿ ಪಡಿಸಿದ ಕಡ್ಡಾಯ ಧಾರ್ಮಿಕ ಕರ್ಮಗಳ ಹಾಗೆಯೇ ದುಡಿಮೆಯಿಂದ ಸಂಪಾದನೆ ಮಾಡುವುದು ಸಹ ಕಡ್ಡಾಯ ಕರ್ಮವಾಗಿದೆ. (ಮಿಷ್ಕಾತ್).

2. ಹಝ್ರತ್ ಮಿಖ್‌ದಾದ್ ಬಿನ್ ಮಅದ್ ಯಕ್‌ರಬ್(ರ) ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಕೈಗಳಿಂದ ಕೆಲಸ ಮಾಡಿದ ಸಂಪಾದನೆಗಿಂತ ಉತ್ತಮವಾದ ಬೇರೆ ಸಂಪಾದನೆ ಇಲ್ಲ. (ಬುಖಾರಿ).

3. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಭಿಕ್ಷೆ ಬೇಡುವುದನ್ನು ಇಷ್ಟಪಡುತ್ತಿರಲಿಲ್ಲ ಮತ್ತು ಹೇಳುತ್ತಿದ್ದರು, ಮೇಲಿನ ಕೈ ಎಂದರೆ ಕೊಡುವ ಕೈ ಕೆಳಗಿನ ಕೈ ಎಂದರೆ ಬೇಡುವ ಕೈಗಿಂತ ಉತ್ತಮವೆಂದು ಹೇಳುತ್ತಿದ್ದರು. ಆದರೆ ಯಾರಿಗಾದರೂ ವಾಸ್ತವಿಕವಾಗಿ ಏನಾದರೂ ಅತ್ಯಾವಶ್ಯಕವಾಗಿದ್ದರೆ ಅವರ ಸನ್ನಿಧಿಯಿಂದ ಬರಿಗೈಯಲ್ಲಿ ಹಿಂದಿರುಗುತ್ತಿರಲಿಲ್ಲ. ಯಾರದಾದರೂ ಬೇಡಿಕೆಯನ್ನು ತಿರಸ್ಕರಿಸಿದರೆ ಆ ಬೇಡಿಕೆ ಈಡೇರಿಸಲು ಬೇರೆ ವ್ಯವಸ್ಥೆ ಮಾಡುತ್ತಿದ್ದರು.

4. ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಒಬ್ಬ ಅನ್‌ಸಾರಿ ವ್ಯಕ್ತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಬೇಡಿದಾಗ ಅವನಿಗೆ ಏನಾದರೂ ಕೊಡುವುದಕ್ಕೆ ಬದಲಾಗಿ ಕೇಳಿದರು: ನಿನ್ನ ಮನೆಯಲ್ಲಿ ಏನಾದರೂ ಇದೆಯೋ? ಆ ವ್ಯಕ್ತಿ ಹೇಳಿದರು: ಒಂದು ಚಾದರ ಮತ್ತು ಪಾತ್ರೆ ಇದೆ. ಆ ವ್ಯಕ್ತಿಯೊಂದಿಗೆ ಹೇಳಲಾಯಿತು, ಅವೆರಡನ್ನೂ ಇಲ್ಲಿಗೆ ತಾ ಅವುಗಳನ್ನು ಏಲಂ ಮಾಡಲಾಯಿತು. ಒಬ್ಬರು ಹೇಳಿದರು: ನಾನು ಒಂದು ದಿರ್‌ಹಮ್‌ಗೆ ಖರೀದಿಸುವೆನು. ಇನ್ನೊಬ್ಬರು ಹೇಳಿದರು: ನಾನು ಎರಡು ದಿರ್‌ಹಮ್‌ಗೆ ಖರೀದಿಸುವೆನು. ಎರಡು ದಿರ್‌ಹಮ್‌ಗೆ ಆ ವಸ್ತುಗಳನ್ನು ನೀಡಲಾಯಿತು. ಎರಡು ದಿರ್‌ಹಮ್ ಅನ್‌ಸಾರಿಗೆ ಕೊಡುತ್ತಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಒಂದು ದಿರ್‌ಹಮ್‌ನಿಂದ ಮನೆಗೆ ಆಹಾರ ಪದಾರ್ಥಗಳನ್ನು ಖರೀದಿಸಿ ಇನ್ನೊಂದು ದಿರ್‌ಹಮ್‌ನಿಂದ ಕೊಡಲಿ ಖರೀದಿಸಿ ತರಲು ಹೇಳಿದರು. ಕೊಡಲಿ ಖರೀದಿಸಿ ತಂದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅದಕ್ಕೆ ಮರದ ಹಿಡಿ ಹಾಕಿಕೊಟ್ಟು ಹೇಳಿದರು: ಈ ಕೊಡಲಿಯಿಂದ ಕಟ್ಟಿಗೆ ಕಡಿದು ಮಾರಾಟ ಮಾಡು. ಹದಿನೈದು ದಿನಗಳ ತನಕ ಇಲ್ಲಿಗೆ ಬರಬಾರದು. ಆ ವ್ಯಕ್ತಿ ಕಟ್ಟಿಗೆ ಕಡಿದು ಮಾರಾಟ ಮಾಡುತ್ತಾ ಇದ್ದನು. ಆ ವ್ಯಕ್ತಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದಾಗ ಅವನು ಹತ್ತು ದಿರ್‌ಹಮ್ ಸಂಪಾದಿಸಿದ್ದನು. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಮನೆ ಬಾಗಿಲುಗಳಿಗೆ ಹೋಗಿ ಬೇಡುವುದಕ್ಕಿಂತ ಸ್ವತಃ ಸಂಪಾದಿಸಿ ತಿನ್ನುವುದು ಉತ್ತಮವಾಗಿದೆ. (ಅಬೂದಾವೂದ್).

5. ಕಾರ್ಮಿಕರಿಗೆ ವೇತನ ನೀಡುವ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಕಾರ್ಮಿಕನ ಬೆವರು ಆರುವ ಮೊದಲೇ ಅವನ ವೇತನ ಅವನಿಗೆ ನೀಡಬೇಕು. (ಇಬ್ನುಮಾಜ).

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ

ಸಹ ಹೇಳಿದ್ದಾರೆ. ಯಾರು ಕಾರ್ಮಿಕನಿಗೆ ಅವನ ಹಕ್ಕನ್ನು ನೀಡಲಿಲ್ಲವೋ ನಾನು ಕಾರ್ಮಿಕನ ಪತಿಯಿಂದ ಅವನ ವಿರುದ್ಧ ಖಿಯಾಮತ್ ದಿನದಂದು ಜಗಳ ಮಾಡುವೆನು. ಇದರ ಅರ್ಥ ಹೀಗೆ: ಕಾರ್ಮಿಕರಿಗೆ ಅವರ ವೇತನ ನೀಡದಿದ್ದರೆ ಸರಕಾರ ಅದನ್ನು ಕೊಡಿಸುವುದು ಅವರ ಕಡ್ಡಾಯ ಕರ್ತವ್ಯವಾಗಿದೆ.

ಮಾನ್ಯ ಶ್ರೋತೃಗಳೇ, ಜನರೊಂದಿಗೆ ನ್ಯಾಯನಿಷ್ಠೆಯಿಂದ ವರ್ತಿಸುವುದು ಸರಕಾರದ ಹೊಣೆಗಾರಿಕೆಯಾಗಿದೆ. ಸರಕಾರ ಅನ್ಯಾಯವನ್ನೂ ದೌರ್ಜನ್ಯವನ್ನೂ ಅಳಿಸಿ ಬಿಡಬೇಕು.

ಮಾನ್ಯ ಶ್ರೋತೃಗಳೇ, ನ್ಯಾಯ ಪಾಲನೆಯ ಕೊರತೆಯೇ ಎಲ್ಲ ವಿಧಗಳ ಅಶಾಂತಿಗೆ ಕಾರಣವಾಗಿದೆ. ಜಾಗತಿಕ ಅಶಾಂತಿಯ ಕಾರಣವೂ ಇದೇ ಆಗಿದೆ. ಇದರ ಬಗ್ಗೆ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಪದೇ ಪದೇ ಲೋಕದ ಆಡಳಿತಾಧಿಕಾರಿಗಳಿಗೆ ಅದರ ಬಗ್ಗೆ ಗಮನ ಹರಿಸುತ್ತಾ ಇದ್ದಾರೆ. ಉದಾಹರಣೆಗೆ 2012ರಲ್ಲಿ ವಾಶಿಂಗ್ಟನ್ ಡಿ.ಸಿ. ಕ್ಯಾಪಿಟೋಲ್ ಹಿಲ್‌ನಲ್ಲಿ ನೀಡಿದ ಭಾಷಣದಲ್ಲಿ ಹೀಗೆ ಹೇಳಿದರು:

ಎಲ್ಲ ಜನರು ಮನುಷ್ಯರೆಂಬ ನೆಲೆಯಲ್ಲಿ ಸಮಾನರು ಎಂದು ಪವಿತ್ರ ಖುರ್‌ಆನ್ ಹೇಳಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನ್ನ ಕೊನೆಯ ಭಾಷಣದಲ್ಲಿ ಎಲ್ಲ ಮುಸ್ಲಿಮರಿಗೂ ಆಜ್ಞೆ ನೀಡಿದ್ದಾರೆ. ಅವರು ಯಾವಾಗಲೂ ನೆನಪಿಡಬೇಕು, ಯಾವುದೇ ಅರಬಿಗೆ ಅರಬಿಯೇತರನ ಮೇಲೆ ಶ್ರೇಷ್ಠತೆ ಇಲ್ಲ. ಅರಬಿಯೇತರನಿಗೆ ಅರಬಿಯ ಮೇಲೆಯೂ ಶ್ರೇಷ್ಠತೆ ಇಲ್ಲ. ಬಿಳಿಯವನಿಗೆ ಕರಿಯನ ಮೇಲೆ ಶ್ರೇಷ್ಠತೆ ಇಲ್ಲ. ಕರಿಯನಿಗೆ ಬಿಳಿಯನ ಮೇಲೆಯೂ ಶ್ರೇಷ್ಠತೆ ಇಲ್ಲ.

ಇಸ್ಲಾಮ್ ಸ್ಪಷ್ಟವಾಗಿ ಹೀಗೆ ಉಪದೇಶಿಸಿದೆ, ಎಲ್ಲ ಕೋಮುಗಳ ಮತ್ತು ವಂಶಗಳ ಜನರು ಸಮಾನರೆಂದು.

ಎಲ್ಲ ಜನರಿಗೆ ಯಾವುದೇ ತಾರತಮ್ಯವಿಲ್ಲದೆ ಯಾವುದೇ ಅಸೂಯೆಗೆ ಪಾತ್ರವಾಗದ ಸಮಾನ ಹಕ್ಕುಗಳು ಲಭಿಸಬೇಕು. ಈ ಮೂಲಭೂತ ಸುವರ್ಣ ತತ್ವ ಅಂತರ್ರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದಕ್ಕೆ ಅಸ್ತಿಭಾರವಾಗಿದೆ.

**ಅಂತರ್ರಾಷ್ಟ್ರೀಯ ಸಂಬಂಧಗಳು**

ಅಂತರ್ರಾಷ್ಟ್ರೀಯ ಸಂಬಂಧಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಇಂದಿನ ಪರಿಸ್ಥಿತಿಯಲ್ಲಿ ಲೋಕದಲ್ಲಿ ಮಹಾಶಕ್ತಿ ರಾಷ್ಟ್ರಗಳು ಚಿಕ್ಕ ದೇಶಗಳನ್ನು ದಬಾಯಿಸುತ್ತಾ ಇದೆ. ವಿವಿಧ ಉಪಾಯಗಳಿಂದಲೂ ನೆವನಗಳಿಂದಲೂ ಚಿಕ್ಕ ದೇಶಗಳನ್ನು ತೊಂದರೆಗೊಳಪಡಿಸಲು ಶಕ್ತಿಶಾಲಿ ರಾಷ್ಟ್ರಗಳು ಪ್ರಯತ್ನಿಸುತ್ತಾ ಇದೆ. ಈಗ ನಡೆಯುತ್ತಿರುವ ಯುದ್ಧ ಜಗಳಗಳಿಗೆ ಕಾರಣಗಳ ಬಗ್ಗೆ ಚಿಂತಿಸುವುದಾದರೆ ಹೀಗೆ ತಿಳಿಯುತ್ತದೆ, ಇನ್ನೊಂದು ದೇಶದ ಬಗ್ಗೆ ದುರಾಶೆಯ ದೃಷ್ಟಿ ಬೀರುವುದರಿಂದ ಅಥವಾ ಅನ್ಯಾಯದಿಂದ ಸ್ವಾರ್ಥ ಲಾಭವನ್ನು ಇನ್ನೊಂದು ದೇಶದಿಂದ ಪಡೆಯಲಿಕ್ಕೋಸ್ಕರ ಅಥವಾ ಅಧೀನಕ್ಕೊಳಪಡಿಸಲು ಪ್ರಯತ್ನಗಳು ಜಾರಿಯಲ್ಲಿವೆ.

ಪವಿತ್ರ ಖುರ್‌ಆನ್ ಸ್ವಾರ್ಥ ಅಭಿಲಾಷೆಗಳ ಅಸ್ತಿಭಾರವನ್ನು ಕಿತ್ತುಹಾಕಲು ಹೀಗೆ ಹೇಳಿದೆ: ಅವರ ಪೈಕಿ ಕೆಲವರಿಗೆ ನಾವು ಇಹಲೋಕ ಜೀವನದ ವೈಭವಗಳನ್ನು ನೀಡಿ ಸುಖ ಸೌಕರ್ಯಗಳನ್ನು ಅನುಭವಿಸುವಂತೆ ಮಾಡಿದುದನ್ನು ನೀನು ಕಣ್ಣೆತ್ತಿ ನೋಡಬೇಡ. ಆ ಮೂಲಕ ಅವರನ್ನು ಪರೀಕ್ಷಿಸಲಿಕ್ಕೋಸ್ಕರ ನಾವು ಅದನ್ನು ನೀಡಿದ್ದೇವೆ. ನಿನ್ನ ಪ್ರಭುವಿನ ಅನುಗ್ರಹ ಉತ್ತಮವಾದುದೂ ಶಾಶ್ವತವಾದುದೂ ಆಗಿದೆ. (ಪವಿತ್ರ ಖುರ್‌ಆನ್ 20:132).

ಪವಿತ್ರ ಖುರ್‌ಆನ್ ಇನ್ನೊಂದು ಮೂಲಭೂತ ಮಹತ್ವದ ಆಜ್ಞೆ ಹೀಗೆ ನೀಡಿದೆ: ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯು ಅಲ್ಲಾಹನು ನೀವು ಮಾಡುವುದೆಲ್ಲಾ ಬಲ್ಲವನಾಗಿದ್ದಾನೆ. (ಪವಿತ್ರ ಖುರ್‌ಆನ್ 5:9).

ಈಗಿನ ಕಾಲದಲ್ಲಿ ನೋಡಿರಿ. ಪಾಶ್ಚಿಮಾತ್ಯ ಶಕ್ತಿಶಾಲಿ ದೇಶಗಳೂ ಪೌರತ್ಯ ಶಕ್ತಿಶಾಲಿ ದೇಶಗಳೂ ಉತ್ತರದ ಶಕ್ತಿಶಾಲಿ ದೇಶಗಳೂ ದಕ್ಷಿಣದ ಶಕ್ತಿಶಾಲಿ ದೇಶಗಳೂ ಒಂದು ಇನ್ನೊಂದರ ಸಾಧನ ಸಂಪತ್ತುಗಳನ್ನು ದುರಾಶೆಯಿಂದಲೂ ಲಾಲಸೆಯಿಂದಲೂ ವೀಕ್ಷಿಸುತ್ತಿವೆ. ಇತರ ದೇಶಗಳನ್ನು ಆಕ್ರಮಿಸಲು, ಅಧೀನಕ್ಕೊಳಪಡಿಸಲು ತಮ್ಮ ಮೇಲಾಧಿಕಾರವನ್ನು ಸ್ಥಾಪಿಸಿ ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಸಂರಕ್ಷಿಸಲು ಮಗ್ನವಾಗಿವೆ. ಈ ಕಾರಣಗಳಿಂದ ಅನ್ಯ ದೇಶಗಳಿಗೂ ಸಮುದಾಯಗಳಿಗೂ ಹಾನಿಯುಂಟಾಗುವುದಾದರೂ ಇವರ ದೇಶ ಮತ್ತು ಜನಾಂಗ ನಾಶವಾಗುವುದಾದರೂ ಅವರಿಗೆ ಅದರ ಬಗ್ಗೆ ಚಿಂತೆ ಇಲ್ಲ.

ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ರಹಿಮಹುಲ್ಲಾಹು ತಆಲಾ ಅನೇಕ ವರ್ಷಗಳ ಹಿಂದೆ ಹೀಗೆ ಹೇಳಿದ್ದರು: ಇಂದಿನ ಕಾರಣದಲ್ಲಿ ರಾಜಕಾರಣ ಕೊಳಕಾಗಿದೆ. ನ್ಯಾಯಪಾಲನೆ ಮತ್ತು ದೇವಭಕ್ತಿ ರಹಿತವಾಗಿದೆ. ಇಸ್ಲಾಮಿನ ಹೆಸರಿನಲ್ಲಿ ತಮ್ಮ ಶ್ರೇಷ್ಠತೆಯನ್ನು ವಾದಿಸುವ ಮುಸ್ಲಿಮ್ ದೇಶಗಳು ಸಹ ಇಸ್ಲಾಮೀ ನೈತಿಕ ನಿಯಮಗಳಿಗೆ ನಿಷ್ಠರಾಗಿಲ್ಲ. ಅವರ ನಿಷ್ಠೆ ಇಸ್ಲಾಮ್ ನ್ಯಾಯದ ಬಗ್ಗೆ ನೀಡಿರುವ ಉನ್ನತ ಮಟ್ಟದ ತತ್ವಗಳ ಬಗ್ಗೆ ಅಲ್ಲ. ತಮ್ಮ ಸ್ವಾರ್ಥ ಹಿತಾಸಕ್ತಿಗಳ ಬಗ್ಗೆಯಾಗಿದೆ.

ಇನ್ನೊಂದು ಕಡೆ ಅನ್ಯ ಕೋಮುಗಳು ನ್ಯಾಯದ ಬಗ್ಗೆ ದೊಡ್ಡ ದೊಡ್ಡ ವಾದಗಳನ್ನು ಮಾಡುತ್ತಿವೆ. ಅವರೇ ಲೋಕದಲ್ಲಿ ನ್ಯಾಯಪಾಲನೆ ಮಾಡಲು ನಿಯೋಜಿತರಾಗಿರುವರೋ ಎಂಬಂತೆ ವರ್ತಿಸುತ್ತಾರೆ. ಅವರ ಶಕ್ತಿಯ ಸಹಾಯವಿಲ್ಲದಿದ್ದರೆ ಲೋಕದಲ್ಲಿ ನ್ಯಾಯ ಅಳಿಸಿ ಹೋಗುವುದೆಂದು ವಾದಿಸುತ್ತಾರೆ. ಆದರೆ ವಿಶದವಾಗಿ ಪರಿಶೀಲಿಸಿದರೆ ತಿಳಿಯುವುದೇನೆಂದರೆ ಇಸ್ಲಾಮ್ ಪ್ರತಿಪಾದಿಸುವಂತಹ ನ್ಯಾಯಪಾಲನೆ ಒಂದು ಕಡೆಯೂ ಇಲ್ಲ, ಇನ್ನೊಂದು ಕಡೆಯೂ ಇಲ್ಲ. (ಖಲೀಜ್‌ಕಾ ಬುಹ್‌ರಾನ್ ಪುಟ 14).

**ಧಾರ್ಮಿಕ ಸಂಬಂಧಗಳು**

ವಿವಿಧ ಧರ್ಮಗಳ ಅನುಯಾಯಿಗಳ ಪರಸ್ಪರ ಉತ್ತಮ ಸಂಬಂಧ ಶಾಂತಿ ಸ್ಥಾಪನೆಗೆ ಆವಶ್ಯಕವಾಗಿದೆ. ಇಂದಿನ ಕಾಲದಲ್ಲಿ ವಿವಿಧ ಧರ್ಮಗಳ ಧಾರ್ಮಿಕ ಉಪದೇಶಗಳು ಏನೆಂದು ತಿಳಿದುಕೊಳ್ಳದ ಕಾರಣದಿಂದಲೂ ಮತ್ತು ಧರ್ಮಗಳ ಸ್ಥಾಪಕರ ಮೂಲ ಉಪದೇಶಗಳನ್ನು ಬೆನ್ನ ಹಿಂದೆ ಎಸೆದಿರುವ ಕಾರಣದಿಂದಲೂ ತಥಾಕಥಿತ ಧಾರ್ಮಿಕ ನಾಯಕರ ಸ್ವಂತ ನಿಲುವುಗಳಿಗೆ ಮತ್ತು ಯೋಚನೆಗಳಿಗೆ ಅನುಸಾರವಾಗಿ ಅವರ ಅನುಯಾಯಿಗಳು ಅಂಧರಾಗಿ ಅವರನ್ನು ಅನುಸರಿಸುವ ಕಾರಣದಿಂದಲೂ ವಿವಿಧ ಧರ್ಮಗಳ ಅನುಯಾಯಿಗಳ ಮಧ್ಯೆ ದ್ವೇಷಾಸೂಯೆಗಳನ್ನು ಹಬ್ಬಿಸಲಾಗುತ್ತಿದೆ. ಆದುದರಿಂದ ಧಾರ್ಮಿಕ ಸ್ವಾತಂತ್ರ್ಯದ ಮತ್ತು ಸೌಹಾರ್ದತೆಯ ಕೊರತೆಯು ಜನರ ಶಾಂತಿ ಮತ್ತು ನೆಮ್ಮದಿಯನ್ನು ಎಷ್ಟು ಕೆಡಿಸಿದೆ ಎಂದರೆ ಜನರು ಧರ್ಮದ ಬಗ್ಗೆ ಬೇಸರಗೊಂಡು ಧರ್ಮದಿಂದ ದೂರ ಸರಿಯುತ್ತಿದ್ದಾರೆ. ಧರ್ಮದೊಂದಿಗೆ ತಮ್ಮನ್ನು ಜೋಡಿಸಿಕೊಂಡವರಲ್ಲಿ ಬಹುತೇಕ ಜನರು ಕೇವಲ ಆಚಾರ ರೂಪದಲ್ಲಿ ತಮ್ಮನ್ನು ಜೋಡಿಸಿಕೊಂಡಿದ್ದಾರೆ. ಅವರಿಗೆ ತಮ್ಮ ಧರ್ಮಗಳ ಉಪದೇಶಗಳ ಬಗ್ಗೆಯಾಗಲಿ, ನಂಬಿಕೆಗಳ ಬಗ್ಗೆಯಾಗಲಿ ಯಾವುದೇ ತಿಳುವಳಿಕೆ ಇರುವುದಿಲ್ಲ.

ಇಸ್ಲಾಮ್ ಧರ್ಮದ ಶಾಂತಿದಾಯಕ ಉಪದೇಶಗಳು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ತಮ ಮಾದರಿ ಬೇರೆಯೇ ಪ್ರಕಾಶಮಾನವಾದ ಅಧ್ಯಾಯವಾಗಿದೆ. ಅದರ ಬಗ್ಗೆ ಸವಿವರವಾಗಿ ಪ್ರಸ್ತಾಪಿಸಲು ಈ ಸಮಯ ಸಾಲದು. ಕೇವಲ ಸಾರಾಂಶ ರೂಪವಾಗಿ ಹೀಗೆ ಹೇಳುತ್ತೇನೆ:

1. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನನ್ನು ಸರ್ವಲೋಕಗಳ ಪರಿಪಾಲಕನೆಂದು ಹೇಳಲಾಗಿದೆ. ಅವನು ಕೇವಲ ಮುಸ್ಲಿಮರ ಪರಿಪಾಲಕನೆಂದು ಹೇಳಿಲ್ಲ. ಇದಕ್ಕೆ ಸಾಕ್ಷ್ಯಾಧಾರವೇನೆಂದರೆ ಅಲ್ಲಾಹನು ಪ್ರತಿಯೊಂದು ಕೋಮಿನಲ್ಲಿ ತನ್ನ ಮಾರ್ಗದರ್ಶಕ ಸಂದೇಶವಾಹಕನನ್ನು ಕಳುಹಿಸಿದ್ದಾನೆ. ಆದುದರಿಂದ ಒಂದು ಧರ್ಮದ ಮೂಲ ಸ್ವರೂಪ ಈಗ ಬದಲಾಯಿಸಲ್ಪಟ್ಟಿದ್ದರೂ ಯಾವುದೇ ಧರ್ಮ ಸಂಪೂರ್ಣವಾಗಿ ಕೆಟ್ಟು ಹೋಗಿದೆ ಎಂದು ಹೇಳಲಾಗದು.

2. ಒಂದು ಧರ್ಮವನ್ನು ಪ್ರಚಾರ ಮಾಡಲು ಯಾವುದೇ ರೀತಿಯ ಬಲಾತ್ಕಾರ ಖಂಡಿತವಾಗಿಯೂ ಧರ್ಮಬದ್ಧವಲ್ಲ. ಇಸ್ಲಾಮ್ ಧರ್ಮವನ್ನು ಖಡ್ಗದ ಮೂಲಕ ಹಬ್ಬಿಸಲು ಅನುಮತಿ ನೀಡಲಾಗಿದೆ ಎನ್ನುವುದು ಸಂಪೂರ್ಣವಾಗಿ ಸುಳ್ಳಾಗಿರುವ ಆರೋಪವಾಗಿದೆ. ಮುಸ್ಲಿಮರು ಮಾಡಿದ ಯುದ್ಧಗಳು ಪ್ರತಿರೋಧಕ್ಕೆ ಮಾಡಿದವುಗಳಾಗಿದ್ದುವು. ಅಥವಾ ಗಲಬೆಗಳನ್ನೂ ಅಶಾಂತಿಯನ್ನೂ ದೂರಸರಿಸಿ ಶಾಂತಿಯನ್ನು ಸ್ಥಾಪಿಸುವ ಉದ್ದೇಶದಿಂದ ಮಾಡಿದವುಗಳಾಗಿದ್ದುವು.

ಇಸ್ಲಾಮಿನ ವಿರುದ್ಧ ಮಾಡಲಾಗುವ ದೋಷಾರೋಪವನ್ನು ನಿವಾರಿಸಲು ಅಲ್ಲಾಹನು ಈ ಕಾಲಘಟ್ಟದಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ಮಸೀಹ್ ಮೌಊದ್ ಆಗಿ ನಿಯೋಜಿಸಿರುವನು. ಅವರ ಮೂಲಕ ಮತ್ತು ಅವರ ಖಲೀಫರ ಮೂಲಕ ಮತ್ತು ಅಹ್ಮದಿಯಾ ಜಮಾಅತ್ ಮೂಲಕ ಲೋಕದಲ್ಲಿ ಇಸ್ಲಾಮನ್ನು ಹರಡುವಂತೆ ಮಾಡಿ ಇಸ್ಲಾಮ್ ಧರ್ಮ ತನ್ನ ಉಪದೇಶಗಳ ಮೂಲಕವೇ ಹರಡುತ್ತದೆ ಅದಕ್ಕೆ ಯಾವುದೇ ಖಡ್ಗದ ಆವಶ್ಯಕತೆಯಾಗಲೀ ಯುದ್ಧದ ಆವಶ್ಯಕತೆಯಾಗಲೀ ಇಲ್ಲವೆಂದು ಅಲ್ಲಾಹನು ಸಾಬೀತುಗೊಳಿಸಿರುವನು.

3. ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸರ್ವಲೋಕಗಳಿಗೆ ಮಾರ್ಗದರ್ಶಕನನ್ನಾಗಿಯೂ ಸಂದೇಶವಾಹಕರನ್ನಾಗಿಯೂ ನಿಯೋಜಿಸಿರುವನು. ಅವರಿಗೆ

ಖಾತಮುನ್ನಬಿಯ್ಯೀನ್ ಎಂಬ ಉನ್ನತ ಪದವಿಯನ್ನೂ ನೀಡಿರುವನು. ಹೀಗಿದ್ದರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಒಬ್ಬ ಶಿಷ್ಯನು ತನ್ನ ಬಗ್ಗೆ ಇತರ ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠ ಎಂದು ಅನ್ಯಧರ್ಮದವನ ಮುಂದೆ ಹೇಳಿ ಶಾಂತಿಯನ್ನು ಕೆಡಿಸುವುದನ್ನು ಸಹಿಸಲಿಲ್ಲ. ಬುಖಾರಿಯ ಹದೀಸು ಗ್ರಂಥದಲ್ಲಿ ಒಂದು ಘಟನೆ ಹೀಗೆ ವಿವರಿಸಲಾಗಿದೆ: ಒಮ್ಮೆ ಒಬ್ಬ ಯಹೂದಿ ಪೇಟೆಯಲ್ಲಿ ಸಾಮಗ್ರಿಗಳನ್ನು ಮಾರಾಟ ಮಾಡುತ್ತಿದ್ದನು. ಆಗ ಒಬ್ಬ ಮುಸ್ಲಿಮ್ ಒಂದು ವಸ್ತುವಿಗೆ ಕಡಿಮೆ ಬೆಲೆ ಹೇಳಿದನು. ಅದು ಯಹೂದಿಗೆ ಅಸಹ್ಯವಾಗಿ ಅವನು ಹೇಳಿದನು ಮೂಸಾರನ್ನು ಎಲ್ಲ ಮನುಷ್ಯರಿಗಿಂತ ಶ್ರೇಷ್ಠರನ್ನಾಗಿ ಮಾಡಿದ ದೇವನಾಣೆ. ಆಗ ಮುಸ್ಲಿಮನು ಕೋಪದಿಂದ ಯಹೂದಿಗೆ ಕೈಯಿಂದ ಹೊಡೆದನು. ಯಹೂದಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದೂರು ನೀಡುತ್ತಾ ಹೇಳಿದನು ಶಾಂತಿಯಿಂದ ನಮ್ಮನ್ನು ಇರಿಸುವುದು ನಿಮ್ಮ ಹೊಣೆಗಾರಿಕೆಯಾಗಿದೆ. ಈ ಮುಸ್ಲಿಮ್ ನನ್ನೊಂದಿಗೆ ಅತಿರೇಕದಿಂದ ವರ್ತಿಸಿ ಹೊಡೆದಿದ್ದಾನೆ. ಆಗ ಹಝ್ರತ್ ಪೈಗಂಬರ್ ಆ ಮುಸ್ಲಿಮನ ವರ್ತನೆಯಬಗ್ಗೆ ಸಿಟ್ಟುಗೊಂಡು ಹೇಳಿದರು: ನನ್ನನ್ನು ಇತರ ಪ್ರವಾದಿಗಳಿಗಿಂತ ಶ್ರೇಷ್ಠನೆಂದು ಹೇಳಬೇಡ. (ಬುಖಾರಿ).

ಒಟ್ಟಾರೆ ಹೇಳುವುದಾದರೆ ದೃಢವಾಗಿ ತಿಳಿಯಬೇಕಾದ ವಿಷಯವೇನೆಂದರೆ ಮನುಷ್ಯರಲ್ಲಿ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸಹನೆಯು ವಿಶಾಲವಾಗಿ ಹರಡದಿದ್ದರೆ ಅನ್ಯರ ಕಷ್ಟಗಳನ್ನು ನೀಗಿಸಿ ಸುಖವನ್ನು ಒದಗಿಸುವ ಮನೋಭಾವ ರೂಪಿಸಲ್ಪಡದಿದ್ದರೆ ಅನ್ಯರಿಗೆ ಲಾಭವುಂಟುಮಾಡಲು ಸ್ವಾರ್ಥ ಲಾಭವನ್ನು ತ್ಯಾಗ ಮಾಡಿದರೆ ಮತ್ತು ಎಲ್ಲದಕ್ಕಿಂತಲೂ ಮಿಗಿಲಾಗಿ ನ್ಯಾಯಪಾಲನೆಯನ್ನು ಮಾಡದಿದ್ದರೆ ಮನೆಗಳಲ್ಲಿ ಶಾಂತಿ ಸ್ಥಾಪಿತವಾಗಲಾರದು. ಬಡಾವಣೆಗಳಲ್ಲಿ ಶಾಂತಿ ಸ್ಥಾಪಿತವಾಗಲಾರದು. ನಗರಗಳಲ್ಲಿ ಶಾಂತಿ ಸ್ಥಾಪಿತವಾಗದು. ದೇಶದಲ್ಲಿ ಶಾಂತಿ ಸ್ಥಾಪಿತವಾಗಲಾರದು. ಅಂತರ್‍ರಾಷ್ಟ್ರೀಯವಾಗಿ ಶಾಂತಿಯು ಸ್ಥಾಪಿತವಾಗಲಾರದು.

ಆದುದರಿಂದ ಇಂದಲ್ಲವಾದರೆ ನಾಳೆ, ನಾಳೆ ಅಲ್ಲವಾದರೆ ನಾಳೆದು ಇಸ್ಲಾಮಿನ ಶಾಂತಿದಾಯಕ ಉಪದೇಶಗಳನ್ನು ಮತ್ತು ಸರ್ವಲೋಕಗಳಿಗೂ ಮಾರ್ಗದಾಯಕನಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧ ಉಪದೇಶಗಳನ್ನೂ ಉತ್ತಮ ಮಾದರಿಯನ್ನೂ ಅನಿವಾರ್ಯವಾಗಿ ಅನುಸರಿಸಲೇಬೇಕಾದೀತು. ಹೀಗೆ ಮಾಡದಿದ್ದರೆ ಲೋಕ ಶಾಂತಿಯ ಮುಖವನ್ನು ಕಾಣಲಾರದು.

ನಮ್ಮ ಜಮಾಅತಿನ ಇಮಾಮರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಲೋಕದ ದೊಡ್ಡ ದೊಡ್ಡ ವಿಧಾನ ಸಭೆಗಳಲ್ಲಿ ವಿವಿಧ ದೇಶಗಳ ರಾಜಕೀಯ ನಾಯಕರಿಗೆ ಸಂದೇಶ ತಲಪಿಸುತ್ತಿದ್ದಾರೆ. ಬಾಗಿಲುಗಳಿಗೆ ತಲಪಿರುವ ಮತ್ತು ದೇಶಗಳೊಳಗೆ ಸಹ ಪ್ರವೇಶಿಸಿರುವ ಜಾಗತಿಕ ವಿನಾಶದ ಬಗ್ಗೆ ಎಚ್ಚರಿಕೆ ನೀಡುತ್ತಾ ಇರುತ್ತಾರೆ. ಕೆಲವು ತಿಂಗಳುಗಳ ಹಿಂದೆ ಜರ್ಮನಿಯಲ್ಲಿ ಜರಗಿದ ಜರ್ಮನಿಯ ವಾರ್ಷಿಕ ಜಲ್ಸ ಸಾಲಾನದ ಸಮಾರೋಪ ಭಾಷಣದಲ್ಲಿ ಹುಝೂರ್ ಅಯ್ಯದಹುಲ್ಲಾಹು ತಆಲ ಹೀಗೆ ಹೇಳಿದರು:

ನಾವು ನೋಡುತ್ತೇವೆ ಮತ್ತು ಮನವರಿಕೆ ಮಾಡುತ್ತೇವೆ. ಶಾಂತಿ ಬಹಳ ಮಹತ್ವಪೂರ್ಣವಾದುದಾಗಿದೆ ಎಂದು ಎಲ್ಲರೂ ಶಾಂತಿಯ ಬಗ್ಗೆ ಚರ್ಚಿಸುತ್ತಾರೆ. ಪ್ರತಿಯೊಬ್ಬ ಹೇಳುತ್ತಾನೆ ಶಾಂತಿ ಬಹಳ ಮಹತ್ವಪೂರ್ಣವಾಗಿದೆ ಎಂದು. ಶಾಂತಿಯ ಸ್ಥಿತಿಯೇ ಮನೆಯ ನೆಮ್ಮದಿ ಮತ್ತು ಸಂರಕ್ಷಣೆಯ ಖಾತರಿ ನೀಡುತ್ತದೆ. ಅಂತರ್‍ರಾಷ್ಟ್ರೀಯ ಮಟ್ಟದಲ್ಲಿಯೂ ಶಾಂತಿಯ ನೆಮ್ಮದಿ ಮತ್ತು ಸಂರಕ್ಷಣೆಯ ಖಾತರಿ ನೀಡುತ್ತದೆ. ಪ್ರತಿಯೊಂದು ಹಂತದಲ್ಲಿ ಶಾಂತಿ ಸ್ಥಾಪಿತವಾಗಲಿ ಎಂದು ಎಲ್ಲರೂ ಆಶಿಸುತ್ತಾರೆ. ಆದರೆ ಕೇವಲ ಆಶಾಭಾವನೆ ಶಾಂತಿಯನ್ನು ಹುಟ್ಟಿಸಲಾರದು. ಇಲ್ಲಿ ಸಹ ಶಾಂತಿಯ ಅಭಿಲಾಷೆಯು ಸ್ವಾರ್ಥ ಸಾಧನೆ ಹೊಂದಿರುತ್ತದೆ. ಲೋಕದಲ್ಲಿ ನಾವು ಇದನ್ನೇ ಕಾಣುತ್ತಿದ್ದೇವೆ.

ಲೋಕದಲ್ಲಿ ಸಾಮಾನ್ಯ ಜನರಲ್ಲೂ ರಾಜಕೀಯ ನಾಯಕರಲ್ಲೂ ಇದನ್ನೇ ಕಾಣುತ್ತಿದ್ದೇವೆ. ರಾಜಕಾರಣಿಗಳ ಪರಸ್ಪರ ಜಗಳಗಳ ಮತ್ತು ಅಧಿಕಾರವನ್ನು ಗಳಿಸಿದಾಗ ಪರಸ್ಪರ ದೌರ್ಜನ್ಯ ನಮ್ಮ ದೇಶಗಳಲ್ಲಿಯೇ ನಾವು ಕಾಣುತ್ತಿದ್ದೇವೆ. ಒಬ್ಬರಿನ್ನೊಬ್ಬರ ವಿರುದ್ಧ ಮಾಡುವ ಕ್ರಮಗಳು ಇಂತಹ ಯೋಚನೆಗಳ ಪರಿಣಾಮವಾಗಿವೆ. ಕೇವಲ ಶಾಂತಿಯನ್ನು ಆಶಿಸುವುದು ಕಲಹಕ್ಕೆ ಕಾರಣವಾಗುವುದು. ಏಕೆಂದರೆ ಈ ಆಶೆಯಲ್ಲಿ ಸ್ವಾರ್ಥ ಅಡಕವಾಗಿದೆ. ಶಾಂತಿಯನ್ನು ಆಶಿಸುವವರು ಹೇಗೆ ಇಚ್ಛಿಸುತ್ತಾರೆಂದರೆ ಕೇವಲ ಅವರಿಗೆ, ಅವರ ಸಮೀಪವಾಗಿರುವವರಿಗೆ, ಅವರ ಕೋಮಿಗೆ ಶಾಂತಿ ಲಭಿಸಲಿ ಎಂದು. ಅವರು ಅನ್ಯರ ಬಗ್ಗೆ ಮತ್ತು ಅವರ ಶತ್ರುಗಳು ಇಚ್ಛಿಸುವುದೇನೆಂದರೆ ಅವರ ಶಾಂತಿ ಅಳಿಸಿಬಿಡಬೇಕು ಎಂದು. ಆದುದರಿಂದ ನಮಗೊಂದು ನೀತಿ ಬೇರೆಯವರಿಗೆ ಇನ್ನೊಂದು ನೀತಿ ಎಂಬ ತತ್ವ ಪ್ರಕಾರ ಲೋಕದಲ್ಲಿ ಶಾಂತಿ ಸ್ಥಾಪಿಸುವುದಾದರೆ ಅಂತಹ ಶಾಂತಿ ಕೆಲವು ಜನರಿಗೆ ಮಾತ್ರ ಸಿಗುವುದು ಲೋಕದಾದ್ಯಂತ ಶಾಂತಿ ಸ್ಥಾಪಿತವಾಗಲಾರದು. ಲೋಕದಾದ್ಯಂತ ಶಾಂತಿಯು ಸ್ಥಾಪಿತವಾಗುವುದಿಲ್ಲವಾದರೆ ಅದನ್ನು ನೈಜ ಶಾಂತಿ ಎಂದು ಕರೆಯಲಾಗದು. ನೈಜ ಶಾಂತಿಯನ್ನು ಕೌಟುಂಬಿಕ, ಕೋಮು ಸಂಬಂಧವಾದ ವಂಶೀಯ, ರಾಷ್ಟ್ರೀಯ ಆದ್ಯತೆಗಳನ್ನು ಕಡೆಗಣಿಸಿ ಸ್ಥಾಪಿಸಲು ಪ್ರಯತ್ನಿಸಬೇಕು. ಕೇಂದ್ರ ಅಕ್ಷ ರೇಖೆಯನ್ನು ಹುಡುಕಬೇಕು. ಅದು ಸಾಧ್ಯವಾಗುವುದು ಹೀಗೆ: ಪ್ರತಿಯೊಬ್ಬ ಮನುಷ್ಯನು ಹೀಗೆ ಮನವರಿಕೆ ಮಾಡಿಕೊಳ್ಳಬೇಕು, ತಿಳುವಳಿಕೆ ಗಳಿಸಬೇಕು. ನನ್ನ ಮೇಲೆ ಒಂದು ಉನ್ನತ ಅಸ್ತಿತ್ವವಿದೆ ಆ ಉನ್ನತ ಅಸ್ತಿತ್ವ ನನ್ನ ಮನೆಯ ಮತ್ತು ದೇಶದ ಶಾಂತಿಯನ್ನು ಇಚ್ಛಿಸುವುದರೊಂದಿಗೆ ಎಲ್ಲ ದೇಶಗಳಲ್ಲೂ ಶಾಂತಿಯನ್ನು ಬಯಸುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನೀಡಿದ ಉಪದೇಶ ಈ ಕೇಂದ್ರ ಬಿಂದುವಿನ ಬಗ್ಗೆ ಹೀಗೆ ವಿಶ್ವಾಸ ಹೊಂದುವುದಾಗಿದೆ. ಒಂದು ಉನ್ನತ ಅಸ್ತಿತ್ವ ನನ್ನನ್ನು ವೀಕ್ಷಿಸುತ್ತಿದೆ. ನಾನು ನನ್ನ ನಡೆ ನುಡಿಗಳನ್ನು ಸರಿಪಡಿಸಬೇಕಾಗಿದೆ.

ಯಾವಾಗಲೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಉಪದೇಶಿಸಿದ ಈ ಸುವರ್ಣ ತತ್ವವನ್ನು ನಿಮ್ಮ ಮುಂದೆ ಇರಿಸಬೇಕು. ನೀವು ನಿಮಗೆ ಇಷ್ಟಪಡುವುದನ್ನು ಅನ್ಯರಿಗೂ ಇಷ್ಟಪಡಿರಿ.

ಆದುದರಿಂದ ನಮ್ಮ ಇಹಲೋಕ ಜೀವನವನ್ನೂ ಪರಲೋಕ ಜೀವನವನ್ನೂ ಸರಿಪಡಿಸಬೇಕಾದರೆ ಮತ್ತು ಶಾಂತಿ ಮತ್ತು ಸಮಾಧಾನದೊಂದಿಗೆ ಜೀವಿಸಬೇಕಾದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವತೀರ್ಣವಾದ ಅಲ್ಲಾಹನ ಸಂದೇಶವಾಣಿಯನ್ನು ಯಾವಾಗಲೂ ನಮ್ಮ ಮುಂದೆ ಇರಿಸಬೇಕಾಗಿದೆ. ಅದು ಹೀಗೆ:

**ಯಹ್‌ದೀ ಬಿಹಿಲ್ಲಾಹು ಮನಿತ್ತಬಅ ರಿಝ್ವಾನಹೂ ಸುಬುಲಸ್ಸಲಾಮ.**

ಅಲ್ಲಾಹನು ಅದರ ಮೂಲಕ (ಎಂದರೆ ಪ್ರಕಾಶಮಾನವಾದ ಗ್ರಂಥವಾಗಿರುವ ಪವಿತ್ರ ಖುರ್‌ಆನ್ ಮೂಲಕ) ತನ್ನ ಸಂತೃಪ್ತಿಯನ್ನು ಬಯಸುವವರಿಗೆ ರಕ್ಷಾಮಾರ್ಗದ ಕಡೆಗೆ ದಾರಿ ತೋರಿಸುತ್ತಾನೆ. (ಪವಿತ್ರ ಖುರ್‌ಆನ್ 5:17).

ನೀವು ಯಾವಾಗಲೂ ಪ್ರಕಾಶಮಾನವಾದ ಈ ಗ್ರಂಥದ ಮಾರ್ಗದರ್ಶನಗಳನ್ನು ನಿಮ್ಮ ಮುಂದೆ ಇರಿಸಿರಿ. ಈ ಪ್ರಕಾಶಮಾನವಾದ ಗ್ರಂಥದ ಮಾರ್ಗದರ್ಶನಗಳನ್ನು ಓದಬೇಕು ಮತ್ತು ನಮ್ಮ ಮುಂದೆ ಇರಿಸಿಕೊಳ್ಳಬೇಕು. ಹಾಗೆ ಮಾಡಿದರೆ ಮಾತ್ರ ರಕ್ಷಾ ಮಾರ್ಗದಲ್ಲಿ ನಾವು ಚಲಿಸುವವರಾಗುವೆವು. ಈ ಗ್ರಂಥದ ಯಾವುದೇ ಉಪದೇಶ ಶಾಂತಿಯನ್ನು ನಾಶಮಾಡುವಂತಹದು ಅಲ್ಲ. ನಮ್ಮವರಿಗೂ ಅನ್ಯರಿಗೂ ಈ ಸಂದೇಶ ನೀಡಬೇಕಾದುದು ನಮ್ಮ ಕೆಲಸವಾಗಿದೆ. ಇದುವೇ ಲೋಕದಲ್ಲಿ ಶಾಂತಿಯ ಖಾತರಿ ನೀಡುವಂತಹದಾಗಿದೆ.

ಈಗ ಈ ಕೆಲಸವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್‌ಗೆ ವಹಿಸಿಕೊಡಲಾಗಿದೆ. ನಾವು ನಮ್ಮ ಮನೆಗಳಲ್ಲಿಯೂ ಅಂತರ್‍ರಾಷ್ಟ್ರೀಯ ಮಟ್ಟದಲ್ಲೂ ಇದಕ್ಕನುಸಾರವಾಗಿ ನಮ್ಮ ಕರ್ತವ್ಯಗಳನ್ನು ಈಡೇರಿಸದಿದ್ದರೆ ನಾವು ಶಾಂತಿ ಮತ್ತು ಸುರಕ್ಷೆಯಲ್ಲಿ ಜೀವಿಸುವ ಯಾವುದೇ ಖಾತರಿ ಇರುವುದಿಲ್ಲ. ನಮ್ಮ ಪೀಳಿಗೆಗಳು ಸಹ ಶಾಂತಿ ಮತ್ತು ಸುರಕ್ಷೆಯಲ್ಲಿ ಜೀವಿಸುವ ಖಾತರಿ ಇರುವುದಿಲ್ಲ. ಲೋಕ ಸಹ ಶಾಂತಿ ಮತ್ತು ಸುರಕ್ಷೆಯಲ್ಲಿರುವ ಖಾತರಿ ಇಲ್ಲ. ಅಲ್ಲಾಹನು ಲೋಕವನ್ನು ಅಂಧಕಾರದಿಂದ ಬೆಳಕಿನ ಕಡೆಗೆ ಒಯ್ಯುವವರನ್ನಾಗಿ ನಮ್ಮನ್ನು ಮಾಡಲಿ. ನಾವು ಈ ಹೊಣೆಗಾರಿಕೆಯನ್ನು ಅತ್ಯುತ್ತಮ ರೀತಿಯಲ್ಲಿ ಈಡೇರಿಸುವವರಾಗಲು ಅಲ್ಲಾಹನು ನಮಗೆ ಭಾಗ್ಯ ದಯಪಾಲಿಸಲಿ.

**(ಸಮಾರೋಪ ಭಾಷಣ ಜಲ್ಸಾ ಸಾಲಾನ ಜರ್ಮನಿ ಸೆಪ್ಟಂಬರ್ 2022).**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

ಜಲ್ಸ ಸಾಲಾನ ಖಾದಿಯಾನ್ 2022ರ ಭಾಷಣ

# ಹಝ್ರತ್ ಅಬೂಬಕರ್ ಸಿದ್ದೀಖ್(ರ) ಮತ್ತು ಹಝ್ರತ್ ಮೌಲಾನ ನೂರುದ್ದೀನ್(ರ)ರವರ ಜೀವನ ಚರಿತ್ರೆ

(ಫಿರೋಝ್ ಅಹ್ಮದ್ ನಹೀಂ, ಮುಬಲ್ಲಿಘ್ ಸಿಲ್‌ಸಿಲಾ ಮತ್ತು ಅಮೀರ್ ಜಿಲ್ಲ ಅಹ್ಮದಿಯಾ ಜಮಾಅತ್ ದೆಹಲಿ)

**ಮಿನಲ್ ಮೂಮಿನೀನ ರಿಜಾಲುನ್ ಸದಖೂ ಮಾ ಆಹದುಲ್ಲಾಹ ಅಲೈಹಿ ಫ ಮಿನ್‌ಹುಮ್ ಮನ್ ಖಝಾ ನಹಬಹೂ ವ ಮಿನ್‌ಹುಮ್ ಮನ್ ಯನ್‌ತಝಿರು ವಮಾ ಬದ್ದಲೂ ತಬ್‌ದೀಲ.**

ಅಲ್ಲಾಹನೊಡನೆ ತಾವು ಮಾಡಿದ ಒಡಂಬಡಿಕೆಯನ್ನು ಪಾಲಿಸಿದ ಕೆಲವರು ಆ ಸತ್ಯವಿಶ್ವಾಸಿಗಳ ಪೈಕಿಯಲ್ಲಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಈಡೇರಿಸಿದ್ದಾರೆ. ಇನ್ನು ಕೆಲವರು (ಅದಕ್ಕೋಸ್ಕರ) ಸಂದರ್ಭವನ್ನು ಕಾಯುತ್ತಿದ್ದಾರೆ. ಅವರು ತುಸುಮಾತ್ರವಾದರೂ ಬದಲಾಗಲಿಲ್ಲ. (ಪವಿತ್ರ ಖುರ್‌ಆನ್ 33:24).

ಬಹುಮಾನ್ಯ ಸಭಾಧ್ಯಕ್ಷರೇ, ಬಹುಮಾನ್ಯ ಶ್ರೋತೃಗಳೇ,

ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವ ಬರಕಾತುಹು,

ನನ್ನ ಭಾಷಣದ ವಿಷಯ ಹಝ್ರತ್ ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಮೌಲಾನ ಹಕೀಮ್ ನೂರುದ್ದೀನ್ ರಝಿಯಲ್ಲಾಹು ಅನ್‌ಹುರವರ ಜೀವನ ಚರಿತ್ರೆಯಾಗಿದೆ.

ಅಲ್ಲಾಹನು ಪ್ರತಿಯೊಂದು ಕಾಲಘಟ್ಟದಲ್ಲಿ ತನಗೆ ಪ್ರಿಯರಾದವರನ್ನು ಲೋಕದಲ್ಲಿ ನಿಯೋಜಿಸುವಾಗ ಅವರಿಗೆ ಬೆಂಬಲ ಮತ್ತು ಸಹಾಯ ನೀಡಲು ಆಕಾಶದಲ್ಲಿ ಮತ್ತು ಭೂಮಿಯಲ್ಲಿ ದೃಷ್ಟಾಂತಗಳನ್ನು ಪ್ರಕಟಿಸುತ್ತಾನೆ. ಮತ್ತು ಅವರಿಗೆ ಎಂತಹ ಸಂಗಡಿಗರನ್ನು ನೀಡುತ್ತಾನೆಂದರೆ ಅವರು ನಿಯೋಜಿತ ಮಹಾನುಭಾವರ ಪ್ರತಿಬಿಂಬವಾಗಿರುತ್ತಾರೆ. ಅಲ್ಲಾಹನು ಆರಂಭದ ಕಾಲದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರನ್ನು ಜೊತೆಗಾರನಾಗಿ ನೀಡಿರುವ ಹಾಗೆಯೇ ಅಂತಿಮ ಕಾಲದಲ್ಲಿ ನಿಯೋಜಿತರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹಝ್ರತ್ ನೂರುದ್ದೀನ್(ರ)ರನ್ನು ಜೊತೆಗಾರನಾಗಿ ನೀಡಿದನು.

ನಾನು ಈ ಇಬ್ಬರ ಬಗ್ಗೆ ಅವರ ಜೀವನದ ಕೆಲವು ಪಾರ್ಶ್ವಗಳ ಕುರಿತು ಬೆಳಕು ಬೀರಲು ಪ್ರಯತ್ನಿಸುವೆನು. (ವ ಬಿಲ್ಲಾಹಿ ತೌಫೀಖ್). ಪ್ರವಾದಿಗಳನ್ನೆಲ್ಲಾ ಹೊರತುಪಡಿಸಿ ಮನುಷ್ಯರಲ್ಲೆಲ್ಲಾ ಅತ್ಯಂತ ಶ್ರೇಷ್ಠ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಆಗಿದ್ದಾರೆ. ಅವರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಖಲೀಲ್ (ಮಿತ್ರ)ನನ್ನಾಗಿ ಮಾಡಿದ್ದರು. ಅವರ ಸತ್ಯಸಂಧತೆ ಬಗ್ಗೆ ಅಲ್ಲಾಹನೇ ಹೇಳಿದ್ದಾನೆ, ಅವರು ಸತ್ಯದ ಪ್ರತಿಬಿಂಬವಾಗಿದ್ದರು. ಅವರು ಅಜ್ಞಾನ ಕಾಲದಲ್ಲಿಯೂ ಮದ್ಯಪಾನ ಮಾಡುತ್ತಿರಲಿಲ್ಲ. ಜುಗಾರಿ ಆಟ ಆಡುತ್ತಿರಲಿಲ್ಲ. ಅವರು ಎಲ್ಲ ವಿಧಗಳ ನಿಷಿದ್ಧ ಕರ್ಮಗಳಿಂದ ತಮ್ಮನ್ನು ದೂರ ಸರಿಸಿದ್ದರು. ಅವರ ಬಗ್ಗೆ ಹಝ್ರತ್ ಉಮರ್ ಫಾರೂಖ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ಅವರ ಸ್ಥಾನವನ್ನೂ ಪದವಿಯನ್ನೂ ಎಂದೂ ತಲಪಲಾರೆ. ಅವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರ ನಮಾಝಿನ ನೇತೃತ್ವ ವಹಿಸಿಕೊಟ್ಟರು. ಸ್ವರ್ಗದ ಎಲ್ಲ ಬಾಗಿಲುಗಳಿಂದ ಪ್ರವೇಶಿಸಲು ಅವರಿಗೆ ಆಹ್ವಾನ ನೀಡಲಾಗುವುದು. ಅವರು ಇಸ್ಲಾಮಿಗೆ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಎಷ್ಟು ನೆರವು ನೀಡಿದರೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅವರು ಮಾಡಿದ ಉಪಕಾರಗಳಿಗೆ ಪ್ರತಿಫಲವನ್ನು ಸ್ವತಃ ಅಲ್ಲಾಹನು ನೀಡುವನು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಸ್ಥಾನ ಕವಿ ಹಸ್ಸಾನ್ ಬಿನ್ ಸಾಬಿತ್ ಅನ್‌ಸಾರಿ(ರ) ಹಝ್ರತ್ ಅಬೂಬಕರ್ ಬಗ್ಗೆ ಹೇಳುತ್ತಾರೆ: ನಿಮ್ಮ ಹೃದಯದಲ್ಲಿ ನಿಮ್ಮ ಒಳ್ಳೆಯ ಸಹೋದರನ ಬಗ್ಗೆ ನೋವುಭರಿತ ನೆನಪುವಾದರೆ ಆಗ ನೀವು ನಿಮ್ಮ ಸಹೋದರ ಅಬೂಬಕರ್ ಬಗ್ಗೆಯೂ ನೆನಪಿಸಿರಿ. ಅವರು ಅವರ ಒಳಿತುಗಳ ಕಾರಣ ನೆನಪಿಸಲು ಅರ್ಹರಾಗಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಅವರು ಎಲ್ಲರಿಗಿಂತ ಹೆಚ್ಚು ಮುತ್ತಖಿಯಾಗಿದ್ದರು. ಅವರು ಹೆಚ್ಚು ನ್ಯಾಯಪಾಲನೆ ಮಾಡುವವರಾಗಿದ್ದರು. ತಾನು ವಹಿಸಿಕೊಂಡ ಹೊಣೆಗಾರಿಕೆಗಳನ್ನು ಉತ್ತಮವಾಗಿ ಅವರು ಈಡೇರಿಸುವವರಾಗಿದ್ದರು. ಸೌರ್ ಗುಹೆಯಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಿದ್ದ ಎರಡನೆಯ ವ್ಯಕ್ತಿ ಅವರಾಗಿದ್ದರು. ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಸರಣೆಯಲ್ಲಿ ತಲ್ಲೀನರಾಗಿದ್ದರು. ಅವರು ಕೈಯಲ್ಲಿ ಎತ್ತಿಕೊಂಡ ಪ್ರತಿಯೊಂದು ಕೆಲಸವನ್ನು ಸುಂದರಗೊಳಿಸುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ ಪುರುಷರಲ್ಲಿ ಅವರು ಪ್ರಥಮರಾಗಿದ್ದರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೇಮ, ಅವರ ಅನುಸರಣೆ, ಸಹಿಷ್ಣು ಮನೋಭಾವ, ಕ್ಷಮೆ, ಶೌರ್ಯ, ಇಸ್ಲಾಮಿನ ಬಗ್ಗೆ ಅಭಿಮಾನ, ಬಡವರ ಪರಿಪಾಲನೆ, ಔದಾರ್ಯ ಉತ್ತಮ ವರ್ತನೆಗಳ ವೈಭವಶಾಲಿ ಉದಾಹರಣೆಗಳನ್ನು ತನ್ನ ಜೀವಿತದಲ್ಲಿ ನೀಡಿದವರು ಇಸ್ಲಾಮಿನ ಶ್ರೇಷ್ಠ ಮಹಾನುಭಾವರಾದ ಹಝ್ರತ್ ಅಬೂಬಕರ್ ಸಿದ್ದೀಖ್ ಆಗಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಅಬೂಬಕರ್(ರ) ಬಗ್ಗೆ ರಚಿಸಿದ ಅರಬಿ ಖಸೀದದಲ್ಲಿ ಹೇಳಿದ ಮಾತುಗಳ ಭಾಷಾಂತರ ಹೀಗಿದೆ: ಅವರು ಅಲ್ಲಾಹನ ಪ್ರವಾದಿಯ ಬಳಿಗೆ ಸತ್ಯಸಂಧರಾಗಿ ಆಗಮಿಸಿದಾಗ ಅವರು ಪ್ರಕಾಶಿಸಲ್ಪಟ್ಟರು. ಮಾಲಿನ್ಯ ಉಂಟುಮಾಡುವ ಅಂಧಕಾರದ ಯಾವ ಪ್ರಭಾವವೂ ಬಾಕಿಯಾಗಿ ಉಳಿಯಲಿಲ್ಲ. ಆಜ್ಞಾ ಪಾಲಕರಾಗಿ ಅವರು ರೆಕ್ಕೆಗಳೊಂದಿಗೆ ಹಾರಿದರು. ಅವರು ಗೌರವಾನ್ವಿತ ಪ್ರವಾದಿಯವರಿಗೆ ಬಲಗೈ ಆದರು. ನಾವು ಮತ್ತು ನೀವು ತೋಟಗಳಲ್ಲಿ ಆನಂದಿಸುತ್ತಿದ್ದೇವೆ. ಆದರೆ ಅವರು ಹತ್ಯೆಯ ಮೈದಾನದಲ್ಲಿ ಪುನರುತ್ಥಾನದ ದಿನದ ರೀತಿಯಲ್ಲಿ ಹಾಜರಾಗಿದ್ದರು. ಅವರು ನಿಷ್ಠಾಬದ್ಧರಾಗಿ ತಮ್ಮ ಊರಿನ ಬಗ್ಗೆ ಪ್ರೀತಿಯನ್ನು ಅಲ್ಲಾಹನಿಗೋಸ್ಕರ ತ್ಯಜಿಸಿದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಪ್ರೇಮದಲ್ಲಿ ಮುಳುಗಿದವನ ಹಾಗೆ ಆಗಮಿಸಿದರು. (ಸಿರ್ರುಲ್ ಖಿಲಾಫ ಪುಟ 182).

ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಹೆಸರು ಅಬ್ದುಲ್ಲಾ ಎಂದಾಗಿತ್ತು. ಅವರ ಪಿತ ಉಸ್ಮಾನ್ ಬಿನ್ ಆಮಿರ್. ಅವರ ಅಡ್ಡ ಹೆಸರು ಅಬೂಬಕರ್ ಅವರ ಬಿರುದು ಅತೀಖ್ ಮತ್ತು ಸಿದ್ದೀಖ್. ಅವರು 573ರಲ್ಲಿ ಜನಿಸಿದರು. ಅವರ ತಾಯಿಯ ಹೆಸರು ಸಲ್ಮಾ ಬಿನ್ತ್ ಸಹರ್ ಬಿನ್ ಆಮಿರ್, ಅವರು ಉಮ್ಮುಲ್ ಖೈರ್ ಎಂದು ಕರೆಯಲ್ಪಡುತ್ತಿದ್ದರು.

ಹಝ್ರತ್ ಅಬೂಬಕರ್(ರ)ರ ಬಗ್ಗೆ ತಾರಿಖೆ ತಬರಿ ಎಂಬ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ: ಅಬೂಬಕರ್ ತಮ್ಮ ಕೋಮಿನ ಪ್ರೀತಿಗೆ ಪಾತ್ರರಾಗಿದ್ದರು. ಅವರು ಮೃದು ಸ್ವಭಾವಿಗಳಾಗಿದ್ದರು. ಅವರಿಗೆ ತಮ್ಮ ಸಮುದಾಯದ ವಂಶಾವಳಿ ಬಗ್ಗೆ ಮತ್ತು ಅವರ ಒಳಿತು ಕೆಡುಕುಗಳ ಬಗ್ಗೆ ಇತರರಿಗಿಂತ ಚೆನ್ನಾಗಿ ತಿಳಿದಿತ್ತು. ಅವರು ವ್ಯಾಪಾರ ಮಾಡುತ್ತಿದ್ದರು. ಉತ್ತಮ ಸ್ವಭಾವ ಗುಣ ಹೊಂದಿದವರೂ ಒಳಿತುಗಳನ್ನು ಮಾಡುವವರೂ ಆಗಿದ್ದರು. ಅವರಿಗಿದ್ದ ಅರಿವಿನ ಕಾರಣದಿಂದ ಜನರು ಅವರ ಬಳಿಗೆ ಬರುತ್ತಿದ್ದರು ಮತ್ತು ಅವರ ಅನುಭವಗಳ ಕಾರಣದಿಂದ ಅವರ ಉತ್ತಮ ಸಭೆಗಳ ಕಾರಣದಿಂದ ಜನರು ಅವರನ್ನು ಪ್ರೀತಿಸುತ್ತಿದ್ದರು. (ತಾರೀಖೆ ತಬರಿ ಭಾಗ 1 ಪುಟ 540).

ಹಝ್ರತ್ ಅಬೂಬಕರ್(ರ) ಇಸ್ಲಾಮ್ ಧರ್ಮವನ್ನು ಪ್ರವೇಶಿಸಿದ ಬಗ್ಗೆ ಅನೇಕ ಘಟನೆಗಳು ವರದಿಯಾಗಿವೆ. ಕೆಲವು ಘಟನೆಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತಫ್‌ಸೀರ್ ಕಬೀರ್‌ನಲ್ಲಿ ಹೀಗೆ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಾನು ನಬಿ ಎಂದು ವಾದಿಸಿದ ಸಮಯದಲ್ಲಿ ಹಝ್ರತ್ ಅಬೂಬಕರ್(ರ) ಹೊರಗೆ ಎಲ್ಲಿಗೋ ಹೋಗಿದ್ದರು. ಅವರು ಮರಳಿ ಬಂದಾಗ ಅವರ ದಾಸಿ ಹೀಗೆ ಹೇಳಿದಳು: ನಿಮ್ಮ ಸ್ನೇಹಿತ (ನಊಧುಬಿಲ್ಲಾಹ್) ಹುಚ್ಚನಾಗಿದ್ದಾನೆ. ವಿಚಿತ್ರ ಮಾತುಗಳನ್ನು ಹೇಳುತ್ತಿದ್ದಾನೆ. ನನ್ನ ಬಳಿಗೆ ಆಕಾಶದಿಂದ ದೇವದೂತರು ಅವತೀರ್ಣರಾಗುತ್ತಾರೆ ಎಂದು ಹೇಳುತ್ತಾನೆ. ಹಝ್ರತ್ ಅಬೂಬಕರ್ ತಕ್ಷಣ ಅಲ್ಲಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆಗೆ ಹೋದರು. ಆ ಬಾಗಿಲು ತಟ್ಟಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೊರಗೆ ಬಂದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು, ತಾವು ವಿಶದೀಕರಿಸಿ ಹೇಳುವ ಆವಶ್ಯಕತೆ ಇಲ್ಲ. ನೀವು ಇಷ್ಟು ಮಾತ್ರ ಹೇಳಿರಿ. ನೀವು ಹೀಗೆ ಹೇಳಿರುವಿರೋ? ದೇವದೂತರು ನನ್ನ ಬಳಿಗೆ ಬಂದು ನನ್ನೊಂದಿಗೆ ಮಾತನಾಡುತ್ತಾರೆ. ಹಝ್ರತ್ ಅಬೂಬಕರ್(ರ)ರಿಗೆ ತಪ್ಪು ಗ್ರಹಿಕೆಯಾಗದಿರಲಿ ಎಂಬ ಉದ್ದೇಶದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸವಿವರವಾಗಿ ಹೇಳಲು ಇಚ್ಛಿಸಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ನೀವು ವಿಶದೀಕರಿಸಿ ಹೇಳಬೇಡಿರಿ. ನೀವು ಇಷ್ಟುಮಾತ್ರ ಹೇಳಿದರೆ ಸಾಕು, ನೀವು ಆ ರೀತಿ ಹೇಳಿರುವಿರೆಂದು. ಆಗ

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮುನ್ನುಡಿಯಾಗಿ ಮಾತನಾಡಲು ಬಯಸಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ನೀವು ಇಷ್ಟುಮಾತ್ರ ಹೇಳಿರಿ ನಾನು ಆಲಿಸಿದ ಮಾತುಗಳು ಸರಿಯೇ ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಾನು ಹಾಗೆ ಹೇಳಿದ್ದೇನೆ. ಆಗ ಹಝ್ರತ್ ಅಬೂಬಕರ್(ರ) ನಿವೇದಿಸಿದರು. ನಾನು ತಮ್ಮನ್ನು ನಂಬುತ್ತೇನೆ. ಅನಂತರ ಅವರು ಹೇಳಿದರು: ನಾನು ತಮ್ಮನ್ನು ನಿಮ್ಮ ವಾದಗಳ ಬಗ್ಗೆ ಸಾಕ್ಷ್ಯಾಧಾರ ನೀಡುವುದರಿಂದ ತಡೆದುದು ಏಕೆಂದರೆ ನಾನು ಇಚ್ಛಿಸಿದೆ ನನ್ನ ವಿಶ್ವಾಸ ಕಣ್ಣಾರೆ ಕಂಡುದನ್ನು ಅನುಸರಿಸಿರಬೇಕು. ಅದರ ಅಸ್ತಿಭಾರ ಸಾಕ್ಷ್ಯಾಧಾರವಾಗಬಾರದು. ಏಕೆಂದರೆ ನೀವು ಸತ್ಯಸಂಧರೆಂದೂ ಸಾತ್ವಿಕರೆಂದೂ ಅಂಗೀಕರಿಸಿದ ನಂತರ ಬೇರೆ ಸಾಕ್ಷ್ಯಾಧಾರಗಳ ಆವಶ್ಯಕತೆ ಇರುವುದಿಲ್ಲ. ಒಟ್ಟಾರೆ ಹೇಳುವುದಾದರೆ ಯಾವ ವಿಷಯವನ್ನು ಮಕ್ಕದವರು ಮರೆಮಾಡಿದ್ದರೋ ಅದನ್ನು ಹಝ್ರತ್ ಅಬೂಬಕರ್(ರ) ತನ್ನ ವರ್ತನೆ ಮೂಲಕ ಸ್ಪಷ್ಟಪಡಿಸಿದರು. (ತಫ್‌ಸೀರ್ ಕಬೀರ್ ಭಾಗ 2 ಪುಟ 251–252).

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದರು: ನಾನು ಇಸ್ಲಾಮ್ ಧರ್ಮದ ಕಡೆಗೆ ಯಾರನ್ನು ಆಹ್ವಾನಿಸಿದರೂ ಅವನು ಸ್ವಲ್ಪಮಟ್ಟಿಗೆ ಹಿಂಜರಿಕೆ ಪ್ರಕಟಿಸಿದ್ದನು. ಆದರೆ ಅಬೂಬಕರ್ ಮುಂದೆ ಇಸ್ಲಾಮ್ ಬಗ್ಗೆ ಹೇಳಿದಾಗ ಅವರು ಯಾವುದೇ ಹಿಂಜರಿಕೆ ಪ್ರಕಟಿಸಲಿಲ್ಲ. (ಇಬ್ನು ಹಿಶಾಮ್ ಭಾಗ 1 ಪುಟ 267).

ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಹಝ್ರತ್ ಅಬೂಬಕರ್(ರ)ರವರ ಮೇಲೆ ದೌರ್ಜನ್ಯ ಪ್ರಾರಂಭವಾಯಿತು. ವಿವಿಧ ರೀತಿಗಳ ಹಿಂಸಾಚಾರಗಳಿಗೆ ಅವರನ್ನು ಗುರಿಪಡಿಸಲಾಯಿತು. ನೇರಮಾರ್ಗದಲ್ಲಿ ಚಲಿಸುವವರ ಮೇಲೆ ಪರೀಕ್ಷೆಗಳು ಬಂದೆರಗುತ್ತಾ ಇರುತ್ತದೆ. ಸಹಾಬರ ಮೇಲೆ ಸಹ ಈ ದೈವಿಕ ಪರೀಕ್ಷೆಗಳು ಜಾರಿಗೊಂಡಿದ್ದುವು. ಅವರ ಮೇಲೆ ಎಂತಹ ಹಿಂಸಾಚಾರಗಳು ನಡೆದುವು ಎಂದರೆ ಬೃಹತ್ ಪರ್ವತ ಸಹ ನಡುಗಬಹುದಾಗಿತ್ತು. ಆದರೆ ಸಹಾಬರ ಪರಿಶುದ್ಧ ಆತ್ಮಗಳು ದೇಹ ಮತ್ತು ಸಂಪತ್ತನ್ನು ಬಲಿದಾನವಾಗಿ ನೀಡಿದುವು. ಮಕ್ಕದ ಅವಿಶ್ವಾಸಿಗಳು ಬಲಹೀನರಾದ ಗುಲಾಮರಾದ ಮುಸ್ಲಿಮರ ಮೇಲೆ ಮಾತ್ರವಲ್ಲ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಸಹ ದೌರ್ಜನ್ಯ ಮಾಡಿದರು. ಒಂದು ವರದಿ ಹೀಗೆ ಹೇಳುತ್ತಿದೆ: ಒಮ್ಮೆ ಮಕ್ಕದ ಬಹುದೇವಾರಾಧಕರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸುತ್ತುವರಿದು ಹೇಳಿದರು: ನೀನು ನಮ್ಮ ಆರಾಧ್ಯರ ಬಗ್ಗೆ ಹೀಗೆಲ್ಲಾ ಹೇಳಿರುವಿಯೋ? ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಹೌದು, ಹೇಳಿದ್ದೇನೆ. ಆಗ ಯಾರೋ ಒಬ್ಬರು ಹಝ್ರತ್ ಅಬೂಬಕರ್‌ರೊಂದಿಗೆ ಹೇಳಿದರು. ನಿಮ್ಮ ಸ್ನೇಹಿತನ ಕಡೆಗೆ ಗಮನ ಹರಿಸಿರಿ. ಹಝ್ರತ್ ಅಬೂಬಕರ್(ರ) ಆಗಮಿಸಿದಾಗ ಬಹುದೇರಾಧಕರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುತ್ತು ಮುತ್ತು ಜಮಾಯಿಸಿದ್ದರು. ಅಗ ಹಝ್ರತ್ ಅಬೂಬಕರ್ ಪವಿತ್ರ ಖುರ್‌ಆನಿನ ವಚನ ಪ್ರಕಾರ ಹೇಳಿದರು: **ಅ ತಖ್‌ತುಲೂನ ರಜುಲನ್ ಅನ್ ಯಖೂಲ ರಬ್ಬಿಯಲ್ಲಾಹು ವಖದ್ ಜಾಲಿಕುಮ್ ಬಿಲ್‌ಬಯ್ಯಿನಾತಿ ಮಿನ್ ರಬ್ಬಿಕುಮ್.**

ನಿಮ್ಮ ಪ್ರಭುವಿನಿಂದ ಸ್ಪಷ್ಟವಾದ ಸಾಕ್ಷ್ಯಾಧಾರಗಳನ್ನು ತಂದಿದ್ದು **“ನನ್ನ ಪ್ರಭು ಅಲ್ಲಾಹು”** ಎಂದು ಹೇಳಿದ ಕಾರಣದಿಂದ ನೀವೊಬ್ಬ ವ್ಯಕ್ತಿಯನ್ನು ಕೊಲ್ಲುವಿರೋ? (ಪವಿತ್ರ ಖುರ್‌ಆನ್ 40:29).

ಬಹುದೇವಾರಾಧಕರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಬಿಟ್ಟು ಹಝ್ರತ್ ಅಬೂಬಕರ್ ಕಡೆಗೆ ತಿರುಗಿ ಅವರನ್ನು ಹೊಡೆಯಲು ಪ್ರಾರಂಭಿಸಿದರು. ಹಝ್ರತ್ ಅಬೂಬಕರ್(ರ)ರವರ ಪುತ್ರಿ ಹಝ್ರತ್ ಅಸ್‌ಮಾ(ರ) ಹೇಳುತ್ತಾರೆ: ನಮ್ಮ ಪಿತ ನಮ್ಮ ಬಳಿಗೆ ಎಂತಹ ಸ್ಥಿತಿಯಲ್ಲಿ ಬಂದರೆಂದರೆ ಅವರು ತಮ್ಮ ತಲೆಗೂದಲನ್ನು ಸ್ಪರ್ಶಿಸುವಾಗ ಕೂದಲು ಕಿತ್ತು ಬರುತ್ತಿತ್ತು. ಹಝ್ರತ್ ಅಬೂಬಕರ್(ರ) ಆಗ ಹೇಳುತ್ತಿದ್ದರು: **ತಬಾರಕ್ತ ಯಾ ಝುಲ್‌ಜಲಾಲಿ ವಲ್ ಇಕ್ರಾಮ್.**

ಹಝ್ರತ್ ಅಬೂಬಕರ್ ಮುಸ್ಲಿಮರಾದ ನಂತರ ಅತ್ಯಂತ ಆವೇಶದಿಂದ ಪ್ರಚಾರ ಮಾಡತೊಡಗಿದರು. ಅವರ ತಬ್ಲೀಗ್ ಕಾರಣದಿಂದ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ತಲ್‌ಹ ಬಿನ್ ಅಬ್ದುಲ್ಲಾ(ರ) ಸಅದ್ ಬಿನ್ ಅಬೀ ವಖಾಸ್(ರ) ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮತ್ತು ಇತರ ಅನೇಕ ಗಣ್ಯರು ಮುಸ್ಲಿಮರಾದರು. ಹಝ್ರತ್ ಅಬೂಬಕರ್(ರ)ರವರ ವೈಯಕ್ತಿಕ ಸಾತ್ವಿಕತೆ ಮತ್ತು ದೇವಭಯ ಅವರನ್ನು ಭೇಟಿಯಾಗುವವರನ್ನು ಪ್ರಭಾವಿಸುತ್ತಿತ್ತು. ಅವರ ಜೀವಿತ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ಬಡ ಮುಸ್ಲಿಮರಿಗೆ ಅರ್ಪಿಸಲಾಗಿತ್ತು. ಮಾಲಿಕರಿಂದ ಕಠಿಣ ದೌರ್ಜನ್ಯಗಳಿಗೆ ಪಾತ್ರರಾಗುತ್ತಿದ್ದ ಅನೇಕ ಗುಲಾಮ ಪುರುಷರೂ ಸ್ತ್ರೀಯರೂ ಅವರ ಕಾರಣದಿಂದ ವಿಮೋಚಿತರಾದರು. ಅಂತಹ ಗುಲಾಮರಲ್ಲಿ ಹಝ್ರತ್ ಬಿಲಾಲ್(ರ) ಮತ್ತು ಆಮಿರ್ ಬಿನ್ ಫಹಿರ(ರ) ಸಹ ಸೇರಿದ್ದರು. ಅಲ್ಲಾಹನನ್ನು ಸ್ಮರಿಸಲು ಅವರು ತಮ್ಮ ಮನೆಯ ಅಂಗಳದಲ್ಲಿ ಚಿಕ್ಕದಾದೊಂದು ಮಸ್‌ಜಿದ್ ನಿರ್ಮಿಸಿದ್ದರು. ಅವರು ಆರಾಧನೆ ಮಾಡುವ ರೀತಿ ಎಷ್ಟು ಆಕರ್ಷಕವಾಗಿತ್ತೆಂದರೆ ಜನರು ವಿಶಿಷ್ಟವಾಗಿ ಅವರನ್ನು ಕಾಣಲು ಬರುತ್ತಿದ್ದರು ಮತ್ತು ಅವರಿಂದ ಪ್ರಭಾವಿತರಾಗದೆ ಇರುತ್ತಿರಲಿಲ್ಲ. ಅಲ್ಲಾಹನ ನಿರ್ದೇಶ ಪ್ರಕಾರ ಖುಲ್ ಇನ್ನ ಸಲಾತಿ ವ ನುಸುಖೀ ವ ಮಹ್‌ಯಾಯ ವ ಮಮಾತಿ ಲಿಲ್ಲಾಹಿ ರಬ್ಬಿಲ್ ಆಲಮೀನ್ ಪ್ರಕಾರ ತನ್ನ ಜೀವಿತದ ಕ್ಷಣ ಕ್ಷಣಗಳನ್ನು ಅವರು ಬಲಿದಾನವಾಗಿ ನೀಡುತ್ತಿದ್ದರು.

ಹಝ್ರತ್ ಅಬೂಬಕರ್(ರ) ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ವಿನಿಯೋಗಿಸುವುದರಲ್ಲಿ ಮತ್ತು ದಾನಧರ್ಮ ನೀಡುವುದರಲ್ಲಿ ಇತರ ಎಲ್ಲ ಸಹಾಬರಿಗಿಂತ ಮೇಲಿನ ಸ್ಥಾನದಲ್ಲಿದ್ದರು. ತಿರ್ಮಿಧಿ ಹದೀಸು ಗ್ರಂಥದಲ್ಲಿ ಒಂದು ಹದೀಸು ಹೀಗಿದೆ: ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಹಾಬರೊಂದಿಗೆ ಅಲ್ಲಾಹನ ಮಾರ್ಗದಲ್ಲಿ ಸದಖ ನೀಡಲು ಹೇಳಿದಾಗ ಹಝ್ರತ್ ಉಮರ್(ರ) ಹೇಳಿದರು. ಈ ದಿನ ನಾನು ಹಝ್ರತ್ ಅಬೂಬಕರ್(ರ)ರವರಿಗಿಂತ ಮುಂದೆ ಸಾಗುವೆನು. ಹಝ್ರತ್ ಉಮರ್ ತನ್ನ ಮನೆಯ ಸಂಪತ್ತಿನ ಅರ್ಧ ಭಾಗ ತಂದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನಿಮ್ಮ ಮನೆಯವರಿಗೋಸ್ಕರ ಎಷ್ಟು ಮನೆಯಲ್ಲಿ ಉಳಿಸಿರುವಿರಿ. ಹಝ್ರತ್ ಉಮರ್(ರ) ಹೇಳಿದರು ಅರ್ಧಾಂಶ. ಹಝ್ರತ್ ಅಬೂಬಕರ್ ಒಂದು ಚೀಲ ಹಿಡಿದುಕೊಂಡು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ಹೇ ಅಬೂಬಕರ್ ಮನೆಯವರಿಗೆ ಎಷ್ಟು ಬಿಟ್ಟು ಬಂದಿರುವೆ. ಅವರು ಹೇಳಿದರು: ನಾನು ಅಲ್ಲಾಹ್ ಮತ್ತು ಅವನ ರಸೂಲರನ್ನು ಮನೆಯಲ್ಲಿ ಬಿಟ್ಟು ಬಂದಿದ್ದೇನೆ. (ಮಿಷ್ಕಾತ್ ಹದೀಸು 554).

ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಮ್ಮೆ ಹೇಳಿದರು: ಅಬೂಬಕರ್‌ರವರ ಸಂಪತ್ತಿನಿಂದ ನನಗೆ ಎಷ್ಟು ಲಾಭವಾಗಿದೆಯೋ ಅಷ್ಟು ಲಾಭ ಬೇರೆ ಯಾರ ಸಂಪತ್ತಿನಿಂದಲೂ ಲಭಿಸಲಿಲ್ಲ. ನಾನು ಇಹಲೋಕದಲ್ಲಿ ನನಗೆ ಸಹಾಯ ನೀಡಿದ ಎಲ್ಲರಿಗೂ ಪ್ರತಿಫಲ ನೀಡಿದ್ದೇನೆ. ಆದರೆ ಅಬೂಬಕರ್‌ರವರ ಉಪಕಾರಗಳಿಗೆ ಸರ್ವಶಕ್ತನಾದ ಅಲ್ಲಾಹನೇ ಪ್ರತಿಫಲ ನೀಡುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರಿಗೆ ಸಿದ್ದೀಖ್ ಎಂಬ ಪ್ರಶಸ್ತಿ ನೀಡಿದುದು ಅವರ ಯಾವ ವೈಶಿಷ್ಟ್ಯಗಳ ಕಾರಣದಿಂದ ಎಂಬ ವಿಷಯ ಅಲ್ಲಾಹನಿಗೆ ಮಾತ್ರ ಚೆನ್ನಾಗಿ ತಿಳಿದಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಸಹ ಹೇಳಿದರು: ಹಝ್ರತ್ ಅಬೂಬಕರ್(ರ)ರವರ ಶ್ರೇಷ್ಠತೆ ಅವರ ಹೃದಯದಲ್ಲಿ ಏನಿದೆಯೋ ಅದರ ಕಾರಣದಿಂದಾಗಿದೆ.

ಚೆನ್ನಾಗಿ ಯೋಚಿಸುವುದಾದರೆ ಹೀಗೆ ತಿಳಿಯುತ್ತವೆ. ಹಝ್ರತ್ ಅಬೂಬಕರ್(ರ) ಪ್ರಕಟಿಸಿದ ಸತ್ಯಸಂಧತೆಯ ಉದಾಹರಣೆಗೆ ಸಮಾನವಾದುದು ಕಾಣಲು ಅಸಾಧ್ಯವಾಗಿದೆ. ಸತ್ಯವೇನೆಂದರೆ ಪ್ರತಿಯೊಂದು ಕಾಲಘಟ್ಟದಲ್ಲಿ ಯಾವ ವ್ಯಕ್ತಿ ಸಿದ್ದೀಖ್ ವೈಶಿಷ್ಟ್ಯಗಳನ್ನು ಗಳಿಸಲು ಇಚ್ಛಿಸುತ್ತಾನೋ ಅವನು ಹಝ್ರತ್ ಅಬೂಬಕರ್(ರ)ರವರ ಸ್ವಭಾವ ಗುಣಗಳನ್ನೂ ಪ್ರಕೃತಿಯನ್ನೂ ತನ್ನೊಳಗೆ ಸೃಷ್ಟಿಸಲು ತನಗೆ ಸಾಧ್ಯವಿರುವಷ್ಟು ಪರಿಶ್ರಮಪಡಬೇಕು. ಮತ್ತು ಸಾಧ್ಯವಿರುವಷ್ಟು ಪ್ರಾರ್ಥನೆಗಳನ್ನು ಮಾಡಬೇಕು. ಹಝ್ರತ್ ಅಬೂಬಕರ್(ರ)ರವರ ಪ್ರಕೃತಿಯ ನೆರಳನ್ನು ತನ್ನ ಮೇಲೆ ಹಾಕುವ ತನಕ ಮತ್ತು ಅವರ ಮಾರ್ಗದಲ್ಲಿ ವರ್ಣರಂಜಿತನಾಗುವ ತನಕ ಸಿದ್ದೀಖ್‌ಗೆ ಸಂಬಂಧಿಸಿದ ಪರಿಪೂರ್ಣತೆಗಳನ್ನು ಗಳಿಸಲು ಸಾಧ್ಯವಿಲ್ಲ.

ಹಝ್ರತ್ ಅಬೂಬಕರ್(ರ)ರವರ ಸ್ವಭಾವ ಗುಣಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚರ್ಯೆಗಳ ಪ್ರಕಾರವೇ ಆಗಿದ್ದುವು. ಒಂದು ಹದೀಸಿನಲ್ಲಿ ಹಝ್ರತ್ ಅಬೂಹುರೈರ(ರ) ಹೀಗೆ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಿವೇದಿಸಿದರು: ಇಂದು ಯಾರು ಉಪವಾಸ ಅನುಷ್ಠಿಸುತ್ತಾ ಇದ್ದಾರೆ. ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ಅನುಷ್ಠಿಸುತ್ತಾ ಇದ್ದೇನೆ. ಪುನಃ ವಿಚಾರಿಸಲಾಯಿತು. ಇಂದು ಯಾರು ಜನಾಝದಲ್ಲಿ ಭಾಗವಹಿಸಿದ್ದಾರೆ? ಹಝ್ರತ್ ಅಬೂಬಕರ್ ಹೇಳಿದರು: ನಾನು ಭಾಗವಹಿಸಿದೆ. ಪುನಃ ವಿಚಾರಿಸಲಾಯಿತು. ಇಂದು ಯಾರು ನಿರ್ಗತಿಕರಿಗೆ ಆಹಾರ ನೀಡಿದ್ದಾರೆ. ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ನೀಡಿದ್ದೇನೆ. ಪುನಃ

ವಿಚಾರಿಸಲಾಯಿತು. ಇಂದು ಯಾರು ರೋಗಿಯನ್ನು ಸಂದರ್ಶಿಸಿದ್ದಾರೆ? ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ಸಂದರ್ಶಿಸಿದ್ದೇನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯಾವ ವ್ಯಕ್ತಿಯಲ್ಲಿ ಈ ಎಲ್ಲ ಸ್ವಭಾವ ಗುಣಗಳು ಜಮಾಯಿಸಿವೆಯೋ ಅವನು ಖಂಡಿತವಾಗಿಯೂ ಸ್ವರ್ಗವನ್ನು ಪ್ರವೇಶಿಸುವನು. (ಮುಸ್ಲಿಮ್ ಹದೀಸು 1028).

ಮದೀನಕ್ಕೆ ಹಿಜ್ರತ್ ಹೋಗುವ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಪ್ರಕಟಿಸಿದ ನಿಷ್ಠೆ ಮತ್ತು ಅರ್ಪಣೆಯ ಉದಾಹರಣೆ ಅಪ್ರತಿಮವಾಗಿದೆ. ಅವರು ಎರಡು ಒಂಟೆಗಳನ್ನು ಮೊದಲೇ ಸಿದ್ಧಪಡಿಸಿದ್ದರು. ಒಂದು ಒಂಟೆಯನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅದರ ಬೆಲೆ ಪಡಕೊಳ್ಳದೆ ನೀಡಲು ಬಯಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದಕ್ಕೊಪ್ಪದೆ ಅದರ ಬೆಲೆ ನೀಡಿದರು. ಹಝ್ರತ್ ಅಬೂಬಕರ್(ರ) ಐದು ಸಾವಿರ ದಿರ್‌ಹಮ್ ದಾರಿ ಖರ್ಚಿಗೆ ಇಟ್ಟುಕೊಂಡಿದ್ದರು. ಸೌರ್ ಗುಹೆಯಲ್ಲಿ ಅವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಾರನಾಗುವ ಭಾಗ್ಯ ಲಭಿಸಿತು. ಅದರ ಬಗ್ಗೆ ಪ್ರಸ್ತಾಪ ಪವಿತ್ರ ಖುರ್‌ಆನ್‌ನಲ್ಲಿ ಶಾಶ್ವತವಾಗಿರುವಂತಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ:

**ಸಾನಿಯಸ್ನೈನಿ ಇಝ್‌ಹುಮಾ ಫಿಲ್ ಗಾರಿ ಇಝ್ ಯಖೂಲು ಲಿ ಸಾಹಿಬಿಹೀ ಲಾ ತಹ್‌ಝನ್ ಇನ್ನಲ್ಲಾಹ ಮಅನಾ.**

ಅವರು ಇಬ್ಬರಲ್ಲಿ ಒಬ್ಬರಾಗಿದ್ದರು. ಅವರೀರ್ವರೂ ಆ ಗುಹೆಯಲ್ಲಿದ್ದಾಗ ನೀನು ವ್ಯಥೆಪಡಬೇಡ ಖಂಡಿತವಾಗಿಯೂ ಅಲ್ಲಾಹನು ನಮ್ಮ ಜೊತೆಗಿದ್ದಾನೆ ಎಂದು ಅವರು ತನ್ನ ಸಂಗಡಿಗನೊಂದಿಗೆ ಹೇಳಿದ್ದಾಗ. (ಪವಿತ್ರ ಖುರ್‌ಆನ್ 9:40).

ಸೀರತ್ ಹಲ್‌ಬಿಯ್ಯದಲ್ಲಿ ಹೀಗೆ ಬರೆಯಲಾಗಿದೆ: ಹಿಜ್ರತ್ ಪ್ರಯಾಣದ ಕಾಲದಲ್ಲಿ ಹಝ್ರತ್ ಅಬೂಬಕರ್(ರ) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂರಕ್ಷಿಸಲು ಕೆಲವು ಸಾರಿ ಮುಂದೆ, ಕೆಲವು ಸಾರಿ ಹಿಂದೆ, ಕೆಲವು ಸಾರಿ ಎಡಭಾಗದಲ್ಲಿ, ಕೆಲವು ಸಾರಿ ಬಲಭಾಗದಲ್ಲಿ ಸಂಚರಿಸಿ ತಮ್ಮ ಯಜಮಾನರನ್ನು ಸುರಕ್ಷಿತವಾಗಿ ಮದೀನಕ್ಕೆ ತಲಪಿಸಿದರು.

ಮುಸ್‌ನದ್ ಅಹ್ಮದ್ ಹದೀಸು ಗ್ರಂಥದಲ್ಲಿ ಹೀಗೆ ಬರೆದಿದೆ: ಹಿಜ್ರತ್ ಸಂದರ್ಭದಲ್ಲಿ ಒಬ್ಬ ಬಹುದೇವಾರಾಧಕನಾದ ಸುರಾಖ ಬೆನ್ನಟ್ಟಿ ಬರುವುದನ್ನು ದೂರದಿಂದ ಕಂಡಾಗ ಹಝ್ರತ್ ಅಬೂಬಕರ್(ರ) ರೋಧಿಸಲು ತೊಡಗಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕಾರಣವೇನೆಂದು ಕೇಳಿದಾಗ ಹಝ್ರತ್ ಅಬೂಬಕರ್(ರ) ಹೇಳಿದರು: ನನ್ನ ಜೀವದ ಭಯದಿಂದಲ್ಲ, ನಿಮಗೆ ಏನಾದರೂ ಹಾನಿ ಸಂಭವಿಸುವ ಭಯದಿಂದ ಅತ್ತೆನು.

ಸೌರ್ ಗುಹೆಯಲ್ಲಿ ಪ್ರವೇಶಿಸಿದಾಗ ಹಝ್ರತ್ ಅಬೂಬಕರ್(ರ) ಗುಹೆಯನ್ನು ಗುಡಿಸಿ ಎಲ್ಲ ಬಿಲಗಳನ್ನು ಮುಚ್ಚಿದರು. ಅವುಗಳೊಳಗೆ ಚೇಳುಗಳು ಮತ್ತು ಹಾವುಗಳು ಇರದಂತೆ ನಿಗಾವಹಿಸಿದರು. ಆದರೆ ಒಂದು ಬಿಲ ಮುಚ್ಚದೆ ಉಳಿದಾಗ ಅದರ ಮೇಲೆ ತನ್ನ ಪಾದವನ್ನು ಇರಿಸಿ ಕುಳಿತುಕೊಂಡಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರ ತೊಡೆಯ ಮೇಲೆ ತಲೆ ಇರಿಸಿ ವಿಶ್ರಾಂತಿ ಪಡೆದರು. ಆದರೆ ಬಿಲದಲ್ಲಿರುವ ಒಂದು ಚೇಳು ಹಝ್ರತ್ ಅಬೂಬಕರ್(ರ)ರವರ ಪಾದವನ್ನು ಕಚ್ಚಿತು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅತ್ಯಂತ ಪ್ರೀತಿಸುತ್ತಿದ್ದ ಅವರು ತನ್ನ ಕಾಲನ್ನು ಅಲುಗಾಡಿಸಲಿಲ್ಲ. ಆದರೆ ನೋವು ಮತ್ತು ಪ್ರೀತಿ ಭರಿತರಾಗಿ ಅವರು ಅತ್ತರು. ಅವರ ಪ್ರೀತಿ ಎಷ್ಟು ಅಪಾರವಾಗಿತ್ತು. ಯಾವ ಪತಾಕೆಯ ಗಂಟನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಬಿಗಿದಿದ್ದರೋ ಅದನ್ನು ಬಿಚ್ಚಲು ಹಝ್ರತ್ ಅಬೂಬಕರ್(ರ) ಸಿದ್ಧರಾಗಲಿಲ್ಲ.

ಲೋಕದಲ್ಲಿ ತಮ್ಮ ಪ್ರಿಯರಿಗೋಸ್ಕರ ತ್ಯಾಗಗಳನ್ನು ಮಾಡುವವರು ಅನೇಕರಿದ್ದಾರೆ. ತನ್ನ ಪ್ರೇಯಸಿಯನ್ನು ವಿವಾಹವಾಗಲು ಕಿರೀಟವನ್ನು ತ್ಯಜಿಸಿದವರಿದ್ದಾರೆ. ಆದರೆ ದೃಢವಿಶ್ವಾಸದಿಂದಲೂ ಸ್ಥಿರಚಿತ್ತತೆಯಿಂದಲೂ ತನ್ನ ಪ್ರತಿಜ್ಞೆಯನ್ನು ಈಡೇರಿಸಿದವರು ಹಝ್ರತ್ ಅಬೂಬಕರ್ ಸಿದ್ದೀಖ್ ಮಾತ್ರ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹೇಗೆ ಅನುಸರಿಸಿದರೆಂದರೆ ಖಿಯಾಮತ್ ತನಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವ ಪ್ರತಿಯೊಬ್ಬನು ಹಝ್ರತ್ ಅಬೂಬಕರ್(ರ)ರನ್ನು ಅನುಸರಿಸುವನು.

ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗಿದ್ದ ಪ್ರೀತಿಯ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಳಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಹಿಜ್ರತ್ ಸಂದರ್ಭದಲ್ಲಿಯೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಿಧನ ಹೊಂದಿದ ಸಂದರ್ಭದಲ್ಲಿಯೂ ಹಝ್ರತ್ ಅಬೂಬಕರ್(ರ)ರವರ ಸಂಬಂಧ ಒಬ್ಬ ಪ್ರೇಮಿಯ ರೂಪದಲ್ಲಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸೂರತುನ್ನಸ್ರ್ ಅವತೀರ್ಣವಾದಾಗ ಅದರಲ್ಲಿ ರಹಸ್ಯವಾಗಿ ನಿಧನ ಹೊಂದುವಿಕೆಯ ಸಮಾಚಾರ ಅಡಕವಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನ್ನ ಸಹಾಬರೊಂದಿಗೆ ಹೇಳಿದರು: ಅಲ್ಲಾಹನು ತನ್ನ ದಾಸನೊಂದಿಗೆ ತನ್ನ ಬಳಿಗೆ ಬರುವುದು ಮತ್ತು ಲೌಕಿಕ ಜೀವಿತ ಇವುಗಳಲ್ಲಿ ಒಂದನ್ನು ಆಯ್ಕೆ ಮಾಡಲು ಹೇಳಿದಾಗ ಆ ದಾಸ ದೇವನ ಬಳಿಗೆ ಹೋಗುವುದಕ್ಕೆ ಆದ್ಯತೆ ನೀಡಿದನು. ಸಹಾಬರು ಸಂತೋಷಗೊಂಡರು. ಆದರೆ ಹಝ್ರತ್ ಅಬೂಬಕರ್(ರ)ರವರ ಬಿಕ್ಕಳಿಕೆ ವರ್ಧಿಸಿತು. ಅವರು ದುಃಖದಿಂದ ಹೇಳಿದರು: ನನ್ನ ತಂದೆ ತಾಯಿ ಪತ್ನಿ ಮಕ್ಕಳು ನಿಮಗೋಸ್ಕರ ಬಲಿಯಾಗಲಿ ನಿಮಗೋಸ್ಕರ ನಾವು ಪ್ರತಿಯೊಂದು ವಸ್ತುವನ್ನು ಬಲಿದಾನ ನೀಡಲು ಸಿದ್ಧರಾಗಿದ್ದೇವೆ. ಒಬ್ಬ ಸಂಬಂಧಿಕ ರೋಗ ಬಾಧಿತನಾದರೆ ಆಡನ್ನು ಬಲಿದಾನವಾಗಿ ನೀಡುವ ಹಾಗೆ ಹಝ್ರತ್ ಅಬೂಬಕರ್(ರ) ತನ್ನನ್ನು ಮತ್ತು ತನ್ನ ಎಲ್ಲ ಸಂಬಂಧಿಕರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಬಲಿದಾನ ನೀಡಲು ಸಿದ್ಧರಾಗಿದ್ದರು. ಹಝ್ರತ್ ಉಮರ್(ರ) ಮತ್ತು ಇತರ ಸಹಾಬರು ಹಝ್ರತ್ ಅಬೂಬಕರ್(ರ) ಅಳುತ್ತಾ ಆ ರೀತಿ ಮಾತನಾಡುತ್ತಿರುವ ಬಗ್ಗೆ ಆಶ್ಚರ್ಯಗೊಂಡರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಬೂಬಕರ್ ನನಗೆ ಎಷ್ಟು ಪ್ರಿಯರಾಗಿದ್ದಾರೆಂದರೆ ಅಲ್ಲಾಹನ ಹೊರತು ಬೇರೆ ಯಾರನ್ನಾದರೂ ಖಲೀಲ್ ಆಗಿ ಮಾಡಿಕೊಳ್ಳುವುದು ಧರ್ಮಬದ್ಧವಾಗಿದ್ದರೆ ನಾನು ಅಬೂಬಕರ್‌ರನ್ನು ನನ್ನ ಖಲೀಲ್ ಆಗಿ ಮಾಡಿಕೊಳ್ಳುತ್ತಿದ್ದೆ. ಅಬೂಬಕರ್ ನನ್ನ ಸ್ನೇಹಿತರಾಗಿದ್ದಾರೆ. ಮಸ್‌ಜಿದ್ ಕಡೆಗೆ ತೆರೆದಿರುವ ಎಲ್ಲ ಜನರ ಕಿಟಕಿಗಳು ಮುಚ್ಚಲ್ಪಡಬೇಕು. ಆದರೆ ಅಬೂಬಕರ್‌ರವರ ಕಿಟಕಿ ತೆರೆದಿರಲಿ. ಈ ರೀತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂಬಕರ್ ತನ್ನೊಂದಿಗೆ ಹೊಂದಿದ್ದ ಪ್ರೀತಿಯನ್ನು ಪ್ರಶಂಸಿಸಿದರು. ಏಕೆಂದರೆ ಅವರ ಪ್ರೀತಿ ಪರಿಪೂರ್ಣವಾಗಿತ್ತು. ಆ ಪ್ರೀತಿ ಹಝ್ರತ್ ಅಬೂಬಕರ್(ರ)ರಿಗೆ ಸೂಚಿಸಿತು ಜಯದ ಆ ಸಮಾಚಾರದ ಹಿನ್ನೆಲೆಯಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದುವ ಸಮಾಚಾರ ಸಹ ಇದೆ ಎಂದು. ಹಝ್ರತ್ ಅಬೂಬಕರ್(ರ) ತನ್ನ ಮತ್ತು ತನ್ನ ಸಂಬಂಧಿಕರ ಜೀವವನ್ನು ಬಲಿದಾನ ನೀಡಲು ಮುಂದೊಡ್ಡಿದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಸಹ ಹೇಳಿದ್ದಾರೆ: ಹದೀಸುಗಳಲ್ಲಿ ಹೀಗೆ ವರದಿಯಾಗಿದೆ: ಒಮ್ಮೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಯಾವುದೇ ವಿಷಯದ ಬಗ್ಗೆ ಜಗಳ ಮಾಡಿದರು. ಹಝ್ರತ್ ಅಬೂಬಕರ್(ರ) ಜಗಳ ವರ್ಧಿಸುವುದನ್ನು ತಡೆಯಲು ಅಲ್ಲಿಂದ ಹೋಗಲು ತೊಡಗಿದಾಗ ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರವರ ಅಂಗಿಯನ್ನು ಹಿಡಿದುಕೊಂಡು ಹೇಳಿದರು ನನ್ನ ಮಾತಿಗೆ ಉತ್ತರ ಕೊಡು. ಆಗ ಹಝ್ರತ್ ಅಬೂಬಕರ್(ರ)ರವರ ಅಂಗಿ ಹರಿದು ಹೋಯಿತು. ಹಝ್ರತ್ ಉಮರ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ತನ್ನ ತಪ್ಪನ್ನು ಹೇಳಿಕೊಂಡರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯಾವ ಕಾಲದಲ್ಲಿ ಲೋಕವಿಡೀ ನನ್ನನ್ನು ನಿರಾಕರಿಸುತ್ತಿತ್ತೋ ಆ ಕಾಲದಲ್ಲಿ ಅಬೂಬಕರ್ ನನ್ನನ್ನು ನಂಬಿದರು ಮತ್ತು ಪ್ರತಿಯೊಂದು ರೀತಿಯಲ್ಲಿ ನನಗೆ ಸಹಾಯ ನೀಡಿದರು.

ಆ ಸಮಯದಲ್ಲಿ ಹಝ್ರತ್ ಅಬೂಬಕರ್(ರ) ಅಲ್ಲಿಗೆ ತಲಪಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೋಪವನ್ನು ನೋಡಿ ತನ್ನ ತಪ್ಪನ್ನು ಒಪ್ಪಿಕೊಂಡರು. ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಷ್ಟವನ್ನು ಸಹಿಸಲಾಗಲಿಲ್ಲ.

ಹಝ್ರತ್ ಅಬೂಬಕರ್(ರ) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದ ದಿನ ಎಲ್ಲರೂ ಓಡಿಹೋದಾಗ ಹಝ್ರತ್ ಅಬೂಬಕರ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಸ್ಥಿರವಾಗಿ ನಿಂತರು. ತಬೂಕ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನ್ನ ಪತಾಕೆ ಹಝ್ರತ್ ಅಬೂಬಕರ್(ರ)ರಿಗೆ ಕೊಟ್ಟರು. ಪ್ರವಾದಿತ್ವದ ಆರಂಭದಿಂದ ಮೊದಲುಗೊಂಡು ನಿಧನ ಹೊಂದುವ ತನಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹಝ್ರತ್ ಅಬೂಬಕರ್(ರ)ರವರು ಮಾಡಿದ ಸೇವೆಯನ್ನು ಗುರುತಿಸಿಕೊಂಡು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳುತ್ತಿದ್ದರು. ಜೀವ ಮತ್ತು ಸಂಪತ್ತು ಮೂಲಕ ನನಗೆ ಉಪಕಾರವನ್ನು ಅಬೂಬಕರ್‌ರಿಗಿಂತ ಮಿಗಿಲಾಗಿ ಯಾರೂ ಮಾಡಿಲ್ಲ.

ಬಹುಮಾನ್ಯ ಶ್ರೋತೃಗಳೇ,

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ಸಹಾಬರು ಗಾಬರಿಗೊಂಡು ದಿಗ್ರಮೆಗೊಂಡಿದ್ದಾಗ ಅಲ್ಲಾಹನು ಹಝ್ರತ್ ಅಬೂಬಕರ್(ರ) ಮೂಲಕ ಸಹಾಬರಿಗೆ ಸ್ಥಿರ ಚಿತ್ತತೆಯನ್ನು ದಯಪಾಲಿಸಿದನು. ಅವರು ಚದುರಿ ಹೋದ ಸಮುದಾಯವನ್ನು ಜಮಾಯಿಸಿದರು. ಅವರು ಗಂಭೀರವಾಗಿ ಪ್ರಕಟಿಸಿದರು. ವಮಾ ಮುಹಮ್ಮದುನ್ ಇಲ್ಲಾ ರಸೂಲುನ್ ಖದ್ ಖಲತ್ ಮಿನ್ ಖಬ್‌ಲಿ ರುಸುಲ್ □ ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರು ಗತಿಸಿದ್ದಾರೆ. (ಪವಿತ್ರ ಖುರ್‌ಆನ್ 3:145).

ಈ ಆಧ್ಯಾತ್ಮಿಕ ಧ್ವನಿ ಆಲಿಸಿದಾಗ ಮುಸ್ಲಿಮ್ ಸಮುದಾಯದ ಎಲ್ಲ ಜನರ ಹೃದಯದಲ್ಲಿ ಸಮಾಧಾನ ಅವತೀರ್ಣವಾಯಿತು. ಜನರ ಹೃದಯ ತಂಪಾಯಿತು. ಹಝ್ರತ್ ಉಮರ್(ರ) ಪವಿತ್ರ ಖುರ್‌ಆನಿನ ಈ ವಚನವನ್ನು ಆಲಿಸಿದಾಗ ದುಃಖದಿಂದ ಬಲಹೀನನಾಗಿ ಕುಳಿತುಕೊಂಡು ರೋಧಿಸಲು ಪ್ರಾರಂಭಿಸಿದರು.

ತಾರೀಖೆ ಖುಲಫಾದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ಚದುರಿ ಹೋಗಿದ್ದ ಮುಸ್ಲಿಮ್ ಸಮುದಾಯವನ್ನು ಒಗ್ಗೂಡಿಸಿದ ಕೀರ್ತಿ ಹಝ್ರತ್ ಅಬೂಬಕರ್(ರ)ರಿಗೆ ಸಲ್ಲುತ್ತದೆ. ಅವರು ಕೆಟ್ಟುಹೋದುದನ್ನು ಸರಿಪಡಿಸಿದರು. ಕುಸಿದು ಹೋದುದನ್ನು ನಿರ್ಮಿಸಿದರು. ಚದುರಿ ಹೋದವರನ್ನು ಜಮಾಯಿಸಿದರು. ವಕ್ರವಾದುದನ್ನು ನೇರಗೊಳಿಸಿದರು. (ತಾರೀಖೆ ಖುಲಫ ಪುಟ 51–52).

ಹಝ್ರತ್ ಅಬೂಬಕರ್(ರ)ರವರ ಖಿಲಾಫತ್ ಕಾಲದಲ್ಲಿ ವಿವಿಧ ದೇಶಗಳ ಆಡಳಿತಾಧಿಕಾರಿಗಳಾಗಿ ಮುಸ್ಲಿಮರು ನೇಮಿಸಲ್ಪಟ್ಟರು. ಶಾಮ್ ದೇಶವನ್ನು ಜಯಿಸಿದುದು, ಇರಾನ್ ದೇಶವನ್ನು ಜಯಿಸಿದುದು ಅವರ ಕಾಲದಲ್ಲೇ ಆಗಿತ್ತು. ಧರ್ಮ ತ್ಯಾಗದ ಧ್ವನಿಗಳು ಎದ್ದಾಗ ಕೊನೆಗೊಳಿಸಿದುದು, ಪವಿತ್ರ ಖುರ್‌ಆನ್ ವಚನಗಳನ್ನು ಜಮಾಯಿಸುವ ಕೆಲಸ, ಅವರ ಖಿಲಾಫತ್ ಕಾಲದಲ್ಲಿಯೇ ನಡೆಯಿತು.

ಪ್ರೇಮದ ಸಾಕಾರವಾದ ಹಝ್ರತ್ ಅಬೂಬಕರ್(ರ) ತನ್ನ ಎಲ್ಲವನ್ನೂ ಅಲ್ಲಾಹನಿಗೆ ಮತ್ತು ಅವನ ಸಂದೇಶವಾಹಕರಿಗೆ ಅರ್ಪಿಸಿದ ನಂತರ ತನ್ನ ಪ್ರಭುವಾದ ಅಲ್ಲಾಹನನ್ನು ತೃಪ್ತಿಪಡಿಸುತ್ತಾ ಎರಡೂಕಾಲು ವರ್ಷಗಳ ನಂತರ ತನ್ನ ಪ್ರಭುವಿನ ಕಡೆಗೆ ಮರಳಿದರು □ ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

ಇನ್ನು ಮುಂದೆ ನನ್ನ ಭಾಷಣದ ದ್ವಿತೀಯ ಭಾಗವನ್ನು ನಿಮ್ಮ ಮುಂದೆ ಇರಿಸುತ್ತೇನೆ.

ನಮ್ಮ ಯಜಮಾನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಪ್ರಕಾರ ಈ ಕಾಲಘಟ್ಟದಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಮಸೀಹ್ ಮೌಊದ್ ಮತ್ತು ಮಹ್‌ದೀ ಮೌಊದ್ ಆಗಿ ನಿಯೋಜಿಸಲ್ಪಟ್ಟರು. ಪವಿತ್ರ ಖುರ್‌ಆನಿನ ಭವಿಷ್ಯವಾಣಿ ಪ್ರಕಾರ ಅಲ್ಲಾಹನು ಆರಂಭದ ಕಾಲಘಟ್ಟದಲ್ಲಿ ತನ್ನ ಬೆಂಬಲ ಮತ್ತು ಸಹಾಯ ನೀಡಿದ ಹಾಗೆ ಅಂತಿಮ ಕಾಲಘಟ್ಟದಲ್ಲೂ ತನ್ನ ದೃಷ್ಟಾಂತಗಳನ್ನು ತೋರಿಸಿದನು. ಪ್ರಥಮ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನಿಂದ ಸಹಾಯವನ್ನು ಬೇಡಿಕೊಂಡರು. ಅಲ್ಲಾಹನು ಅವರ ಪ್ರಾರ್ಥನೆಗಳನ್ನು ಅಂಗೀಕರಿಸಿ ಹಝ್ರತ್ ಅಬೂಬಕರ್(ರ)ರನ್ನು ಅವರ ಜೊತೆಗಾರನಾಗಿ ನೀಡಿದನು. ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ, ಹೇ ಅಲ್ಲಾಹ್, ನನಗೊಬ್ಬ ಜೊತೆಗಾರನನ್ನು ದಯಪಾಲಿಸು ಎಂದು ಪ್ರಾರ್ಥಿಸಿದಾಗ ಅಲ್ಲಾಹನು ಅವರ ಪ್ರಾರ್ಥನೆಯನ್ನು ಆಲಿಸಿ ಹಝ್ರತ್ ಹಕೀಮ್ ಮೌಲವಿ ನೂರುದ್ದೀನ್ ರಝಿಯಲ್ಲಾಹು ಅನ್‌ಹುರಂತಹ ಉನ್ನತ ಪದವಿಯನ್ನು ಹೊಂದಿದವರನ್ನು ಅವರಿಗೆ ನೀಡಿದನು.

ಖುದ್‌ರತೆ ಸಾನಿಯ ದ್ವಿತೀಯ ದಿವ್ಯಶಕ್ತಿಯ ಪ್ರಥಮ ಪ್ರಕಟನೆಗಾರ, ಅಹ್ಮದಿಯತ್‌ನ ಆಕಾಶದ ಪ್ರಕಾಶಮಾನರಾದ ನಕ್ಷತ್ರ, ಆಧ್ಯಾತ್ಮಿಕತೆಯ ಸಂಗ್ರಹ, ಪ್ರಕಾಶಮಾನರಾದ ಗುಣಗಳ ಖಜಾನೆ, ಪವಿತ್ರ ಖುರ್‌ಆನಿನ ಸೂಕ್ಷ್ಮಜ್ಞಾನದ ಹರಿಯುವ ಕಾರಂಜಿ, ಅಹ್ಮದಿಯತ್‌ನ ದೀಪದ ಪತಂಗ, ಸತ್ಯಸಂಧತೆಯ ಸಾಕಾರ, ಫಾರೂಖಿ ಪ್ರತಾಪದ ಪ್ರತಿಬಿಂಬ, ಹಾಜಿಯುಲ್ ಹರಮೈನ್ ಸಯ್ಯಿದುನಾ ಹಕೀಮ್ ನೂರುದ್ದೀನ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು 1834ರಲ್ಲಿ ಭೇರದಲ್ಲಿ ಜನಿಸಿದರು. ಅವರ ಪಿತ ಹಝ್ರತ್ ಹಾಫಿಝ್ ಗುಲಾಮ್ ರಸೂಲ್ ಮತ್ತು ಮಾತೆಯ ಹೆಸರು ನೂರ್ ಬಖ್ತ್, ಅವರ ವಂಶಾವಳಿ ಪಿತನ ಕಡೆಯಿಂದ ಹಝ್ರತ್ ಉಮರ್ ಫಾರೂಖ್(ರ) ತನಕ ಮತ್ತು ತಾಯಿಯ ವಂಶಾವಳಿ ಹಝ್ರತ್ ಅಲಿ(ರ) ತನಕ ತಲಪುತ್ತಿತ್ತು. ಆ ಕಾರಣದಿಂದ ಅವರು ಫಾರೂಖೀ ಆಗಿದ್ದಾರೆ. ಅಲವಿಯೂ ಆಗಿದ್ದಾರೆ.

ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದನ್ನು ತನ್ನ ತಾಯಿಯಿಂದ ಕಲಿತರು. ಆರಂಭದಿಂದಲೇ ಅವರು ಪವಿತ್ರ ಖುರ್‌ಆನ್ ಬಾಯಿಪಾಠ ಮಾಡುವ ಸಾಮರ್ಥ್ಯ ಹೊಂದಿದ್ದರು. ಈಜುವ ಅಭಿರುಚಿ ಅವರಿಗಿತ್ತು. ಬಾಲ್ಯ ಕಾಲದಿಂದಲೇ ಪುಸ್ತಕಗಳನ್ನು ಓದುವ ಅಭಿರುಚಿ ಇತ್ತು. ವಿದ್ಯಾಭ್ಯಾಸ ಮಾಡಲು ಅವರು ಲಾಹೋರು, ರಾಮ್‌ಪುರ, ಲಕ್ನೋ, ದೆಹಲಿ, ಭೋಪಾಲ್‌ಗಳಲ್ಲಿ ವಾಸಿಸಿದ್ದರು. ಅವರು ಧಾರ್ಮಿಕ ವಿದ್ಯಾಭ್ಯಾಸ ಮಾಡಲು ಮಕ್ಕ ಮದೀನಗಳಿಗೂ ಹೋಗಿದ್ದರು. ಅಲ್ಲಿಂದ ಮರಳಿದ ನಂತರ ಭೇರದಲ್ಲಿ ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಪಾಠ ಕಲಿಸಲು ಪ್ರಾರಂಭಿಸಿದರು. ಅದರೊಂದಿಗೆ ಚಿಕಿತ್ಸಾಲಯ ಸಹ ನಡೆಸುತ್ತಿದ್ದರು. ದೂರ ಪ್ರದೇಶಗಳಿಂದ ಜನರು ಚಿಕಿತ್ಸೆಗೋಸ್ಕರ ಅವರ ಬಳಿಗೆ ಆಗಮಿಸುತ್ತಿದ್ದರು.

1885ರಲ್ಲಿ ಹಝ್ರತ್ ಮೌಲವಿ ಸಾಹಿಬ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ವಿಜ್ಞಾಪನೆ (ಇಶ್ತಿಹಾರ್) ಪ್ರಥಮವಾಗಿ ಓದಿದರು. ಅವರು ಅದರಿಂದ ಬಹಳ ಪ್ರಭಾವಿತರಾದರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಭೇಟಿಯಾಗಲು ಖಾದಿಯಾನಿಗೆ ಹೋದರು. ಅನಂತರ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿಷ್ಠಾವಂತ ಸೇವಕರಲ್ಲಿ ಒಬ್ಬರಾದರು. 1889ರಲ್ಲಿ ಪ್ರಥಮ ಬೈಅತ್ ಸಂದರ್ಭದಲ್ಲಿ ಅವರು ಎಲ್ಲರಿಗಿಂತ ಮೊದಲು ಬೈಅತ್ ಮಾಡುವವರಾದರು. 1890ರಲ್ಲಿ ಹಝ್ರತ್ ಅಖ್‌ದಸ್ ತಾನು ಮಸೀಹ್ ಮೌಊದ್ ಎಂದು ವಾದಿಸಿದಾಗ ಹಝ್ರತ್ ಮೌಲವಿ ಸಾಹಿಬರು ತಕ್ಷಣ ಹಝ್ರತ್ ಅಖ್‌ದಸ್‌ರವರ ವಾದವನ್ನು ನಂಬಿದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಗ್ರಂಥವಾದ ಆಯಿನಯೆ ಕಮಾಲಾತೆ ಇಸ್ಲಾಮ್‌ನಲ್ಲಿ ಹೀಗೆ ಬರೆದಿದ್ದಾರೆ: ನಾನು ಹಗಲು ರಾತ್ರಿ ಅಲ್ಲಾಹನ ಮುಂದೆ ಬೇಡಿಕೊಳ್ಳುತ್ತಾ ಇದ್ದೆನು. "ಹೇ ನನ್ನ ಪ್ರಭೂ ನನಗೆ ಸಹಾಯಕನಾಗುವವನು ಯಾರು. ನಾನು ಒಬ್ಬಂಟಿಯಾಗಿದ್ದೇನೆ." ನಾನು ಪದೇ ಪದೇ ದುಆ ಮಾಡಲು ಕೈ ಎತ್ತಿದಾಗ ಆಕಾಶದ ಅಂತರಿಕ್ಷ ನನ್ನ ಪ್ರಾರ್ಥನೆಗಳಿಂದ ತುಂಬಿತು. ಅಲ್ಲಾಹನು ನನ್ನ ಪ್ರಾರ್ಥನೆಗಳಿಗೆ ಅಂಗೀಕಾರ ನೀಡಿದನು. ಅವನ ಕಾರುಣ್ಯ ಉಕ್ಕಿಬಂತು. ಅಲ್ಲಾಹನು ನನಗೆ ಒಬ್ಬ ನಿಷ್ಠಾವಂತನಾದ ಸಿದ್ದೀಖ್‌ನನ್ನು ನೀಡಿದನು – ಅವರ ಹೆಸರು ಅವರ ಪ್ರಕಾಶಮಾನವಾದ ಗುಣಗಳ ಹಾಗೆಯೇ ನೂರುದ್ದೀನ್ ಎಂದಾಗಿದೆ □ ಅವರು ನನ್ನ ಬಳಿಗೆ ಬಂದು ನನ್ನನ್ನು ಕಂಡಾಗ ನಾನು ಅವರನ್ನು ನನ್ನ ಪ್ರಭುವಿನ ದೃಷ್ಟಾಂತಗಳಲ್ಲಿ ಒಂದು ದೃಷ್ಟಾಂತ ಎಂದು ಮನವರಿಕೆ ಮಾಡಿದೆನು. ನಾನು ಯಾವಾಗಲೂ ಮಾಡುತ್ತಿದ್ದ ದುಆಗಳ ಪರಿಣಾಮ ಅವರಾಗಿದ್ದಾರೆ ಎಂದು ನನಗೆ ದೃಢವಾಯಿತು. ಅವರು ಅಲ್ಲಾಹನ ಆಯ್ಕೆಗೊಂಡ ದಾಸರಲ್ಲಿ ಒಬ್ಬರಾಗಿದ್ದರೆಂದು ನನ್ನ ವಿವೇಕ ನನಗೆ ತಿಳಿಸಿತು. ಅವರು ನನ್ನೊಂದಿಗೆ ಹೊಂದಿದ ಪ್ರೀತಿಯ ಕಾರಣದಿಂದ ನಿಂದನೆಗಳನ್ನೂ ಬೈಗಳನ್ನೂ ಸಹಿಸುತ್ತಾರೆ. ಅವರು ತನ್ನ ಪ್ರಿಯ ಊರನ್ನೂ ಸ್ನೇಹಿತರನ್ನೂ ತ್ಯಜಿಸುತ್ತಾರೆ. ನನ್ನ ಮಾತುಗಳನ್ನು ಆಲಿಸಲು ಅವರಿಗೆ ತನ್ನ ಊರಿನಿಂದ ಅಗಲಿಕೆ ಸುಲಭವಾಗಿದೆ. ನನ್ನ ಸ್ಥಳದ ಪ್ರೀತಿಯ ಕಾರಣದಿಂದ ಅವರು ತನ್ನ ಊರಿನ ನೆನಪನ್ನು ಮರೆತು ಬಿಡುತ್ತಾರೆ. ಅವರು ನನ್ನನ್ನು ಹೇಗೆ ಅನುಸರಿಸುತ್ತಾರೆಂದರೆ ನಾಡಿಯ ಬಡಿತ ಶರೀರದ ಚಲನೆಯನ್ನು ಅನುಸರಿಸುವ ಹಾಗೆ. (ಆಯಿನಯೆ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಇನ್ ಪುಟ 581–582).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್‌ವಸಿಯ್ಯತ್ ಎಂಬ ತನ್ನ ಪುಸ್ತಕದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಖುದ್‌ರತೆ ಸಾನಿಯ (ದ್ವಿತೀಯ ದಿವ್ಯಶಕ್ತಿ)ಯ ಪ್ರಕಟವಾದ ಉದಾಹರಣೆ ನೀಡುತ್ತಾ ಹಝ್ರತ್ ಅಬೂಬಕರ್ ಸಿದ್ದೀಖ್‌ರವರ ಖಿಲಾಫತನ್ನು ಪ್ರಸ್ತಾಪಿಸಿದ್ದಾರೆ. ಅದ್ಭುತಕರವಾದ ವಿಷಯವೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದ ನಂತರ ಯಾರ ಕೈಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರನ್ನು ಜಮಾಯಿಸಿದನೋ ಆ ಮಹಾನುಭಾವರು ಹಝ್ರತ್ ಹಕೀಮ್ ನೂರುದ್ದೀನ್(ರ). ಅನೇಕ ವಿಷಯಗಳಲ್ಲಿ ಅವರು ಹಝ್ರತ್ ಅಬೂಬಕರ್(ರ)ರೊಂದಿಗೆ ಸಾದೃಶ್ಯ ಹೊಂದಿದ್ದರು. ಉದಾಹರಣೆಗೆ ಹಝ್ರತ್ ಅಬೂಬಕರ್(ರ) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಾದವನ್ನು ಯಾವುದೇ ಹಿಂಜರಿಕೆ ಮತ್ತು ಸಂಶಯವಿಲ್ಲದೆ ನಂಬಿದ ಪುರುಷರಲ್ಲಿ ಪ್ರಥಮರಾಗಿದ್ದರು. ಅವರ ಬಗ್ಗೆ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿದರು: ಹೇ ಜನರೇ, ನಾನು ನಿಮ್ಮೊಂದಿಗೆ ಹೇಳಿದೆ. ನಾನು ನಿಮ್ಮೆಲ್ಲರಿಗೆ ಸಂದೇಶವಾಹಕನಾಗಿ ಆಗಮಿಸಿರುವೆನು. ಆಗ ನೀವು ಹೇಳಿದಿರಿ, ನೀನು ಸುಳ್ಳು ಹೇಳುತ್ತಿರುವೆ. ಆದರೆ ಅಬೂಬಕರ್ ನನ್ನನ್ನು ಅಂಗೀಕರಿಸಿದರು. ನಾನು ಯಾರನ್ನಾದರೂ ಇಸ್ಲಾಮಿನ ಕಡೆಗೆ ಆಹ್ವಾನಿಸಿದರೆ ಅವನು ಅದನ್ನು ನಂಬಲು ಹಿಂಜರಿದನು ಮತ್ತು ಸಂಶಯ ಹೊಂದಿದನು. ಆದರೆ ಅಬೂಬಕರ್ ಹಿಂಜರಿಯದೆ ಮತ್ತು ಯಾವುದೇ ರೀತಿ ತಡಮಾಡದೆ ಇಸ್ಲಾಮನ್ನು

ಸ್ವೀಕರಿಸಿದರು. (ಬುಖಾರಿ ಕಿತಾಬುತ್ತಫ್‌ಸೀರ್).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಹಝ್ರತ್ ಮೌಲವಿ ನೂರುದ್ದೀನ್ ರಝಿಯಲ್ಲಾಹು ಅನ್‌ಹುರವರ ಕುರಿತು ಹೇಳಿದರು: ಪ್ರತಿಯೊಂದು ಕಡೆಯಿಂದ ತಕ್‌ಫೀರ್ (ಕಾಫಿರ್ ಎಂದು ಹೇಳುವ) ಧ್ವನಿ ಏಳುತ್ತಾ ಇದ್ದಾಗ ಮತ್ತು ಅನೇಕರು ಬೈಅತ್ ಮಾಡಿದ ನಂತರ ಬೈಅತ್ ಪ್ರತಿಜ್ಞೆ ರದ್ದು ಗೊಳಿಸಿದಾಗ ಅನೇಕರು ಉದಾಸೀನರೂ ಚಂಚಲ ಮನಸ್ಸಿನವರೂ ಆಗಿದ್ದಾಗ ಮೌಲವಿ ನೂರುದ್ದೀನ್ ಹಿಂಜರಿಯದೆ ನನ್ನನ್ನು ಅಂಗೀಕರಿಸಿದರು. ಮೌಲವಿ ಸಾಹಿಬರು ನನಗೆ ಬರೆದ ಪತ್ರ ಖಾದಿಯಾನಿನಲ್ಲಿ ತಲಪಿತು. ನಾನು ಮಸೀಹ್ ಮೌಊದ್ ಆಗಿರುವೆನು ಎಂಬ ನನ್ನ ವಾದದ ಬಗ್ಗೆ ಅವರು ಬರೆದರು:

ಆಮನ್ನಾ ವ ಸದ್ದಖ್‌ನಾ ಫಕ್‌ತುಬ್‌ನಾಮ ಅಶ್ಶಾಹಿದೀನ್. – ನಾವು ನಂಬಿದೆವು ನಾವು ದೃಢೀಕರಿಸಿದೆವು. ಸಾಕ್ಷ್ಯ ಹೇಳುವವರೊಂದಿಗೆ ನಮ್ಮನ್ನೂ ಬರೆದು ಸೇರಿಸಿರಿ. (ಇಝಾಲೆ ಅವ್‌ಹಾಮ್, ರೂಹಾನಿ ಖಝಾಇನ್ ಸಂಪುಟ 3 ಪುಟ 521).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತನ್ನ ವಿಧೇಯತೆಯನ್ನು ಸೂಚಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೀಗೆ ಬರೆದರು: ಮೌಲಾನಾ ಮುರ್‌ಶಿದುನಾ, ಇಮಾಮುನಾ. ನಾನು ಪ್ರತಿಯೊಂದು ಸಮಯದಲ್ಲಿ ತಮ್ಮ ಸನ್ನಿಧಿಯಲ್ಲಿ ಹಾಜರಾಗಿ ಯಾವ ಉದ್ದೇಶಕ್ಕಾಗಿ ತಮ್ಮನ್ನು ಮುಜದ್ದಿದ್ ಆಗಿ ನಿಯೋಜಿಸಲಾಗಿದೆ ಎಂಬುದನ್ನು ಈ ಕಾಲದ ಇಮಾಮರಾದ ತಮ್ಮಿಂದಲೇ ಆಲಿಸಬೇಕೆಂದು ನಾನು ಪ್ರಾರ್ಥಿಸುತ್ತಿದ್ದೇನೆ. ತಾವು ಅನುಮತಿ ನೀಡುವುದಾದರೆ ನಾನು ನನ್ನ ನೌಕರಿಗೆ ರಾಜಿನಾಮೆ ನೀಡಿ ಹಗಲು ರಾತ್ರಿ ತಮ್ಮ ಬಳಿ ಬಿದ್ದಿರುವೆನು. ತಾವು ಆಜ್ಞಾಪಿಸುವುದಾದರೆ ನಾನು ಈ ಸಂಬಂಧವನ್ನು ತ್ಯಜಿಸಿ ಲೋಕದಲ್ಲಿ ತಿರುಗಾಡಿ ಜನರನ್ನು ಸತ್ಯಧರ್ಮದ ಕಡೆಗೆ ಆಹ್ವಾನಿಸುವೆನು ಮತ್ತು ಅದೇ ಮಾರ್ಗದಲ್ಲಿ ಜೀವ ನೀಡುವೆನು. ನಾನು ತಮ್ಮ ಮಾರ್ಗದಲ್ಲಿ ಬಲಿಯಾಗಿದ್ದೇನೆ. ನನ್ನದೆಲ್ಲವೂ ನನ್ನದಲ್ಲ ತಮ್ಮದು ಆಗಿದೆ. ನನ್ನ ಪೀರ್ ಮತ್ತು ಮುರ್‌ಶಿದ್‌ರವರೇ, ನಾನು ಸತ್ಯಸಂಧತೆಯಿಂದ ನಿವೇದಿಸುತ್ತೇನೆ, ನನ್ನ ಸರ್ವ ಸಂಪತ್ತು ಧರ್ಮದ ಪ್ರಚಾರಕ್ಕೋಸ್ಕರ ಖರ್ಚು ಆಗುವುದಾದರೆ ನಾನು ನನ್ನ ಉದ್ದೇಶ ಲಕ್ಷ್ಯ ತಲಪುವೆನು.

ನನ್ನ ಸಂಬಂಧ ತಮ್ಮೊಂದಿಗೆ ಫಾರೂಖೀ ಸಂಬಂಧವಾಗಿದೆ. ನಾನು ಎಲ್ಲವನ್ನೂ ಈ ಮಾರ್ಗದಲ್ಲಿ ಅರ್ಪಿಸಲು ಸಿದ್ಧನಾಗಿದ್ದೇನೆ. ತಾವು ಪ್ರಾರ್ಥಿಸಿರಿ ನನ್ನ ಮರಣ ಸಿದ್ದೀಖ್‌ಗಳ ಮರಣದ ಹಾಗೆ ಆಗಲಿ. (ಫತ್‌ಹೆ ಇಸ್ಲಾಮ್, ರೂಹಾನಿ ಖಝಾಇನ್ ಸಂಪುಟ 3 ಪುಟ 36).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಹಝ್ರತ್ ಮೌಲವಿ ನೂರುದ್ದೀನ್ ರಝಿಯಲ್ಲಾಹು ಅನ್‌ಹುರವರ ಔದಾರ್ಯದ ಬಗ್ಗೆ ತನ್ನ ಗ್ರಂಥ ಇಝಾಲೆ ಅವ್‌ಹಾಮ್‌ನಲ್ಲಿ ಹೀಗೆ ಹೇಳಿದ್ದಾರೆ: ನನಗೆ ಅವರ ಸಂಪತ್ತಿನಿಂದ ಎಷ್ಟು ಸಹಾಯ ಲಭಿಸಿದೆ ಎಂದರೆ ಅದಕ್ಕೆ ಸಮಾನವಾದ ಬೇರೆ ಒಂದು ಸಹಾಯದ ಉದಾಹರಣೆ ನೀಡಲಾರೆ.

ಆಯಿನಯೆ ಕಮಾಲಾತೆ ಇಸ್ಲಾಮ್ ಎಂಬ ಗ್ರಂಥದಲ್ಲಿ ಹೇಳುತ್ತಾರೆ: ನನಗೆ ಯಾವುದೇ ವ್ಯಕ್ತಿಯ ಸಂಪತ್ತು, ಅವರ ಸಂಪತ್ತು ನೀಡಿದಷ್ಟು ಲಾಭ ನನಗೆ ನೀಡಲಿಲ್ಲ. ಅವರು ಅಲ್ಲಾಹನ ತೃಪ್ತಿಗಳಿಸಲು ಸಂಪತ್ತು ನೀಡಿದರು ಮತ್ತು ಅನೇಕ ವರ್ಷಗಳಿಂದ ನೀಡುತ್ತಿದ್ದಾರೆ.

ಪ್ರಿಯ ಶ್ರೋತೃಗಳೆ, ಹಝ್ರತ್ ಮೌಲವಿ ನೂರುದ್ದೀನ್ ರಝಿಯಲ್ಲಾಹು ಅನ್‌ಹುರವರ ಎಲ್ಲ ಹಿರಿಮೆ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅವರು ಹೊಂದಿದ್ದ ಆಧ್ಯಾತ್ಮಿಕ ಸಂಬಂಧದ ಕಾರಣದಿಂದ ಲಭಿಸಿದುದಾಗಿತ್ತು. ಅವರು ಸ್ವತಃ ಹೀಗೆ ಹೇಳುತ್ತಾರೆ: ನನಗೆ ಅನ್ಯ ಪಟ್ಟಣಗಳಲ್ಲಿ ಸಿಗಬಹುದಾಗಿದ್ದ ಎಲ್ಲ ಸಂಪಾದನೆಗಳನ್ನು ಬಿಟ್ಟು ಖಾದಿಯಾನ್‌ನಲ್ಲಿ ವಾಸಿಸಲು ಆದ್ಯತೆ ನೀಡಿದುದೇಕೆ? ಇದಕ್ಕೆ ನನ್ನ ಉತ್ತರ ಹೀಗೆ: ನನಗೆ ಇಲ್ಲಿ ಲಭಿಸಿದ ಸಂಪತ್ತು ನಾಶವಾಗದುದಾಗಿದೆ. ಅದನ್ನು ಕಳ್ಳನೂ ದರೋಡೆಗಾರನೂ ತೆಗೆದುಕೊಂಡು ಹೋಗಲಾರನು. ಹದಿಮೂರು ನೂರು ವರ್ಷಗಳ ಕಾಲ ಆಶಿಸಿದವರಿಗೆ ಸಿಗದೆ ಇದ್ದುದು ನನಗೆ ಸಿಕ್ಕಿದೆ. ಈ ಅಮೂಲ್ಯ ಸಂಪತ್ತನ್ನು ಬಿಟ್ಟು ಕೆಲವು ದಿನಗಳ ಲೋಕಕ್ಕೋಸ್ಕರ ಕಷ್ಟಪಟ್ಟು ತಿರುಗಾಡುತ್ತಾ ಇರಬೇಕೆ? ನಾನು ಸತ್ಯವಾಗಿ ಹೇಳುತ್ತೇನೆ ನನಗೆ ಪ್ರತಿದಿನ ಒಂದು ಲಕ್ಷ ರೂಪಾಯಿಯಲ್ಲ ಒಂದು ಕೋಟಿ ರೂಪಾಯಿ ಕೊಟ್ಟು ನನ್ನನ್ನು ಖಾದಿಯಾನ್‌ನಿಂದ ಹೊರಗೆ ಇರಿಸಲು ಯಾರಾದರೂ ಇಚ್ಛಿಸುವುದಾದರೆ ನಾನು ಖಾದಿಯಾನ್ ಬಿಟ್ಟು ಹೋಗಲಾರೆ. ಆದರೆ ನನ್ನ ಇಮಾಮ್‌ರವರು ಒಂದು ಕವಡೆಯನ್ನು ನೀಡದಿದ್ದರೂ ನಾನು ಅವರ ಆಜ್ಞೆ ಪಾಲಿಸುವೆನು. ನನ್ನ ಮಿತ್ರತ್ವ, ನನ್ನ ಸಂಪತ್ತು, ನನ್ನ ಆವಶ್ಯಕತೆಗಳು ಈ ಇಮಾಮರ ಅನುಸರಣೆ ತನಕ ಇವೆ. ಬೇರೆ ಎಲ್ಲ ಆವಶ್ಯಕತೆಗಳನ್ನು ಏಕಮಾತ್ರನಾದ ಅಲ್ಲಾಹನಿಗೋಸ್ಕರ ಬಲಿಯರ್ಪಿಸುತ್ತೇನೆ. (ಸೂರಃ ಜುಮುಅದ ತಫ್‌ಸೀರ್ ಪುಟ 63).

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಜಲ್ಸ ಸಾಲಾನಕ್ಕೆ ಆಗಮಿಸಿದವರೊಂದಿಗೆ ಹೇಳಿದರು: ನಮ್ಮ ಬಗ್ಗೆ ಸ್ವಲ್ಪ ಸಹ ಚಿಂತಿಸಬೇಡಿರಿ. ನಮ್ಮ ಅಸ್ತಿತ್ವ ಏನೂ ಇಲ್ಲ. ನಾವು ದೊಡ್ಡವರಾಗಿದ್ದರೆ ಮನೆಯಲ್ಲಿರುತ್ತಿದ್ದೆವು. ಪರಿಶುದ್ಧರಾಗಿದ್ದರೆ ಇಮಾಮರ ಆವಶ್ಯಕತೆ ಏನಿದೆ. ಗ್ರಂಥಗಳಿಂದ ಈ ಉದ್ದೇಶ ಗಳಿಸಬಹುದಾಗಿದ್ದರೆ ನಮ್ಮ ಬಳಿ ಬಹಳ ಗ್ರಂಥಗಳು ಇದ್ದುವು ಇಲ್ಲಿಗೆ ಬರುವ ಆವಶ್ಯಕತೆ ಇರಲಿಲ್ಲ. ಆದರೆ ಅವುಗಳಿಂದ ಏನೂ ಲಭಿಸುವುದಿಲ್ಲ. ಇಲ್ಲಿರುವ ನಾನು ನಮ್ಮ ರೋಗಗಳಿಗೆ ಪಾತ್ರರಾಗಿದ್ದೇವೆ. ನಾವು ಇಲ್ಲಿ ಚಿಕಿತ್ಸೆಗೋಸ್ಕರ ಕುಳಿತಿದ್ದೇವೆ. ಆದುದರಿಂದ ನಮ್ಮ ಯಾವುದಾದರೂ ವರ್ತನೆಯಿಂದ ಬೇಸರಗೊಳ್ಳುವುದು ಬುದ್ಧಿಶಾಲಿತ್ವ ಅಲ್ಲ. ಮಸೀಹ್ ಮತ್ತು ಮಹ್‌ದಿಯಾಗಿ ಆಗಮಿಸಿದವರು ಸತ್ಯವಂತರಾದ ಒಬ್ಬರಾಗಿದ್ದಾರೆ. ಆದುದರಿಂದ ಅಲ್ಲಾಹನಿಂದ ಸಹಾಯವನ್ನು ಬೇಡಿರಿ. ಅಲ್ಲಾಹನನ್ನು ಝಿಕ್ರ್ ಮಾಡಿರಿ. ಅದು ನಿಮ್ಮನ್ನು ದುಷ್ಕರ್ಮಗಳಿಂದ ರಕ್ಷಿಸುವುದು. ಇಮಾಮರ ಉದಾಹರಣೆ ಪ್ರಕಾರ ಚಲಿಸಿರಿ. ಅವರೊಬ್ಬರೇ ಏಕಮಾತ್ರ ಇಮಾಮ್ ಆಗಿದ್ದಾರೆ. (ಸೂರಃ ಜುಮುಅ ತಫ್‌ಸೀರ್ ಪುಟ 66).

ಮಾನ್ಯ ಶ್ರೋತೃಗಳೇ,

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದುದರಿಂದ ದೊರೆತ ಲಾಭಗಳಿಗೆ ಸಂಬಂಧಿಸಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ವಿವರಿಸಿದ ಬಗ್ಗೆ ಒಂದು ವರದಿ ಹೀಗಿವೆ:

ಹಝ್ರತ್ ಗುಲಾಮ್ ರಸೂಲ್ ರಾಜೇಕಿ ಸಾಹಿಬ್(ರ) ಬರೆಯುತ್ತಾರೆ: ತಹ್‌ಸೀಲ್‌ದಾರ್ ಚೌಧರಿ ನವಾಬ್ ಖಾನ್ ಸಾಹಿಬ್ ನಿಷ್ಠಾವಂತ ಅಹ್ಮದಿ ಆಗಿದ್ದರು. ಅವರು ತನ್ನ ಔದ್ಯೋಗಿಕ ಪ್ರಯಾಣದ ಕಾಲದಲ್ಲಿ ರಾಜೇಕಿಗೆ ಆಗಮಿಸುವಾಗ ನನ್ನ ಮನೆಯಲ್ಲಿ ವಾಸಿಸುತ್ತಿದ್ದರು. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಚರ್ಚಿಸುತ್ತಿದ್ದೆವು. ಒಂದು ದಿವಸ ನವಾಬ್ ಖಾನ್ ಸಾಹಿಬ್ ನನ್ನೊಂದಿಗೆ ಹೇಳಿದರು: ನಾನು ಹಝ್ರತ್ ಹಕೀಮ್ ನೂರುದ್ದೀನ್ ಸಾಹಿಬರೊಂದಿಗೆ ವಿಚಾರಿಸಿದೆ. ನೀವು ಹಿರಿಯ ವಿದ್ವಾಂಸರಾಗಿದ್ದೀರಿ. ನೀವು ಹಝ್ರತ್ ಮಿರ್ಝಾ ಸಾಹಿಬರನ್ನು ಬೈಅತ್ ಮಾಡುವ ಮೂಲಕ ಗಳಿಸಿದ ಲಾಭವಾದರೂ ಏನು? ಅವರು ಹೇಳಿದರು: ಮಿರ್ಝಾ ಸಾಹಿಬರನ್ನು ಬೈಅತ್ ಮಾಡಿದ ಕಾರಣದಿಂದ ನನಗೆ ಅನೇಕ ಲಾಭಗಳು ಲಭಿಸಿವೆ. ಅವುಗಳಲ್ಲಿ ಒಂದು ಇದಾಗಿದೆ: ನಾನು ಮೊದಲು ಸ್ವಪ್ನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದರ್ಶನದ ಲಾಭ ಗಳಿಸುತ್ತಿದ್ದೆ. ಈಗ ಎಚ್ಚರದಲ್ಲಿರುವಾಗ ಸಹ ನನಗೆ ಅದು ಲಭಿಸುತ್ತಿದೆ.

ಅನಂತರ ಹೀಗೆ ಹೇಳಿದರು: ಅವರ ಸಹವಾಸದಿಂದ ನನಗೆ ಲಭಿಸಿದ ಇನ್ನೊಂದು ಲಾಭವೇನೆಂದರೆ ಲೋಕದ ಬಗ್ಗೆ ಪ್ರೀತಿ ತಣ್ಣಗಾಯಿತು. ಇವೆಲ್ಲ ಮಿರ್ಝಾ ಸಾಹಿಬರ ಪರಿಶುದ್ಧ ಶಕ್ತಿ ಮತ್ತು ಅವರ ಸಹವಾಸದ ಅನುಗ್ರಹದಿಂದ ಲಭಿಸಿದುದಾಗಿವೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ವಿನಯದ ಬಗ್ಗೆ ಒಬ್ಬ ಸಹಾಬಿ ವಿವರಿಸಿದುದನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಭೇಟಿಯಾಗಲು ಹೋದಾಗ ಅವರು ಮಸ್‌ಜಿದ್ ಮುಬಾರಕ್‌ನಲ್ಲಿ ಕುಳಿತಿದ್ದರು. ಬಾಗಿಲಿನ ಬಳಿ ಪಾದರಕ್ಷೆಗಳು ಇದ್ದುವು. ಒಬ್ಬ ಸಾಮಾನ್ಯ ವ್ಯಕ್ತಿ ಬಂದು ಪಾದರಕ್ಷೆಗಳ ಬಳಿ ಕುಳಿತುಕೊಂಡರು. ನಾನು ಆ ವ್ಯಕ್ತಿಯ ಬಗ್ಗೆ ಪಾದರಕ್ಷೆಗಳ ಚೋರನೆಂದು ಭಾವಿಸಿ ನನ್ನ ಪಾದರಕ್ಷೆಗಳ ಬಗ್ಗೆ ನಿಗಾವಹಿಸಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ಖಲೀಫರನ್ನು ಚುನಾಯಿಸಲಾಗಿದೆ ಎಂದು ತಿಳಿದಾಗ ನಾನು ಖಾದಿಯಾನ್‌ಗೆ ಹೋದೆನು. ಅಲ್ಲಿ ಬೈಅತ್ ಮಾಡಲು ಕೈ ಮುಂದೆ ಮಾಡಿದಾಗ ನಾನು ನೋಡಿದೆ. ನಾನು ನನ್ನ ಅವಿವೇಕತನದಿಂದ ಪಾದರಕ್ಷೆಗಳ ಚೋರನೆಂದು ಭಾವಿಸಿದ ವ್ಯಕ್ತಿ ಖಲೀಫರಾಗಿದ್ದಾರೆಂದು ತಿಳಿದು ನಾನು ಬಹಳ ಲಜ್ಜಿತನಾದೆನು.

ಹಝ್ರತ್ ನೂರುದ್ದೀನ್ ಸಾಹಿಬರು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಜನರು ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಂದೆ ಕುಳಿತಿದ್ದಾಗ ಜನರ ಹಿಂಬಾಗದಲ್ಲಿ ಕುಳಿತುಕೊಳ್ಳುತ್ತಿದ್ದರು. ಅಲ್ಲಿ ಪಾದರಕ್ಷೆಗಳು ಇದ್ದುವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕರೆದರೆ ಸ್ವಲ್ಪ ಮುಂದೆ ಹೋಗುತ್ತಿದ್ದರು. ಮೌಲವಿ ನೂರುದ್ದೀನ್ ಸಾಹಿಬ್ ಬರಲಿಲ್ಲವೇ ಎಂದು ಕೇಳಿದಾಗ ಇನ್ನಷ್ಟು ಸ್ವಲ್ಪ ಮುಂದೆ ಹೋಗುತ್ತಿದ್ದರು. ಪದೇ ಪದೇ ಹೇಳಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮೀಪಕ್ಕೆ ಹೋಗುತ್ತಿದ್ದರು.

ಆ ಸಹಾಬಿ ಹೇಳುತ್ತಾರೆ: ನಾನು ಅವರ ಮಕ್ಕಳೊಂದಿಗೆ ಹೇಳುತ್ತಿದ್ದೆ: ಹಝ್ರತ್ ಖಲೀಫತುಲ್ ಮಸೀಹರು ಅಂತಹ ವಿನಯಾನ್ವಿತ ವರ್ತನೆಯಿಂದ ತಮ್ಮ ಈಗಿನ ಮಹತ್ವಪೂರ್ಣ ಸ್ಥಾನಗಳಿಸಿದರು.

*(ಪುಟ ಸಂಖೆ 23 ರಲ್ಲಿ ಮುಂದುವರಿಸಲಾಗಿದೆ)*

# ಜಗತ್ತಿಗೆ ಸ್ವಾತಂತ್ರ್ಯ ನೀಡಿದ ಪ್ರವಾದಿ

(ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಅಲ್-ಮುಸ್ಲೆಹ್ ಅಲ್-ಮೌಊದ್(ರ)

ಅಲ್-ಫಝ್ಲ್ ಅವರ ವಿಶೇಷ ಸಂಚಿಕೆಗಾಗಿ ಲೇಖನವನ್ನು ಬರೆಯಲು ನನ್ನನ್ನು ವಿನಂತಿಸಿಕೊಳ್ಳಲಾಗಿದೆ ಮತ್ತು ಹಝ್ರತ್ ಪೈಗಂಬರ್(ಸ) ಅವರ ಉನ್ನತ ಸ್ಥಾನಮಾನ ಮತ್ತು ವೈಭವವನ್ನು ವ್ಯಕ್ತಪಡಿಸಲು ಈ ಸಂಚಿಕೆಯಲ್ಲಿ ಲೇಖನವನ್ನು ಬರೆಯುವುದು ಪ್ರತಿಫಲದಾಯಕ ಕೆಲಸ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ, ಈ ದಿನಗಳಲ್ಲಿ ನಾನು ತುಂಬಾ ಬಿಡುವಿಲ್ಲದ ಕಾರಣದಿಂದ ಮತ್ತು ಅನಾರೋಗ್ಯದಿಂದ ಕೂಡಿದ್ದೇನೆ ಎಂಬ ವಾಸ್ತವದ ಹೊರತಾಗಿಯೂ, ಒಂದು ಚಿಕ್ಕ ಲೇಖನವನ್ನು ಬರೆಯುವುದು ಅವಶ್ಯಕ ಎಂದು ನಾನು ಭಾವಿಸುತ್ತೇನೆ.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಜೀವನದ ಪ್ರತಿಯೊಂದು ಅಂಶವು ತುಂಬಾ ಅದ್ಭುತವಾಗಿದೆ, ಯಾವ ಅಂಶವನ್ನು ಅಳವಡಿಸಿಕೊಳ್ಳಬೇಕು ಮತ್ತು ಯಾವುದನ್ನು ಬಿಡಬೇಕು ಎಂದು ಒಬ್ಬರು ಆಶ್ಚರ್ಯ ಪಡುತ್ತಾರೆ ಮತ್ತು ಆಯ್ಕೆಯು ಕಣ್ಣುಗಳು ಬೆರಗುಗೊಳಿಸುತ್ತದೆ, ಆದರೆ ನಾನು ಅಗತ್ಯವನ್ನು ಪರಿಗಣಿಸುತ್ತೇನೆ. ನನ್ನ ಲೇಖನಕ್ಕಾಗಿ, ನಾನು ನಿಮ್ಮ(ಸ) ಅವರ ಜೀವನದ ಅತ್ಯುತ್ತಮ ಭಾಗವನ್ನು ತೆಗೆದುಕೊಳ್ಳುತ್ತೇನೆ, ನೀವು(ಸ) ಯಾವಾಗಲೂ ಪ್ರಪಂಚದ ಕೊರಳಲ್ಲಿರುವ ಗುಲಾಮಗಿರಿಯಿಂದ ಜಗತ್ತನ್ನು ಹೇಗೆ ಉಳಿಸಿದ್ದೀರಿ ಮತ್ತು ಅದು ಮಹಿಳೆಯರ ಗುಲಾಮಗಿರಿಯಾಗಿದೆ. ಹಝ್ರತ್ ಪೈಗಂಬರ್(ಸ) ಅವರ ಆಗಮನದ ಮೊದಲು, ಮಹಿಳೆಯರು ಎಲ್ಲಾ ದೇಶಗಳಲ್ಲಿ ಗುಲಾಮರಂತೆ ಮತ್ತು ಒಡೆತನದಲ್ಲಿರುವಂತೆ ಇದ್ದರು ಮತ್ತು ಅವರ ಗುಲಾಮಗಿರಿಯು ಪುರುಷರ ಮೇಲೆ ಪರಿಣಾಮ ಬೀರದೆ ಉಳಿಯಲು ಸಾಧ್ಯವಿಲ್ಲ ಏಕೆಂದರೆ ದಾಸಿಯರ ಮಕ್ಕಳು ಸ್ವಾತಂತ್ರ್ಯದ ಮನೋಭಾವವನ್ನು ಸಂಪೂರ್ಣವಾಗಿ ಅರಿತುಕೊಳ್ಳಲು ಸಾಧ್ಯವಿಲ್ಲ.

ಮಹಿಳೆಯು ಯಾವಾಗಲೂ ತನ್ನ ಸೌಂದರ್ಯ ಅಥವಾ ಉತ್ತಮ ಚಾರಿತ್ರ್ಯದಿಂದ ಕೆಲವು ಪುರುಷರನ್ನು ಆಳುತ್ತಾಳೆ ಎಂಬುದರಲ್ಲಿ ಸಂದೇಹವಿಲ್ಲ, ಆದರೆ ಈ ಸ್ವಾತಂತ್ರ್ಯವು ನಿಜವಾದ ಸ್ವಾತಂತ್ರ್ಯವಾಗಿರಲಿಲ್ಲ ಏಕೆಂದರೆ ಅದು ಹಕ್ಕಾಗಿ ಪಡೆಯಲಿಲ್ಲ, ಬದಲಿಗೆ ವಿನಾಯಿತಿಯಾಗಿ ಇತ್ತು ಮತ್ತು ಅಂತಹ ಅಸಾಧಾರಣ ಸ್ವಾತಂತ್ರವು ಸರಿಯಾದ ಭಾವನೆಗಳ ಸೃಷ್ಟಿಗೆ ಕಾರಣವಾಗುವುದಿಲ್ಲ.

ಹಝ್ರತ್ ಪೈಗಂಬರ್(ಸ) ರವರು ಹದಿಮೂರು ನೂರು ವರ್ಷಗಳ ಹಿಂದೆ ಜನಿಸಿದರು, ಅಲ್ಲಿಯವರೆಗೆ, ಯಾವುದೇ ಧರ್ಮ ಅಥವಾ ಸಮುದಾಯದ  ಮಹಿಳೆಯರಿಗೆ ಅಂತಹ ಸ್ವಾತಂತ್ರ್ಯ ಇರಲಿಲ್ಲ, ಅವರನ್ನು ಹಕ್ಕು ಎಂದು ಬಳಸುತ್ತಿದ್ದರು. ನಿಸ್ಸಂದೇಹವಾಗಿ ಯಾವುದೇ ಕಾನೂನು ಇಲ್ಲದ ಕೆಲವು ದೇಶಗಳು ಎಲ್ಲಾ ರೀತಿಯ ನಿರ್ಬಂಧಗಳಿಂದ ಮುಕ್ತವಾಗಿದ್ದವು, ಆದರೆ ಅದನ್ನೂ ಸ್ವಾತಂತ್ರ್ಯ ಎಂದು ಕರೆಯಲಾಗುವುದಿಲ್ಲ ಅದನ್ನು ಉಡಾಳತನ (ಪೋಕರಿತನ) ಎಂದು ಕರೆಯಲಾಗುತ್ತದೆ. ಸ್ವಾತಂತ್ರ್ಯವು ನಾಗರಿಕತೆ ಮತ್ತು ಸಂಸ್ಕೃತಿಯ ನಿಯಮಗಳನ್ನು ಪೂರೈಸುವ ಮೂಲಕ ಸಾಧಿಸಲ್ಪಡುತ್ತದೆ, ಈ ನಿಯಮಗಳನ್ನು ಮುರಿಯುವ ಮೂಲಕ ಉದ್ಭವಿಸುವ ಸ್ಥಿತಿಯನ್ನು ಸ್ವಾತಂತ್ರ್ಯ ಎಂದು ಕರೆಯಲಾಗುವುದಿಲ್ಲ ಏಕೆಂದರೆ ಅದು ಉನ್ನತ ಮನಸ್ಥಿತಿಗೆ ಕಾರಣವಲ್ಲ, ಬದಲಿಗೆ ಕೀಳು ಮನಸ್ಥಿತಿ ಹುಟ್ಟಲು ಕಾರಣವಾಗುತ್ತದೆ.

ಹಝ್ರತ್ ಪೈಗಂಬರ್(ಸ) ರವರ ಕಾಲದಲ್ಲಿ ಮತ್ತು ಅದಕ್ಕೂ ಮೊದಲು, ಮಹಿಳೆಯ ಸ್ಥಿತಿಯು ತನ್ನ ಆಸ್ತಿಯ ಮಾಲೀಕತ್ವ ಹೊಂದಿರಲಿಲ್ಲ. ಆಕೆಯ ಪತಿಯು ಆಕೆಯ ಆಸ್ತಿಯ ಒಡೆಯ ಎಂದು ಪರಿಗಣಿಸಲಾಗುತ್ತಿತ್ತು ಆಕೆಗೆ ಆಕೆಯ ಪಿತಾರ್ಜಿತ ಆಸ್ತಿಯಿಂದಲೂ ಪಾಲು ನೀಡುತ್ತಿರಲಿಲ್ಲ. ಆಕೆಯು ತನ್ನ ಪತಿಯ ಆಸ್ತಿಯ ವಾರಿಸುದಾರರಲ್ಲ ಎಂದು ಪರಿಗಣಿಸಲಿಲ್ಲ. ಕೆಲವು ದೇಶಗಳಲ್ಲಿ ಅವಳು ಜೀವನ ಪೂರ್ತಿ ಅವಳು ಮೇಲ್ವಿಚಾರಕಿಯಾಗಿರುತ್ತಿದ್ದಳು. ಒಬ್ಬ ಪುರುಷನನ್ನು ಅವಳು ಮದುವೆಯಾದಾಗ, ಅವಳನ್ನು ಶಾಶ್ವತವಾಗಿ ಆತನ ಘೋಷಿಸಲಾಯಿತು ಮತ್ತು ಯಾವುದೇ ಪರಿಸ್ಥಿತಿಯಲ್ಲಿ ಅವನಿಂದ ಬೇರ್ಪಡಿಸಲಾಗುತ್ತಿರಲಿಲ್ಲ, ಇಲ್ಲದಿದ್ದರೆ ಅವಳ ಪತಿಗೆ ಅವಳನ್ನು ವಿಚ್ಛೇದನ ನೀಡುವ ಹಕ್ಕು ನೀಡಲಾಗುತ್ತಿತ್ತು. ಆದರೆ ಆಕೆಗೆ ಆಕೆಯ ಪತ್ನಿಯಿಂದ ವಿಚ್ಛೇದನೆ ಪಡೆಯಲು ಹಕ್ಕಿರಲಿಲ್ಲ. ಅವಳು ಎಷ್ಟೇ ನೋವನುಭವಿಸಿದರೂ ಸರಿ. ಪತಿ ಅವಳನ್ನು ತೊರೆದು ಉತ್ತಮ ರೀತಿಯಲ್ಲಿ ವರ್ತಿಸದಿದ್ದರೂ ಅಥವಾ ಎಲ್ಲಾದರೂ ಓಡಿಹೋದರೂ ಅವಳ ಹಕ್ಕುಗಳನ್ನು ರಕ್ಷಿಸಲು ಯಾವುದೇ ಕಾನೂನು ಇರಲಿಲ್ಲ. ಆಕೆಯು ತನ್ನ ಮಕ್ಕಳು ತನ್ನೊಂದಿಗೆ ಉಳಿಯುವುದು ಮತ್ತು ತನ್ನನ್ನು ಮತ್ತು ಮಕ್ಕಳನ್ನು ಎಷ್ಟೇ ತೊಂದರೆಗಳಾದರೂ ಸರಿ ಅವೆಲ್ಲವನ್ನು ಅನುಭವಿಸಿ ಅವರನ್ನು ಪೋಷಿಸುವುದು ಅವಳ ಕರ್ತವ್ಯವೆಂದು ಪರಿಗಣಿಸಲಾಗುತ್ತಿತ್ತು. ಸಿಟ್ಟಿಗೆದ್ದು ಥಳಿಸುವುದು ಗಂಡನ ಅಧಿಕಾರ ಎಂದು ಪರಿಗಣಿಸಲಾಗುತ್ತಿತ್ತು. ಮತ್ತು ಅವನ ವಿರುದ್ಧ ದನಿ ಎತ್ತಲು ಅವಳಿಗೆ ಅಧಿಕಾರವಿರಲಿಲ್ಲ. ಪತಿ ಸತ್ತರೆ, ಕೆಲವು ದೇಶಗಳಲ್ಲಿ, ಅವಳನ್ನು ಗಂಡನ ಸಂಬಂಧಿಕರ ಆಸ್ತಿ ಎಂದು ಪರಿಗಣಿಸಲಾಗುತ್ತಿತ್ತು. ಅವರು ಆಕೆಗೆ ಹೇಗೆ ಬೇಕಾದರು ಬಳಸಬಹುದಾಗಿತ್ತು ಅವಳನ್ನು ಯಾರಿಂದಾದರೂ ಉಪಕಾರದ ರೀತಿಯಲ್ಲಿ ಅಥವಾ ಅವರಿಂದ ಹಣ ಪಡೆಯುವ ಮೂಲಕವೊ ಮದುವೆ ಮಾಡಿಸಬಹುದಾಗಿತ್ತು. ಕೆಲವು ಕಡೆ ಅವಳನ್ನು ಗಂಡನ ಆಸ್ತಿ ಎಂದು ಪರಿಗಣಿಸಲಾಗುತ್ತಿತ್ತು. ಕೆಲವು ಗಂಡಂದಿರು ತಮ್ಮ ಹೆಂಡತಿಯರನ್ನು ಮಾರುತ್ತಿರುತ್ತಿದ್ದರು. ಅಥವಾ ಜೂಜಾಟದಲ್ಲಿ ಮತ್ತು ಪಂತಗಳಲ್ಲಿ ಸೋತುಹೋಗುತ್ತಿದ್ದರು. ಮತ್ತು ಸಂಪೂರ್ಣವಾಗಿ ತಮ್ಮ ಸ್ವಂತ ವಿವೇಚನೆಯಿಂದ ಪರಿಗಣಿಸಲ್ಪಡುತ್ತಿದ್ದರು. ಮದುವೆಯ ಸಂದರ್ಭದಲ್ಲಿ ಅಥವಾ ಅವನಿಂದ ಪ್ರತ್ಯೇಕತೆಯ ಸಂದರ್ಭದಲ್ಲಿ ಪತಿಗೆ ಮಕ್ಕಳ ಮೇಲೆ ಯಾವುದೇ ಅಧಿಕಾರವನ್ನು ಮಹಿಳೆ ಪರಿಗಣಿಸಲಿಲ್ಲ. ಮಹಿಳೆಗೆ ಮನೆಯ ವಿಷಯದಲ್ಲಿ ಯಾವುದೇ ಅಧಿಕಾರವಿರಲಿಲ್ಲ ಮತ್ತು ಧರ್ಮದಲ್ಲಿ ಯಾವುದೇ ಸ್ಥಾನಮಾನವಿಲ್ಲ ಎಂದು ಪರಿಗಣಿಸಲಾಗಿತ್ತು. ಶಾಶ್ವತ ಅನುಗ್ರಹಗಳಲ್ಲಿ ಅವಳಿಗೆ ಯಾವುದೇ ಪಾಲು ಇರುತ್ತಿರಲಿಲ್ಲ. ಇದರ ಪರಿಣಾಮ ಮಹಿಳೆಯ ಆಸ್ತಿಯನ್ನು ಪತಿಯೇ ಕದ್ದು ಯಾವುದೇ ಪರಿಹಾರ ನೀಡದೆ ಬಿಟ್ಟು ಹೋಗುತ್ತಿದ್ದನು. ಆ ಬಡ ಮಹಿಳೆ ತನ್ನ ಪತಿಯ ಅನುಮತಿ ಇಲ್ಲದೆ ತನ್ನ ಸಂಪತ್ತಿನಿಂದ ತನ್ನ ಸಂಬಂಧಿಕರಿಗೆ ದಾನ ಅಥವಾ ಸೇವೆಯನ್ನು ನೀಡಲು ಅನುಮತಿ ಇರಲಿಲ್ಲ ಮತ್ತು ಆಕೆಯ ಆಸ್ತಿಯಲ್ಲಿ ತನ್ನ ಹಲ್ಲುಗಳನ್ನು ಇಟ್ಟಿರುವ ಆ ಪತಿ ಈ ವಿಷಯದಲ್ಲಿ ಎಂದಿಗೂ ಒಪ್ಪುತ್ತಿರಲಿಲ್ಲ. ತುಂಬಾ ಗಾಢವಾದ ಪ್ರೀತಿಯ ಸಂಬಂಧವನ್ನು ಹೊಂದಿರುವ ತನ್ನ ಪೋಷಕರ ಸಂಪತ್ತಿನಿಂದ ಆಕೆ ವಂಚಿತರಾಗುತ್ತಿದ್ದಳು. ಆದರೆ ಹೇಗೆ ಗಂಡು ಮಕ್ಕಳು ಅವರ ಪ್ರೀತಿಗೆ ಅರ್ಹರಾಗಿರುತ್ತಿದ್ದರೋ ಹಾಗೆಯೇ ಹುಡುಗಿಯರು ಇರುತ್ತಿದ್ದರು ಯಾವ ಪೋಕರು ಈ ನ್ಯೂನತೆಯನ್ನು ನೋಡುತ್ತಿದ್ದರು ಅವರು ಆಕೆಗೆ ತಮ್ಮ ಜೀವಿತ ಕಾಲದಲ್ಲಿಯೇ ಏನನ್ನಾದರು ನೀಡುತ್ತಿದ್ದರು ಹೀಗೆ ಅವರ ಕುಟುಂಬದಲ್ಲಿ ಪಿತೂರಿತನ ಹುಟ್ಟುತ್ತಿತ್ತು ಏಕೆಂದರೆ ಗಂಡುಮಕ್ಕಳು  ತಮ್ಮ ತಂದೆ-ತಾಯಿಯ ಮರಣದ ನಂತರ ಅವರ ಆಸ್ತಿಯಲ್ಲಿ ಎಲ್ಲರೂ ಸಮಪಾಲುದಾರರು ಎಂದು ಯೋಚಿಸುತ್ತಿರಲಿಲ್ಲ ಬದಲಿಗೆ ಅವರ ತಂದೆ ತಾಯಿಯವರು ಅವರಿಗೆ ಹೆಚ್ಚಾಗಿ ಪಾಲು ನೀಡುತ್ತಾರೆ ಎಂದು ಯೋಚಿಸುತ್ತಿದ್ದರು. ಅದೇ ರೀತಿಯಲ್ಲಿ, ಸಂಪೂರ್ಣ ಐಕ್ಯತೆಯ ಸಂಬಂಧವುಳ್ಳ ಪತಿಯು ಅವನ ಸಂಪತ್ತಿನಿಂದಲೂ ಆಕೆಯು ವಂಚಿತರಾಗಿರುತ್ತಿದ್ದಳು. ಗಂಡನ ದೂರದ ಸಂಬಂಧಿಕರು ಅವನ ಆಸ್ತಿಯ ವಾರಿಸುದಾರರಾಗುತ್ತಿದ್ದರು ಮತ್ತು ಅವನ ರಹಸ್ಯ ಮತ್ತು ಜೀವನಪರ್ಯಂತ ಸಂಗಾತಿಯಾಗಿದ್ದ ಮಹಿಳೆಗೆ ಉತ್ತರಾಧಿಕಾರಿಯಾಗಿರುತ್ತಾಳೆ, ಅವನ ಕಠಿಣ ಪರಿಶ್ರಮ ಮತ್ತು ಗಂಡನ ಸಂಪಾದನೆಗೆ ದುಡಿಮೆಯಿಂದ ಸಾಕಷ್ಟು ಕೊಡುಗೆ ನೀಡಿದವಳು ಅವನ ಆಸ್ತಿಯಿಂದ ವಂಚಿತಳಾದಳು, ಇಲ್ಲದಿದ್ದರೆ ಅವಳು ಗಂಡನ ಎಲ್ಲಾ ಆಸ್ತಿಯ ಮೇಲ್ವಿಚಾರಕಿ ಎಂದು ಘೋಷಿಸಲ್ಪಡುತ್ತಿದ್ದಳು ಆದರೆ ಅವಳು ಅದರ ಅವಳು ಯಾವುದೇ ಭಾಗವನ್ನು ವಿಲೇವಾರಿ ಮಾಡುವುದರಿಂದ ವಂಚಿತಳಾಗಿದ್ದಳು. ಆದರೆ ಅದರಿಂದ ಬರುವ ಆಮದಿನಿಂದ ಖರ್ಚು ಮಾಡಬಹುದಾಗಿತ್ತು ಆದರೆ ಅದರ ಯಾವುದೇ ಭಾಗವನ್ನು ಬಳಸುವಂತಿರಲಿಲ್ಲ ಹೀಗೆ ಅವಳು ತನ್ನ ಆಸೆಗೆ ಅನುಗುಣವಾಗಿ ಅನೇಕ ದತ್ತಿ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ವಂಚಿತಳಾಗಿರುತ್ತಿದ್ದಳು. ಅವಳ ಪತಿ ಅವಳನ್ನು ಎಷ್ಟೇ ಹಿಂಸಾಚಾರ ಮಾಡಿದರೂ, ಅವಳು ಅವನಿಂದ ಬೇರ್ಪಡಲು ಸಾಧ್ಯವಿರಲಿಲ್ಲ ಅಥವಾ ಯಾವ ಸಮುದಾಯಗಳಲ್ಲಿ ಬೇರ್ಪಡಿಸಲು ಸಾಧ್ಯವಿತ್ತು ಅಂತಹ ಪರಿಸ್ಥಿತಿಗಳಲ್ಲಿ ಅವಳು ಬಹಳಷ್ಟು ಷರತ್ತುಗಳ ಮೇಲೆ ಬೇರ್ಪಡಬಹುದಾಗಿತ್ತು ಹೀಗೆ ಅನೇಕ ಉದಾತ್ತ ಮಹಿಳೆಯರು ಈ ಪ್ರತ್ಯೇಕತೆಗಿಂತ ಸಾವಿಗೆ ಆದ್ಯತೆ ನೀಡುತ್ತಿದ್ದರು. ಉದಾಹರಣೆಗೆ, ಪತಿ ಅಥವಾ ಪತ್ನಿಯ ವ್ಯಭಿಚಾರವನ್ನು ಸಾಬೀತುಪಡಿಸಬೇಕು ಮತ್ತು ನಂತರ ಕ್ರೌರ್ಯವನ್ನು ಸಹ ಸಾಬೀತುಪಡಿಸಬೇಕು ಎಂಬುದು ಪ್ರತ್ಯೇಕತೆಯ ಷರತ್ತು ಆಗಿತ್ತು. ಹೆಚ್ಚು ಕ್ರೂರವಾದ ಸಂಗತಿಯೆಂದರೆ, ಅನೇಕ ಸಂದರ್ಭಗಳಲ್ಲಿ ಒಬ್ಬ ಮಹಿಳೆ ತನ್ನ ಪತಿಯೊಂದಿಗೆ ಬದುಕಲು ಅಸಾಧ್ಯವಾದಾಗ, ಅವಳನ್ನು ಸಂಪೂರ್ಣವಾಗಿ ಬೇರ್ಪಡಿಸುವ ಬದಲು, ಆಕೆಗೆ ಪ್ರತ್ಯೇಕವಾಗಿ ವಾಸಿಸುವ

ಹಕ್ಕನ್ನು ಮಾತ್ರ ನೀಡಲಾಗುತ್ತಿತ್ತು. ಅದು ಸ್ವತಃ ಶಿಕ್ಷೆಯಾಗಿದೆ ಏಕೆಂದರೆ ಈ ರೀತಿಯಾಗಿ ಅವಳು ತನ್ನ ಜೀವನವನ್ನು ವ್ಯರ್ಥವಾಗಿ ಬದುಕಬೇಕು, ಉದ್ದೇಶವು ಬಲವಂತವಾಗಿ ನೆಲೆಗೊಳ್ಳುತ್ತದೆ ಅಥವಾ ಪತಿ ತನಗೆ ಬೇಕಾದಾಗ ಮಹಿಳೆಗೆ ವಿಚ್ಛೇದನ ನೀಡಬಹುದಾಗಿತ್ತು, ಆದರೆ ಯಾವುದೇ ಪರಿಸ್ಥಿತಿಯಲ್ಲಿ ತನ್ನ ಪ್ರತ್ಯೇಕತೆಯನ್ನು ಬೇಡುವ ಹಕ್ಕು ಮಹಿಳೆಗೆ ಇರಲಿಲ್ಲ. ಪತಿ ನೇಣು ಬಿಗಿದುಕೊಂಡು ಹೋದರೆ ಅಥವಾ ದೇಶವನ್ನು ತೊರೆದರೆ ಮತ್ತು ಅವಳ ಬಗ್ಗೆ ಕಾಳಜಿವಹಿಸದಿದ್ದರೆ, ಮಹಿಳೆ ತನ್ನ ಜೀವನದುದ್ದಕ್ಕೂ ಅವನಿಗಾಗಿ ಕಾಯಲು ಒತ್ತಾಯಿಸಲಾಗುತ್ತಿತ್ತು. ಮತ್ತು ತನ್ನ ಜೀವನವನ್ನು ದೇಶ ಮತ್ತು ಸಮುದಾಯಕ್ಕಾಗಿ ಉಪಯುಕ್ತವಾಗಿ ಕಳೆಯುವ ಹಕ್ಕು ಅವಳಿಗೆ ಇರುತ್ತಿರಲಿಲ್ಲ. ವೈವಾಹಿಕ ಜೀವನವು ಅವಳಿಗೆ ನೆಮ್ಮದಿಯ ಬದಲು ಹಿಂಸೆಯಾಗುತ್ತಿತ್ತು. ಗಂಡ-ಹೆಂಡತಿ ಇಬ್ಬರ ಕೆಲಸವನ್ನೂ ಮಾಡುವುದೂ ಗಂಡನಿಗಾಗಿ ಕಾಯುವುದೂ ಅವಳ ಕೆಲಸವಾಗಿರುತ್ತಿತ್ತು. ಗಂಡನ ಕರ್ತವ್ಯ, ಅಂದರೆ ಮನೆಯ ಖರ್ಚಿಗೆ ಸಂಪಾದನೆ ಮಾಡುವುದು ಸಹ ಅವನಿಗೆ ಒಪ್ಪಿಸಲಾಗುವುದು ಮತ್ತು ಮಕ್ಕಳನ್ನು ನೋಡಿಕೊಳ್ಳುವ ಮತ್ತು ಬೆಳೆಸುವ ಜವಾಬ್ದಾರಿಯನ್ನು ಮಹಿಳೆಗೆ ವಹಿಸಲಾಗುತ್ತುತ್ತು. ಒಂದೆಡೆ ಮನದಾಳದ ನೋವು, ಮತ್ತೊಂದೆಡೆ ಸಾಂಸಾರಿಕ ಜವಾಬ್ದಾರಿಗಳು. ಇದೆಲ್ಲವನ್ನೂ ಮಾಡಿದ್ದು ಈ ಬಡಮಃಇಳೆಗಾಗಿ. ಮಹಿಳೆಯರನ್ನು ಹೊಡೆಯಲಾಗುತ್ತಿತ್ತು ಮತ್ತು ಇದು ಗಂಡನ ನ್ಯಾಯಸಮ್ಮತ ಹಕ್ಕು ಎಂದು ಪರಿಗಣಿಸಲ್ಪಟ್ಟಿತು. ಅವರ ಗಂಡನ ಮರಣದ ನಂತರ, ಮಹಿಳೆಯರನ್ನು ತಮ್ಮ ಗಂಡನ ಸಂಬಂಧಿಕರಿಗೆ ಬಲವಂತವಾಗಿ ಮದುವೆಮಾಡಿಸಲಾಗುತ್ತಿತ್ತು ಅಥವಾ ಯಾರಿಗಾದರೂ ಬೆಲೆಗೆ ಮಾರಾಟ ಮಾಡುತ್ತಿದ್ದರು. ಬದಲಿಗೆ, ಗಂಡನೇ ತನ್ನ ಪತ್ನಿಯರನ್ನು ಮಾರಾಟ ಮಾಡುತ್ತಿದ್ದನು. ಪಾಂಡವರಂತಹ ಮಹಾರಾಜರು ಜೂಜಿನಲ್ಲಿ ತಮ್ಮ ಹೆಂಡತಿಯರನ್ನು ಕಳೆದುಕೊಂಡರು ಮತ್ತು ದ್ರೌಪದಿಯಂತಹ ಉದಾತ್ತ ರಾಜಕುಮಾರಿಯು ದೇಶದ ಕಾನೂನನ್ನು ವಿರೋಧಿಸಲು ಸಾಧ್ಯವಾಗಲಿಲ್ಲ. ಮಕ್ಕಳ ಶಿಕ್ಷಣ ಅಥವಾ ಪಾಲನೆಯಲ್ಲಿ ತಾಯಂದಿರ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುತ್ತಿರಲಿಲ್ಲ ಮತ್ತು ಮಕ್ಕಳ ಮೇಲಿನ ಅವರ ಹಕ್ಕುಗಳನ್ನು ಗುರುತಿಸಲಾಗುತ್ತಿರಲಿಲ್ಲ. ತಾಯಿ ಮತ್ತು ತಂದೆಯ ನಡುವೆ ಪ್ರತ್ಯೇಕತೆಯಿದ್ದರೆ, ನಂತರ ಮಕ್ಕಳನ್ನು ತಂದೆಗೆ ಒಪ್ಪಿಸಲಾಗುತ್ತಿತ್ತು. ಒಬ್ಬ ಮಹಿಳೆ ತನ್ನ ಗಂಡನ ಜೀವನದಲ್ಲಿ ಅಥವಾ ನಂತರದ ದಿನಗಳಲ್ಲಿ ಅವನ ಮನೆಯೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ ಎಂದು ಪರಿಗಣಿಸಲಾಗುತ್ತಿತ್ತು. ಪತಿ ಬಯಸಿದಾಗಲೆಲ್ಲ ಆಕೆಯನ್ನು ಮನೆಯಿಂದ ಹೊರ ಹಾಕುತ್ತಿದ್ದ ಆಕೆ ನಿರಾಶ್ರಿತಳಾಗಿ ಅಲ್ಲಿ ಇಲ್ಲಿ ಓಡಾಡುತ್ತಿದ್ದಳು.

ಈ ಎಲ್ಲಾ ದೌರ್ಜನ್ಯಗಳನ್ನು ಹಝ್ರತ್ ಪೈಗಂಬರ್(ಸ) ಅವರು ಅಳಿಸಿಹಾಕಿದರು. ಅವರು(ಸ) ದೇವರು ನನಗೆ ಮಹಿಳಾ ಹಕ್ಕುಗಳ ವಿಶೇಷ ಕಾಳಜಿಯನ್ನು ವಹಿಸಿಕೊಟ್ಟಿದ್ದಾನೆ ಎಂದು ನಿರ್ಧರಿಸಿದರು. ಮಾನವೀಯತೆಯ ವಿಷಯದಲ್ಲಿ ಪುರುಷರು ಮತ್ತು ಮಹಿಳೆಯರು ಸಮಾನರು ಮತ್ತು ಅವರು ಒಟ್ಟಾಗಿ ಕೆಲಸ ಮಾಡುವಾಗ, ಒಬ್ಬ ಪುರುಷನು ಮಹಿಳೆಯ ಮೇಲೆ ಕೆಲವು ಹಕ್ಕುಗಳನ್ನು ಹೊಂದಿರುವಂತೆ, ಮಹಿಳೆಯು ಪುರುಷನ ಮೇಲೆ ಕೆಲವು ಹಕ್ಕುಗಳನ್ನು ಹೊಂದಿದ್ದಾಳೆ ಎಂದು ನಾನು ಸರ್ವಶಕ್ತನಾದ ಅಲ್ಲಾಹನ ಪರವಾಗಿ ಘೋಷಿಸುತ್ತೇನೆ. ಒಬ್ಬ ಪುರುಷನಂತೆಯೇ ಮಾಲೀಕರು ಮತ್ತು ಮಹಿಳೆ ಸ್ವಇಚ್ಛೆಯಿಂದ ಏನನ್ನಾದರೂ ಉಡುಗೊರೆಯಾಗಿ ನೀಡದ ಹೊರತು ಮಹಿಳೆಯ ಆಸ್ತಿಯನ್ನು ಬಳಸಲು ಪತಿಗೆ ಯಾವುದೇ ಹಕ್ಕಿಲ್ಲ. ಆಕೆಯಿಂದ ಬಲವಂತವಾಗಿ ಆಸ್ತಿಯನ್ನು ಪಡೆದುಕೊಳ್ಳುವುದು ಅಥವಾ ಮಹಿಳೆಯ ವಿನಮ್ರತೆಯು ನಿರಾಕರಿಸುವುದನ್ನು ತಡೆಯುತ್ತದೆ ಎಂದು ಅನುಮಾನಿಸುವ ರೀತಿಯಲ್ಲಿ ಅದನ್ನು ತೆಗೆದುಕೊಳ್ಳುವುದು ತಪ್ಪು. ಪತಿ ಏನನ್ನು ಉಡುಗೊರೆಯಾಗಿ ನೀಡುತ್ತಾನೋ ಅದು ಹೆಣ್ಣಿನ ಆಸ್ತಿಯಾಗುತ್ತದೆ ಮತ್ತು ಅದನ್ನು ಪತಿ ಮರಳಿ ಪಡೆಯಲು ಸಾಧ್ಯವಿಲ್ಲ. ತಂದೆ-ತಾಯಂದಿರಿಂದ ಪುತ್ರರು ಪಡೆಯುವ ರೀತಿಯಲ್ಲೇ ಆಕೆ ತನ್ನ ತಾಯಿ ಮತ್ತು ತಂದೆಯ ಸಂಪತ್ತನ್ನು ಪಡೆದುಕೊಳ್ಳುವಳು. ಹೌದು, ಕುಟುಂಬದ ಜವಾಬ್ದಾರಿಗಳು ಪುರುಷನ ಮೇಲಿರುವುದರಿಂದ ಮತ್ತು ಮಹಿಳೆಗೆ ತನ್ನದೇ ಆದ ಹೊರೆ ಮಾತ್ರ ಇರುವುದರಿಂದ, ಅವಳು ಪುರುಷನಿಂದ ಅರ್ಧದಷ್ಟು ಪಾಲು ಪಡೆಯುತ್ತಾಳೆ. ಹಾಗೆಯೇ ತಾಯಿಗೂ ತಂದೆಯ ರೀತಿಯಲ್ಲಿಯೇ ಮಗನ ಸಂಪತ್ತಿನಲ್ಲಿ ಪಾಲು ದೊರೆಯುತ್ತದೆ. ವಿವಿಧ ಸಂದರ್ಭಗಳು ಮತ್ತು ಜವಾಬ್ದಾರಿಗಳನ್ನು ಅವಲಂಬಿಸಿ, ಕೆಲವೊಮ್ಮೆ ಅವಳು ತನ್ನ ತಂದೆಯಂತೆಯೇ ಮತ್ತು ಕೆಲವೊಮ್ಮೆ ಕಡಿಮೆ ಪಾಲು ಪಡೆಯುತ್ತಾಳೆ. ತನ್ನ ಗಂಡನ ಮರಣದ ನಂತರ, ಅವಳು ಮಕ್ಕಳಿಲ್ಲದಿದ್ದರೂ ಸಹ ಅವನ ಆಸ್ತಿಗೆ ವಾರಿಸುದಾರಿಯಾಗುತ್ತಾಳೆ, ಏಕೆಂದರೆ ಅವಳು ಬೇರೆಯವರ ಮೇಲೆ ಅವಲಂಬಿತರಾಗಲು ಸಾಧ್ಯವಿಲ್ಲ. ಅವರ ವಿವಾಹವು ನಿಜವಾಗಿಯೂ ಶುದ್ಧ ಮತ್ತು ಪವಿತ್ರ ಒಡಂಬಡಿಕೆಯಾಗಿದೆ, ಇದು ಪುರುಷ ಮತ್ತು ಮಹಿಳೆ ಪರಸ್ಪರ ತೀವ್ರ ಅಪ್ರಬುದ್ಧತೆಯನ್ನು ಬೆಳೆಸಿದ ನಂತರ ಮುರಿದುಹೋಗುತ್ತದೆ, ಆದರೆ ಮಹಿಳೆ ಮತ್ತು ಪುರುಷನ ಸ್ವಭಾವದಲ್ಲಿ ಅಪಾಯಕಾರಿ ವ್ಯತ್ಯಾಸವಿದ್ದರೆ, ಧಾರ್ಮಿಕ, ದೈಹಿಕ, ಹೊರತಾಗಿಯೂ ಆರ್ಥಿಕ, ಸಾಂಸ್ಕೃತಿಕ, ದೈಹಿಕ ವ್ಯತ್ಯಾಸಗಳು, ಈ ಒಡಂಬಡಿಕೆಯ ಸಲುವಾಗಿ ತಮ್ಮ ಜೀವನವನ್ನು ವ್ಯರ್ಥ ಮಾಡಲು ಮತ್ತು ಅವರ ಜನ್ಮದ ಉದ್ದೇಶವನ್ನು ಕಳೆದುಕೊಳ್ಳಲು ಒತ್ತಾಯಿಸಬೇಕು. ಅಂತಹ ಭಿನ್ನಾಭಿಪ್ರಾಯಗಳು ಉದ್ಭವಿಸಿದಾಗ ಮತ್ತು ಪುರುಷ ಮತ್ತು ಮಹಿಳೆ ಇನ್ನು ಮುಂದೆ ಒಟ್ಟಿಗೆ ಬದುಕಲು ಸಾಧ್ಯವಿಲ್ಲ ಎಂದು ಒಪ್ಪಿಕೊಂಡಾಗ, ಅವರು ಒಪ್ಪಿಗೆಯಿಂದ ಒಪ್ಪಂದವನ್ನು ರದ್ದುಗೊಳಿಸಬೇಕು ಮತ್ತು ಪುರುಷನು ಈ ಅಭಿಪ್ರಾಯವನ್ನು ಹೊಂದಿದ್ದರೆ ಮತ್ತು ಮಹಿಳೆ ಇಲ್ಲದಿದ್ದರೆ, ಅವರು ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗದಿದ್ದರೆ. ರೀತಿಯಲ್ಲಿ, ನಂತರ ಪಂಚಾಯತ್ ಅವರ ನಡುವೆ ನಿರ್ಧರಿಸಬೇಕು, ಇಬ್ಬರು ಸದಸ್ಯರನ್ನು ಒಳಗೊಂಡಿರುತ್ತದೆ, ಒಬ್ಬ ಪುರುಷನ ಕಡೆಯಿಂದ ಮತ್ತು ಒಬ್ಬ ಮಹಿಳೆಯ ಕಡೆಯಿಂದ. ನಂತರ ಮಹಿಳೆ ಮತ್ತು ಪುರುಷ ಇನ್ನೂ ಸ್ವಲ್ಪ ಕಾಲ ಒಟ್ಟಿಗೆ ಇರಬೇಕೆಂದು ಅವರು ನಿರ್ಧರಿಸಿದರೆ, ನಂತರ ಅವರು ಹೇಳಿದ ವಿಧಾನದ ಪ್ರಕಾರ ಪುರುಷ ಮತ್ತು ಮಹಿಳೆ ಒಟ್ಟಿಗೆ ಇರಬೇಕು, ಆದರೆ ಈ ರೀತಿಯಾಗಿಯೂ ಸಹ ಒಪ್ಪಂದವಿಲ್ಲದಿದ್ದಾಗ, ಪುರುಷನು ಮಹಿಳೆಗೆ ಪ್ರತ್ಯೇಕಿಸಬಹುದು, ಆದರೆ ಈ ಸಂದರ್ಭದಲ್ಲಿ, ಅವನು ಅವಳಿಗೆ ನೀಡಿದ ಆಸ್ತಿಯನ್ನು ಹಿಂತಿರುಗಿಸಲು ಸಾಧ್ಯವಿಲ್ಲ, ಆದರೆ ವರದಕ್ಷಿಣೆಯನ್ನು ಸಹ ಸಂಪೂರ್ಣವಾಗಿ ಪಾವತಿಸಬೇಕು. ಇದಕ್ಕೆ ವಿರುದ್ಧವಾಗಿ, ಒಬ್ಬ ಮಹಿಳೆ ಪುರುಷನಿಂದ ಬೇರ್ಪಡಲು ಬಯಸಿದರೆ, ಅವಳು ನ್ಯಾಯಾಧೀಶರನ್ನು ವಿನಂತಿಸಬೇಕು ಮತ್ತು ನ್ಯಾಯಾಧೀಶರು ಅವಳ ಹಿಂದೆ ಯಾವುದೇ ಅನೈತಿಕ ಉದ್ದೇಶವಿಲ್ಲ ಎಂದು ನೋಡಿದರೆ, ಅವನು ಅವಳನ್ನು ಪ್ರತ್ಯೇಕಿಸಲು ಆದೇಶಿಸಬೇಕು ಮತ್ತು ಈ ಸಂದರ್ಭದಲ್ಲಿ, ಅವಳು ತನ್ನ ಬಳಿ ಸುರಕ್ಷಿತವಗಿರುವ ಸಂಪತ್ತು ಅಥವಾ ಮಹರ್(ವಧುದಕ್ಷಣೆ)ಯನ್ನು ಪತಿಗೆ ಹಿಂದಿರುಗಿಸಬೇಕು. ಗಂಡನ ಆಸ್ತಿ, ಮಹಿಳೆಯ ಪತಿ ಅವಳ ನಿರ್ದಿಷ್ಟ ಹಕ್ಕುಗಳನ್ನು ನೀಡದಿದ್ದರೆ ಅಥವಾ ಅವಳ ಮಾತು ಇತ್ಯಾದಿಗಳನ್ನು ಬಿಟ್ಟುಬಿಟ್ಟರೆ ಅಥವಾ ಅವಳನ್ನು ವಿಚ್ಛೇದನ ಮಾಡಿದರೆ, ನಂತರ ಅವಳ ಅವಧಿಯನ್ನು ನಿಗದಿಪಡಿಸಬೇಕು ಮತ್ತು ಅವನು ನಾಲ್ಕು ತಿಂಗಳಿಗಿಂತ ಹೆಚ್ಚು ಕಾಲ ಈ ಕೃತ್ಯದಲ್ಲಿ ತಪ್ಪಿತಸ್ಥನಾಗಿದ್ದರೆ. ಅವನನ್ನು ಸುಧಾರಿಸಲು ಅಥವಾ ವಿಚ್ಛೇದನಕ್ಕೆ ಒತ್ತಾಯಿಸಬೇಕು ಮತ್ತು ಅವನು ಅವಳಿಗೆ ಖರ್ಚು ಇತ್ಯಾದಿಗಳನ್ನು ನೀಡುವುದನ್ನು ನಿಲ್ಲಿಸಿದರೆ ಅಥವಾ ಎಲ್ಲೋ ಹೋದರೆ ಮತ್ತು ಅವಳ ಬಗ್ಗೆ ಕೇಳದಿದ್ದರೆ, ಇಂತಹ ಸಂದರ್ಭದಲ್ಲಿ ಅವಳ ಮದುವೆಯನ್ನು ರದ್ದುಗೊಳಿಸಬೇಕು. (ಮೂರು ವರ್ಷದ ಕಾಲವಧಿ ಎಂದು ಇಸ್ಲಾಮ್ ಧರ್ಮದ ವಿದ್ವಾಂಸರು ಹೇಳಿದ್ದಾರೆ) ಮತ್ತು ಅವಳನ್ನು ಬೇರೆಡೆ ಮದುವೆಯಾಗಲು ಮುಕ್ತಗೊಳಿಸಬೇಕು ಮತ್ತು ಪತಿ ಯಾವಾಗಲೂ ಅವನ ಹೆಂಡತಿ ಮತ್ತು ಮಕ್ಕಳ ವೆಚ್ಚಗಳಿಗೆ ಜವಾಬ್ದಾರನಾಗಿರುತ್ತಾನೆ. ಪತಿಗೆ ತನ್ನ ಪತ್ನಿಯನ್ನು ಸೂಕ್ತವಾಗಿ ಎಚ್ಚರಿಸುವ ಹಕ್ಕಿದೆ, ಆದರೆ ಎಚ್ಚರಿಕೆಯು ಶಿಕ್ಷೆಯ ಬಣ್ಣವನ್ನು ಪಡೆದಾಗ, ಅವನು ಜನರನ್ನು ಅದಕ್ಕೆ ಸಾಕ್ಷಿಗಳಾಗಿ ನೇಮಿಸಬೇಕಾಗುತ್ತದೆ ಮತ್ತು ಅಪರಾಧವನ್ನು ಬಹಿರಂಗಪಡಿಸಬೇಕಾಗುತ್ತದೆ ಮತ್ತು ಸಾಕ್ಷ್ಯದ ಆಧಾರದ ಮೇಲೆ ಶಿಕ್ಷೆಯನ್ನು ನೀಡುತ್ತಾನೆ ಮತ್ತು ಶಿಕ್ಷೆಯ ಶಾಶ್ವತ ಪರಿಣಾಮವನ್ನು ಹೊಂದಿರಬಾರದು. ಒಬ್ಬ ಗಂಡ ತನ್ನ ಹೆಂಡತಿಯನ್ನು ಮಾರಲು ಅಥವಾ ಅವನು ಸೇವಕಿಯಾಗಿ ಇರಿಸಿಕೊಳ್ಳಲು ಒಡೆತನವನ್ನು ಹೊಂದಿಲ್ಲ, ಅವನ ಹೆಂಡತಿ ಅವನೊಂದಿಗೆ ಅವನ ಆಹಾರ ಮತ್ತು ಪಾನೀಯದಲ್ಲಿ ಸಹಭಾಗಿಯಾಗಿದ್ದಾಳೆ ಮತ್ತು ಅವಳನ್ನು ತನ್ನ ಶಕ್ತಿಯಂತೆ ನಡೆಸಿಕೊಳ್ಳಬೇಕು. ಅವನು ತನ್ನ ಸ್ಥಾನಮಾನಕ್ಕೆ ಅನುಗುಣವಾಗಿ ಅದನ್ನು ಮಾಡಬೇಕು ಮತ್ತು ಅವನು ಸೇರಿರುವ ವರ್ಗಕ್ಕಿಂತ ಕಡಿಮೆ ಪರಿಗಣಿಸುವಂತಿಲ್ಲ. ಗಂಡನ ಮರಣದ ನಂತರ, ಅವನ ಸಂಬಂಧಿಕರಿಗೂ ಅವನ ಮೇಲೆ ಅಧಿಕಾರವಿಲ್ಲ, ಅವಳು ಸ್ವತಂತ್ರನಾಗಿರುತ್ತಾಳೆ. ಮಂಗಳಕರ ನೋಟವನ್ನು ನೋಡಿದ ನಂತರ ಅವಳು ತನ್ನ ನಿಕಾಹ್ ಅನ್ನು ಮಾಡಬಹುದು, ಹಾಗೆ ಮಾಡುವುದನ್ನು ತಡೆಯುವ ಹಕ್ಕು ಯಾರಿಗೂ ಇಲ್ಲ ಅಥವಾ ಅವಳನ್ನು ನಿರ್ದಿಷ್ಟ ಸ್ಥಳದಲ್ಲಿ ಉಳಿಯಲು ಒತ್ತಾಯಿಸಲಾಗುವುದಿಲ್ಲ. ಅವಳು ತನ್ನ ಗಂಡನ ಮನೆಯಲ್ಲಿ ಕೇವಲ ನಾಲ್ಕು ತಿಂಗಳು ಮತ್ತು ಹತ್ತು ದಿನಗಳವರೆಗೆ ಇರಬೇಕು, ಆದ್ದರಿಂದ ಆ ಹೊತ್ತಿಗೆ ಅವಳ ಮತ್ತು ಅವಳ ಗಂಡನ ಹಕ್ಕುಗಳ ಇತರ ಸಂಬಂಧಿಕರ ಮೇಲೆ ಪರಿಣಾಮ ಬೀರುವ ಎಲ್ಲಾ ಸಂದರ್ಭಗಳು ಕಾಣಿಸಿಕೊಳ್ಳುತ್ತವೆ. ಒಬ್ಬ ಮಹಿಳೆ ತನ್ನ ಗಂಡನ ಮರಣದ ನಂತರ ಒಂದು ವರ್ಷದವರೆಗೆ ತನ್ನ ವೈಯಕ್ತಿಕ ಹಕ್ಕುಗಳನ್ನು ಹೊರತುಪಡಿಸಿ ತನ್ನ ಗಂಡನ ಮನೆಯಿಂದ

ಹೊರಹಾಕಬಾರದು, ಈ ಅವಧಿಯಲ್ಲಿ ಅವಳು ತನ್ನ ಸ್ವಂತ ಪಾಲಿನಿಂದ ತನ್ನ ಜೀವನವನ್ನು ನಿರ್ವಹಿಸಬಹುದು. ಗಂಡನಿಗೂ ಸಿಟ್ಟು ಬಂದರೆ ತಾನೇ ಮನೆಯಿಂದ ಬೇರೆಯಾಗಬೇಕು. ಏಕೆಂದರೆ ಮನೆ ಮಹಿಳೆಯ ಅಧೀನದಲ್ಲಿರುತ್ತದೆ. ಮಕ್ಕಳ ಶಿಕ್ಷಣದಲ್ಲಿ ಮಹಿಳೆಯ ಪಾತ್ರವೂ ಇದೆ, ಆಕೆಯನ್ನು ಸಮಾಲೋಚಿಸಬೇಕು ಮತ್ತು ಮಗುವಿಗೆ ಯಾವುದೇ ತೊಂದರೆ ನೀಡಬಾರದು. ಸ್ತನ್ಯಪಾನ, ಮೇಲ್ವಿಚಾರಣೆ ಇತ್ಯಾದಿಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಅವನನ್ನು ಕೇಳಬೇಕು ಮತ್ತು ಒಬ್ಬ ಮಹಿಳೆ ಮತ್ತು ಪುರುಷನು ಒಟ್ಟಿಗೆ ವಾಸಿಸಲು ಅಸಾಧ್ಯವೆಂದು ಕಂಡುಕೊಂಡರೆ ಮತ್ತು ಬೇರೆಯಾಗಲು ಬಯಸಿದರೆ, ಚಿಕ್ಕ ಮಕ್ಕಳು ತಾಯಿಯೊಂದಿಗೆ ಇರಬೇಕು. ಹೌದು, ದೊಡ್ಡವರಾದ ಮೇಲೆ ತಂದೆಗೆ ಶಿಕ್ಷಣ ಇತ್ಯಾದಿಗಳನ್ನು ಒಪ್ಪಿಸಬೇಕು. ಮಕ್ಕಳು ತಾಯಿಯ ಬಳಿ ಇರುವವರೆಗೂ ತಂದೆಯೇ ಆ ಮಗುವಿನ ಖರ್ಚುವೆಚ್ಚ ನೀಡಬೇಕು, ಆದರೆ ತಾಯಿ ಅವರಿಗಾಗಿ ಸಮಯ ಕಳೆಯುವಂತಾದರೆ ಮತ್ತು ದುಡಿಯಬೇಕಾದರೆ ಗಂಡ ಹಣಕಾಸಿನ ನೆರವು ಕೂಡ ನೀಡಬೇಕು. ಮಹಿಳೆಗೆ ಶಾಶ್ವತ ಸ್ಥಾನಮಾನವಿದೆ ಮತ್ತು ಅವಳು ಎಲ್ಲಾ ರೀತಿಯ ಧಾರ್ಮಿಕ ಪ್ರತಿಫಲಗಳನ್ನು ಪಡೆಯಬಹುದು. ಸಾವಿನ ನಂತರವೂ ಅವಳು ಹೆಚ್ಚಿನ ಪ್ರತಿಫಲವನ್ನು ಪಡೆಯುತ್ತಾಳೆ ಮತ್ತು ಈ ಜಗತ್ತಿನಲ್ಲಿಯೂ ಅವಳು ಸರ್ಕಾರದ ವಿವಿಧ ಕ್ಷೇತ್ರಗಳಲ್ಲಿ ಭಾಗವಹಿಸಬಹುದು ಮತ್ತು ಈ ಸಂದರ್ಭದಲ್ಲಿ ಅವಳ ಹಕ್ಕುಗಳನ್ನು ಪುರುಷರ ಹಕ್ಕುಗಳಂತೆ ನೋಡಿಕೊಳ್ಳಲಾಗುತ್ತದೆ.

ಪ್ರಪಂಚದಲ್ಲಿ ಸಂಪೂರ್ಣ ವಿರುದ್ಧವಾದ ವಿಚಾರಗಳು ಚಾಲ್ತಿಯಲ್ಲಿದ್ದ ಕಾಲದಲ್ಲಿ ಹಝ್ರತ್ ಪೈಗಂಬರ್(ಸ)ರವರು ನೀಡಿದ ಬೋಧನೆ ಇದು. ಈ ನಿಯಮಗಳ ಮೂಲಕ ನೀವು ಮಹಿಳೆಯನ್ನು ಈ ಗುಲಾಮಗಿರಿಯಿಂದ ಮುಕ್ತಗೊಳಿಸಿದ್ದೀರಿ. ಇದರಲ್ಲಿ ಅವಳು ಸಾವಿರಾರು ವರ್ಷಗಳಿಂದ ಬಳಲುತ್ತಿದ್ದಳು, ಅದರಲ್ಲಿ ಅವಳು ಪ್ರತಿ ದೇಶದಲ್ಲಿ ನಿರ್ಬಂಧಿತಳಾಗಿದ್ದಳು, ಅದರ ನೊಗವನ್ನು ಪ್ರತಿ ಧರ್ಮವು ಅವಳ ಕೊರಳಿಗೆ ಹಾಕಿತು. ಒಬ್ಬ ವ್ಯಕ್ತಿ ಅದೇ ಸಮಯದಲ್ಲಿ ಈ ದೀರ್ಘಕಾಲದ ನಿರ್ಬಂಧಗಳನ್ನು ಕತ್ತರಿಸಿ ಪ್ರಪಂಚದಾದ್ಯಂತದ ಮಹಿಳೆಯರನ್ನು ಮುಕ್ತಗೊಳಿಸಿದನು ಮತ್ತು ತಾಯಂದಿರನ್ನು ಮುಕ್ತಗೊಳಿಸಿದನು ಮತ್ತು ಮಕ್ಕಳನ್ನು ಗುಲಾಮಗಿರಿಯ ಆಲೋಚನೆಗಳಿಂದ ರಕ್ಷಿಸಿದನು ಮತ್ತು ಉನ್ನತ ಆಲೋಚನೆಗಳು ಮತ್ತು ಉತ್ಸಾಹದ ಭಾವನೆಗಳ ಹೊರಹೊಮ್ಮುವಿಕೆಗೆ ಸಾಧನಗಳನ್ನು ರಚಿಸಿದನು.

ಆದರೆ ಜಗತ್ತು ಈ ಸೇವೆಗೆ ಬೆಲೆ ಕೊಡಲಿಲ್ಲ, ದಯೆಯನ್ನು ಕ್ರೌರ್ಯ ಎಂದು ಕರೆದಿದೆ. ವಿಚ್ಛೇದನ (ತಲಾಖ್) ಮತ್ತು ಖುಲಾ ಭ್ರಷ್ಟಾಚಾರ ಎಂದು ಕರೆಯುತ್ತಾರೆ. ಆನುವಂಶಿಕತೆಯು ಕುಟುಂಬ ವಿನಾಶದ ಮೂಲವಾಗಿದೆ. ಖಾಸಗಿ ಬದುಕಿನಲ್ಲಿ ಹೆಣ್ಣಿನ ಶಾಶ್ವತ ಹಕ್ಕುಗಳನ್ನು ಹಾಳು ಮಾಡಿ ತನ್ನ ಅಂಧತ್ವದಿಂದಲೇ ಈ ಕುರುಡನ ಮಾತಿಗೆ ನಲುಗುತ್ತಾ ಹದಿಮೂರು ನೂರು ವರ್ಷಗಳ ಕಾಲ ಅವನ ಬೋಧನೆಯನ್ನು ನಿಸರ್ಗದ ತತ್ವಕ್ಕೆ ವಿರುದ್ಧವಾಗಿ ಕರೆಯಲಾಯಿತು. ದೈವವಾಣಿಯ ಒಳ್ಳೆಯತನವನ್ನು ಬಹಿರಂಗಪಡಿಸುವ ಸಮಯ ಬಂದಿದೆ ಮತ್ತು ಸಭ್ಯತೆ ಮತ್ತು ಸಭ್ಯತೆಯನ್ನು ಪ್ರತಿಪಾದಿಸುವವರು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಆಜ್ಞೆಗಳನ್ನು ಅನುಸರಿಸಬೇಕು. ಈ ಪ್ರತಿಯೊಂದು ಸರ್ಕಾರಗಳು ತಮ್ಮ ಕಾನೂನುಗಳನ್ನು ಒಂದೊಂದಾಗಿ ಬದಲಾಯಿಸಬೇಕು ಮತ್ತು ಹಝ್ರತ್ ಪೈಗಂಬರ್(ಸ) ಅವರು ನೀಡಿದ ತತ್ವವನ್ನು ಅನುಸರಿಸಬೇಕು.

ವಿಚ್ಛೇದನ (ತಲಾಖ್) ಮತ್ತು ಖುಲಾಗಾಗಿ ಪಕ್ಷಗಳಲ್ಲಿ ಒಬ್ಬರ ವ್ಯಭಿಚಾರವನ್ನು ಮತ್ತು ಹಿಂಸಾಚಾರವನ್ನು ಕಡ್ಡಾಯಗೊಳಿಸಿದ ಇಂಗ್ಲಿಷ್ ಕಾನೂನು, 1923 ರಲ್ಲಿ ಬದಲಾಯಿಸಲಾಯಿತು ಮತ್ತು ಕೇವಲ ವ್ಯಭಿಚಾರವನ್ನು ಮಾತ್ರ ತಲಾಖ್ ಹಗೂ ಖುಲಾಗೆ ಆಧಾರವಾಗಿ ಗುರುತಿಸಲಾಯಿತು.

ನ್ಯೂಜಿಲೆಂಡ್‌ನಲ್ಲಿ, ಏಳು ವರ್ಷದ ಹುಚ್ಚನ ಹೆಂಡತಿಯ ಮದುವೆಯನ್ನು ರದ್ದುಗೊಳಿಸಬಹುದು ಎಂದು 1912 ರಲ್ಲಿ ನಿರ್ಧರಿಸಲಾಯಿತು, ಮತ್ತು 1925 ರಲ್ಲಿ, ಗಂಡ ಅಥವಾ ಹೆಂಡತಿ ಮಹಿಳೆಯ ಅಥವಾ ಪುರುಷನ ಹಕ್ಕುಗಳನ್ನು ಪೂರೈಸದಿದ್ದರೆ ನಂತರ ತಲಖ್ ಅಥವಾ ಖುಲಾವನ್ನು ನೀಡಬಹುದು ಎಂದು ನಿರ್ಧರಿಸಲಾಯಿತು ಮತ್ತು ಮೂರು ವರ್ಷಗಳ ವಿಚ್ಛೇದನವನ್ನು ಸುದ್ದಿಯ ಕೊರತೆಯಿಂದಾಗಿ ವಿಚ್ಛೇದನೆಯನ್ನು ಅನುಮತಿಸಲಾಗಿದೆ ಎಂದು ಘೋಷಿಸಲಾಯಿತು (ನಿಖರವಾಗಿ ಇಸ್ಲಾಮಿಕ್ ನ್ಯಾಯಶಾಸ್ತ್ರಜ್ಞವನ್ನು ನಕಲಿಸಿದ್ದಾರೆ, ಆದರೆ ಇಸ್ಲಾಂ ಧರ್ಮವನ್ನು ವಿರೋಧಿಸಿದ 1300 ವರ್ಷಗಳ ನಂತರ).

ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ರಾಜ್ಯದಲ್ಲಿ, ಐದು ವರ್ಷಗಳ ಹುಚ್ಚುತನವನ್ನು ವಿಚ್ಛೇದನಕ್ಕೆ ಕಾರಣವೆಂದು ಗುರುತಿಸಲಾಗಿದೆ. ಟ್ಯಾಸ್ಮೆನಿಯಾದಲ್ಲಿ, ವ್ಯಭಿಚಾರ, ನಾಲ್ಕು ವರ್ಷಗಳ ಕಾಲ ಸುದ್ದಿಯನ್ನು ಸ್ವೀಕರಿಸದಿರುವುದು, ಮೂರು ವರ್ಷಗಳ ಕಾಲ ಅಸಭ್ಯತೆ ಮತ್ತು ಅಜಾಗರೂಕತೆ, ಸೆರೆವಾಸ, ಆಕ್ರಮಣ ಮತ್ತು ಹುಚ್ಚುತನವನ್ನು ವಿಚ್ಛೇದನಕ್ಕೆ ಆಧಾರವೆಂದು ಪರಿಗಣಿಸಲಾಗುತ್ತದೆ ಎಂಬ ಕಾನೂನನ್ನು 1919 ರಲ್ಲಿ ಅಂಗೀಕರಿಸಲಾಯಿತು. 1923 ರಲ್ಲಿ ವಿಕ್ಟೋರಿಯಾ ಪ್ರದೇಶದಲ್ಲಿ, ಪತಿ ಮೂರು ವರ್ಷಗಳ ಕಾಲ ಗಮನಹರಿಸದಿದ್ದರೆ, ವ್ಯಭಿಚಾರ ಮಾಡಿದರೆ, ಖರ್ಚು ಮಾಡದಿದ್ದರೆ ಅಥವಾ ಕಠಿಣವಾಗಿದ್ದರೆ, ಜೈಲು ಶಿಕ್ಷೆ, ಆಕ್ರಮಣ ಅಥವಾ ವ್ಯಭಿಚಾರ ಅಥವಾ ಹುಚ್ಚುತನ ಅಥವಾ ಕಠಿಣತೆ ಮತ್ತು ಅಸ್ವಸ್ಥತೆಯ ಕೃತ್ಯಗಳು ನಡೆದರೆ ತಲಾಖ್ ಅಥವಾ ಖುಲಾ ಪಡೆಯಬಹುದು ಎಂದು ನಿರ್ಧರಿಸಲಾಗಿದೆ.

ಪಶ್ಚಿಮ ಆಸ್ಟ್ರೇಲಿಯಾದಲ್ಲಿ, ಮೇಲಿನ ಕಾನೂನುಗಳ ಜೊತೆಗೆ, ಗರ್ಭಿಣಿ ಮಹಿಳೆಯ ವಿವಾಹವನ್ನು ಸಹ ಶೂನ್ಯವೆಂದು ಘೋಷಿಸಲಾಗುತ್ತದೆ (ಇಸ್ಲಾಂ ಸಹ ಕಾನೂನುಬಾಹಿರವೆಂದು ಘೋಷಿಸುತ್ತದೆ).

ಕ್ಯೂಬಾದ ದ್ವೀಪದಲ್ಲಿ, 1918 ರಲ್ಲಿ, ಬಲಾತ್ಕಾರ, ಹೊಡೆಯುವುದು, ನಿಂದನೆ, ಶಿಕ್ಷೆ, ಅಸಭ್ಯತೆ, ಜೂಜು, ಹಕ್ಕುಗಳನ್ನು ಪಾವತಿಸದಿರುವುದು, ವೆಚ್ಚಗಳು, ಸಾಂಕ್ರಾಮಿಕ ರೋಗಗಳು ಅಥವಾ ಪರಸ್ಪರ ಒಪ್ಪಿಗೆ ವಿಚ್ಛೇದನ ಅಥವಾ ಪ್ರತ್ಯೇಕತೆಗೆ ಕಾರಣವೆಂದು ನಿರ್ಧರಿಸಲಾಯಿತು. ಕಾರಣವನ್ನು ಒಪ್ಪಿಕೊಳ್ಳಲಾಗಿದೆ. .

ಇಟಲಿಯಲ್ಲಿ, 1919 ರಲ್ಲಿ, ಮಹಿಳೆ ತನ್ನ ಆಸ್ತಿಯ ಮಾಲೀಕಳಾಗಿದ್ದಾಳೆ ಮತ್ತು ಅದನ್ನು ದಾನಕ್ಕೆ ದಾನ ಮಾಡಬಹುದು ಅಥವಾ ಮಾರಾಟ ಮಾಡಬಹುದು ಎಂಬ ಕಾನೂನನ್ನು ರಚಿಸಲಾಯಿತು.

ಮೆಕ್ಸಿಕೋ ಮತ್ತು ಯುನೈಟೆಡ್ ಸ್ಟೇಟ್ಸ್‌ನಲ್ಲಿ, ಮೇಲೆ ತಿಳಿಸಿದ ಕಾರಣಗಳನ್ನು ವಿಚ್ಛೇದನ ಮತ್ತು ವಿಚ್ಛೇದನಕ್ಕೆ ಸಾಕಷ್ಟು ಆಧಾರವಾಗಿ ಗುರುತಿಸಲಾಗಿದೆ ಮತ್ತು ಅದನ್ನು ಸಮರ್ಥಿಸಲು ಪರಸ್ಪರ ಒಪ್ಪಿಗೆಯನ್ನು ಸಹ ಸಾಕಷ್ಟು ಪರಿಗಣಿಸಲಾಗಿದೆ. ಈ ಕಾನೂನನ್ನು 1917 ರಲ್ಲಿ ಅಂಗೀಕರಿಸಲಾಯಿತು.

1915 ರಲ್ಲಿ ಪೋರ್ಚುಗಲ್‌ನಲ್ಲಿ, 1909 ರಲ್ಲಿ ನಾರ್ವೆಯಲ್ಲಿ, 1920 ರಲ್ಲಿ ಸ್ವೀಡನ್‌ನಲ್ಲಿ ಮತ್ತು 1912 ರಲ್ಲಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ವಿಚ್ಛೇದನ ಮತ್ತು ಪ್ರತ್ಯೇಕತೆಯನ್ನು ಅನುಮತಿಸುವ ಕಾನೂನುಗಳನ್ನು ಅಂಗೀಕರಿಸಲಾಯಿತು. ಸ್ವೀಡನ್‌ನಲ್ಲಿ, ಹದಿನೆಂಟು ವರ್ಷ ವಯಸ್ಸಿನವರೆಗೆ ಮಗುವಿಗೆ ಖರ್ಚು ನೀಡುವಂತಾಗಿ ತಂದೆಗೆ ಒತ್ತಾಯಿಸಲಾಗುವುದು.

ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದಲ್ಲಿ, ಮಗುವಿನ ಮೇಲೆ ತಂದೆಗೆ ಹಕ್ಕಿದೆ ಎಂದು ಕಾನೂನು ಇನ್ನೂ ಹೇಳುತ್ತದೆ, ಆದರೆ ಪ್ರಾಯೋಗಿಕವಾಗಿ, ಇಸ್ಲಾಮಿಕ್ ಮಾರ್ಗದಲ್ಲಿ ಸುಧಾರಣೆ ಪ್ರಾರಂಭವಾಗಿದೆ ಮತ್ತು ನ್ಯಾಯಾಧೀಶರು ಮಹಿಳೆಯ ಭಾವನೆಗಳನ್ನು ಗುರುತಿಸಲು ಪ್ರಾರಂಭಿಸಿದ್ದಾರೆ ಮತ್ತು ಪುರುಷನು ಬಲವಂತವಾಗಿ ವೆಚ್ಚವನ್ನು ಪಾವತಿಸಲು, ಆದರೆ ಈಗಲೂ ಈ ಕಾನೂನಿನಲ್ಲಿ ಹಳಷ್ಟು ಲೋಪದೋಷಗಳಿವೆ. ಪುರುಷರ ಹಕ್ಕುಗಳನ್ನು ಹೆಚ್ಚು ಕಟ್ಟುನಿಟ್ಟಾಗಿ ರಕ್ಷಿಸಲಾಗಿದೆ ಮಹಿಳೆಯರಿಗೆ ಅವರ ಆಸ್ತಿಯ ಮೇಲೆ ನಿಯಂತ್ರಣವನ್ನು ನೀಡಲಾಗುತ್ತಿದೆ ಆದರೆ ಅದರೊಂದಿಗೆ ಕೆಲವು ರಾಜ್ಯಗಳಲ್ಲಿ, ಪತಿ ಅಂಗವಿಕಲನಾದರೆ, ಅವನ ವೆಚ್ಚವನ್ನು ಹೆಂಡತಿಯೂ ಒದಗಿಸಬೇಕು ಎಂಬ ಕಾನೂನನ್ನು ಸಹ ಜಾರಿಗೊಳಿಸಲಾಗಿದೆ.

ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಾಗುತ್ತಿದೆ ಮತ್ತು ರಾಷ್ಟ್ರೀಯ ವ್ಯವಹಾರಗಳಲ್ಲಿ ಅವರಿಂದ ಸಲಹೆ ಪಡೆಯಲು ಮಾರ್ಗಗಳನ್ನು ತೆರೆಯಲಾಗುತ್ತಿದೆ, ಆದರೆ ಇವೆಲ್ಲವೂ ಹಝ್ರತ್ ಪೈಗಂಬರ್(ಸ) ರವರ 13 ನೂರು ವರ್ಷಗಳ ನಂತರ ಸಂಭವಿಸಿವೆ. ಇನ್ನೂ ಬಹಳಷ್ಟು ಸಂಭವಿಸಬೇಕಾಗಿದೆ. ಅನೇಕ ದೇಶಗಳಲ್ಲಿ, ಮಹಿಳೆಯನ್ನು ತನ್ನ ತಂದೆ ಮತ್ತು ತಾಯಿ ಮತ್ತು ಪತಿಯ ಆಸ್ತಿಯ ವಾರಿಸುದಾರಳು ಎಂದು ಇನ್ನೂ ಘೋಷಿಸಲಾಗಿಲ್ಲ. ಮತ್ತು ಅದೇ ರೀತಿಯಲ್ಲಿ, ಇಸ್ಲಾಂ ಧರ್ಮದಲ್ಲಿ ಇನ್ನೂ ಅನೇಕ ಹಕ್ಕುಗಳಿವೆ, ಅದರಲ್ಲಿ ಇಸ್ಲಾಂ ಧರ್ಮವು ಇನ್ನೂ ಉಳಿದವರಿಗೆ ಮಾರ್ಗದರ್ಶನ ನೀಡುತ್ತಿದೆ. ಆದರೆ ಇದು ಇನ್ನೂ ಅದರ ಮಾರ್ಗದರ್ಶನವನ್ನು ಸ್ವೀಕರಿಸಿಲ್ಲ, ಈ ವಿಷಯಗಳಲ್ಲಿ ಮತ್ತು ಇತರ ವಿಷಯಗಳಲ್ಲಿ ಮತ್ತು ಅವರ ಮಾರ್ಗದರ್ಶನದಲ್ಲಿ ಜಗತ್ತು ಹಝ್ರತ್ ಪೈಗಂಬರ್(ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರ ಮಾರ್ಗದರ್ಶನವನ್ನು ಸ್ವೀಕರಿಸುವ ಸಮಯ ದೂರವಿಲ್ಲ. ಜಿಹಾದ್ ಮಹಿಳೆಯರ ವಿಮೋಚನೆಗೆ ಸಂಬಂಧಿಸಿದಂತೆ ಅದರ ಸಂಪೂರ್ಣ ಪರಿಣಾಮಗಳನ್ನು ಮತ್ತು ಫಲಿತಾಂಶಗಳನ್ನು ತೋರಿಸುತ್ತದೆ.

**ಅಲ್ಲಾಹುಮ್ಮ ಸುಲ್ಲಿ ಅಲಾ ಮುಹಮ್ಮದಿಂವ್ವ ಅಲಾ ಆಲಿ ಮುಹಮ್ಮದಿನ್ ಕಮಾ ಸೊಲ್ಲೈತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್.**

ಮಿರ್ಝಾ ಮಹ್ಮೂದ್ ಅಹ್ಮದ್

(ಅಲ್-ಫಝುಲ್ ಖಾದಿಯಾನ್, ಜೂನ್ 12, 1928)

...*...*...*...

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಕೇಳುತ್ತಿದ್ದರು. **"ಮಾ ಫಅಲ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್"** ಹಾಗೆ ರಸೂಲುಲ್ಲಾಹ್(ಸ) ಆನು ಮಾಡಿರುವರು? ನೋಡಲಿಕ್ಕೆ ಈ ಮಾತು ತಪ್ಪು ಎಂದು ಭಾಸವಾಗುತ್ತದೆ, ಆದ್ದರಿಂದಲೇ ಇತಿಹಾಸಕಾರರು ಬರೆಯುತ್ತಾರೆ, ಹಝ್ರತ್ ಪೈಗಂಬರ್(ಸ) ಏನು ಮಾಡಿದರು ಎಂಬ ಅರ್ಥ ರಸೂಲುಲ್ಲಾಹ್ (ಸ) ರವರಿಗೆ ಏನಾಯಿತು ಎಂದಿತ್ತು. ಆದ್ದರಿಂದ ವಾಸ್ತವವಾಗಿ ಈ ಮಾತು ತಪ್ಪಲ್ಲ, ಬದಲಿಗೆ ಮಹಿಳೆಯರ ಮಾತಿನ ರೀತಿ ಸರಿಯಾಗಿಯೇ ಇದೆ. ಮಹಿಳೆಯರು ತುಂಬಾ ಭಾವುಕರಾಗಿರುತ್ತಾರೆ, ಕೆಲವೊಮ್ಮೆ ಅವರು ಮೃತರಿಗೂ ಜೀವಂತರಿಗೆ ಮಾಡುವ ರೀತಿಯಲ್ಲಿಯೇ ಮಾತನಾಡುತ್ತಾರೆ. ಉದಾಹರಣೆಗೆ ಮಹಿಳೆಯೊಬ್ಬಳ ಪತಿ ಅಥವಾ ಮಗ ತೀರಿ ಹೋದರೆ ಅವರ ಕುರಿತು ಈ ರೀತಿಯ ಮಾತುಗಳನ್ನು ಹೇಳುತ್ತಿರುತ್ತಾರೆ. ನನಗೆ ಯಾರ ಆಶ್ರಮದಲ್ಲಿ ಬಿಟ್ಟುಹೋಗಿದ್ದೀರಿ? ಅಥವಾ ಮಗನಾಗಿದ್ದರೆ-ಈ ವೃದ್ಧಾವಸ್ಥೆಯಲ್ಲಿ ನನಗೆ ಏಕೆ ಬಿಟ್ಟು ಹೋದೆ? ಇದು ಅತಿ ದುಃಖವಾದಾಗ ಸಹಜವಾಗಿ ಹೊರಡುವ ಮಾತುಗಳಾಗಿವೆ. ಅದೆ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ) ರವರ ತೀರಿ ಹೋದ ಸುದ್ದಿ ಕೇಳಿ ಆ ಮಹಿಳೆಯ ಅವಸ್ಥೆ ಹೀಗಾಗಿದೆ. ಅವಳು ಹಝ್ರತ್ ಪೈಗಂಬರ್(ಸ) ಮೃತರೆಂದು ಒಪ್ಪಲು ಸಿದ್ಧಳಿರಲಿಲ್ಲ, ಇನ್ನೊಂದೆಡೆ ಈ ಸುದ್ದಿ ನಿರಾಕರಿಸಲು ಸಹ ಸಾಧ್ಯವಾಗಲಿಲ್ಲ, ಆದುದರಿಂದ ಅತಿ ದುಃಖದ ಪರಿಣಾಮವಾಗಿ "ಹೇ ರಸೂಲುಲ್ಲಾಹ್ ಹೀಗೇಕೆ ಮಾಡಿದ್ದೀರಿ ಎಂದರೆ ಇಂತಹ ಆತ್ಮೀಯರೊಬ್ಬರು ನಮಗೆ ಇಂತಹ ದುಃಖ ನೀಡಲು ಹೇಗೆ ರಾಜಿಯಾದರು.

ಜನರು ಅವಳ ತಂದೆ, ಸಹೋದರ ಮತ್ತು ಪತಿಗೂ ಲೆಕ್ಕಿಸದ ಸ್ಥಿತಿ ನೋಡಿ ಅವಳ ಭಾವನೆಗಳನ್ನು ಅರ್ಥ ಮಾಡಿಕೊಂಡರು ಮತ್ತು ಹೇಳಿದರು. ತಾಯಿ! ನೀನು ಬಯಸಿದ ಹಾಗೆಯೇ ಅಲ್ಲಾಹನ ಅನುಗ್ರಹದಿಂದ ಚೆನ್ನಾಗಿದ್ದಾರೆ. ಆಗ ಅವಳು ಕೇಳಿದಳು, ನನಗೆ ತೋರಿಸಿರಿ ಅವರೆಲ್ಲಿದ್ದಾರೆ? ಆಗ ಜನರು ಹೇಳಿದರು. ಮುಂದೆ ಹೋಗು, ಅಲ್ಲಿ ಅವರು ನಿಂತಿದ್ದಾರೆ. ಆ ಮಹಿಳೆ ಓಡಿಕೊಂಡು ಹಝ್ರತ್ ಪೈಗಂಬರ್(ಸ) ಬಳಿ ಹೋಗುತ್ತಾಳೆ ಮತ್ತು ಅವರ ಮಡಿಲನ್ನು ಹಿಡಿದು ಹೇಳುತ್ತಾಳೆ, ನನ್ನ ತಂದೆ-ತಾಯಿ ನಿಮ್ಮ ಮೇಲೆ ಬಲಿ ಹೋಗಲಿ, ನೀವು ಕ್ಷೇಮವಾಗಿದ್ದರೆ ನನಗೇನು ಬೇಕಾಗಿಲ್ಲ.

ಪುರುಷರು ಯುದ್ಧದಲ್ಲಿ ವಿಶ್ವಾಸದ ಅಂತಹ ಮಾದರಿ ತೋರಿಸಿದ್ದಾರೆ ಮತ್ತು ಮಹಿಳೆಯರು ತಮ್ಮ ನಿಷ್ಠೆಯ ಇಂತಹ ಮಾದರಿಯನ್ನು ತೋರಿಸಿದರು. ಅದರ ಉದಾಹರಣೆ ಈಗಷ್ಟೇ ವಿವರಿಸಿದ್ದೇನೆ. ಕ್ರಿಸ್ತ ಲೋಕ ಮರಿಯಮ್ಮ ಮಗ್ದಲಿನಿ ಮತ್ತು ಅವಳ ಸಂಗಡಿಗರ ಮಹಿಳೆಯರು ಅಡಗಿಕೊಂಡು ಮಸೀಹರ ಗೋರಿವರೆಗೆ ತಲುಪಿದಕ್ಕಷ್ಟೆ ಸಂತುಷ್ಟರಾಗಿದ್ದಾರೆ. ನಾನು ಅವರಗೆ ಹೇಳಬಯಸುತ್ತೇನೆ. ಬನ್ನಿರಿ ತುಸು ನನ್ನ ಪ್ರಿಯನ ನಿಷ್ಠರ ಮತ್ತು ಆತ್ಮೀಯರನ್ನು ನೋಡಿರಿ, ಎಂತಹ ಪರಿಸ್ಥಿತಿಗಳಲ್ಲಿ ಅವರಿಗೆ ನೆರವಾದರು ಮತ್ತು ಎಂತಹ ಅವಸ್ಥೆಗಳಲ್ಲಿ ಅವರ ಏಕದೇವನ ಧ್ವಜವನ್ನು ಎತ್ತಿ ಹಿಡಿದರು.

ಇದೇ ರೀತಿಯ ಪ್ರಾಣಾರ್ಪಣೆಯ ಇನ್ನೊಂದು ಉದಾಹರಣೆ ಇತಿಹಾಸದಲ್ಲಿ ಕಾಣಸಿಗುತ್ತದೆ. ಹಝ್ರತ್ ಪೈಗಂಬರ್(ಸ) ಹುತಾತ್ಮರೆಲ್ಲರ ಅಂತ್ಯಕ್ರಿಯೆ ಮುಗಿಸಿ ಮದೀನ ಮರಳಿದಾಗ, ಮಹಿಳೆಯರು ಮತ್ತು ಮಕ್ಕಳು ಅವರನ್ನು(ಸ) ಸ್ವಾಗತಿಸಲು ನಗರದಿಂದ ಹೊರಗೆ ಬಂದು ನಿಂತಿದ್ದರು. ಹಝ್ರತ್ ಪೈಗಂಬರ್(ಸ) ರವರ ಒಂಟೆಯ ಲಗಾಮು ಸಅದ್ ಬಿನ್ ಮಾಆಝ್(ರ) ಮದೀನಾರ ಮುಕಂಡರೊಬ್ಬರು ಹಿಡಿದಿದ್ದರು. ಗೌರವದಿಂದ ಮುಂದೆ ಮುಂದೆ ಓಡಿ ಹೋಗುತ್ತಿದ್ದರು, ಒಂದರ್ಥದಲ್ಲಿ ಅವರು ಲೋಕಕ್ಕೆ ಸ್ಪಷ್ಟಪಡಿಸುತ್ತಿದ್ದರು. ನೋಡಿರಿ. ನಾವು ಹಝ್ರತ್ ಪೈಗಂಬರ್(ಸ) ರವರನ್ನು ಕ್ಷೇಮವಾಗಿ ನಮ್ಮ ಮನೆಗೆ ಮರಳಿ ತಂದಿದ್ದೇವೆ. ನಗರದ ಬಳಿ ಅವರಿಗೆ ಅವರ ವೃದ್ಧ ತಾಯಿ, ಅವರ ದೃಷ್ಟಿ ಮಂದಾಗಿತ್ತು. ಎದುರಾದಳು, ಉಹದ್‌ನಲ್ಲಿ ಅವರ ಒಬ್ಬ ಮಗ ಉಮ್ರೋ ಬಿನ್ ಮಆಝ್ ಮರಣ ಹೊಂದಿದ್ದ, ಅವಳನ್ನು ಕಂಡು ಸಆದ್ ಬಿನ್ ಮಆಝ್ ಹೇಳಿದರು. ಹೇ ರಸೂಲುಲ್ಲಾಹ್! ನನ್ನ ತಾಯಿ ಬರುತ್ತಿದ್ದಾಳೆ. ಅವರು (ಸ) ಹೇಳಿದರು. ಅಲ್ಲಾಹನ ಕಾರುಣ್ಯಗಳಿಂದ ಒಳಗೂಡಿ ಬರಲಿ. ವೃದ್ಧೆ ಮುಂದೆ ಬಂದಳು, ತನ್ನ ದಉರ್ಬಲ ಕಣ್ಣುಗಳಿಂದ ಅತ್ತಿತ್ತ ನೋಡಿದಳು. ಹಝ್ರತ್ ಪೈಗಂಬರ್(ಸ) ರವರ ಮುಖ ಕಾಣುವಂತಾಗಲಿ ಎಂದು. ಕೊನೆಗೆ ಹಝ್ರತ್ ಪೈಗಂಬರ್(ಸ) ರನ್ನು ಕಂಡು. ಸಂತುಷ್ಠಳಾದಳು. ಹಝ್ರತ್ ಪೈಗಂಬರ್(ಸ) ಹೇಳಿದರು. ತಾಯಿ ನನಗೆ ನಿಮ್ಮ ಮಗ ಹುತಾತ್ಮಗೊಂಡಿದಕ್ಕೆ ತುಂಬ ದು:ಖವಿದೆ. ಆಗ ಆ ಸಜ್ಜನ ಮಹಿಳೆ ಹೇಳಿದಳು. ಹುಝೂರ್! (ಸ್ವಾಮಿ) ನಾನು ನಿಮಗೆ ಕ್ಷೇಮವಾಗಿ ಕಂಡಿದ್ದರೆ ಎಲ್ಲಾ ಆಪತ್ತುಗಳನ್ನು ಸುಟ್ಟು ತಿಂದಂತಾಗುತ್ತದೆ. ಸುಟ್ಟು ತಿಂದಂತಾಗುತ್ತದೆ. ಎಷ್ಟು ವಿಚಿತ್ರವಾದ ಮಾತಾಗಿದೆ. ಪ್ರೇಮದ ಎಷ್ಟೊಂದು ಆಳವಾದ ಭಾವನೆಗಳನ್ನು ಸೂಚಿಸುತ್ತದೆ. ದುಃಖವು ಮನುಷ್ಯನಿಗೆ ತಿಂದುಬಿಡುತ್ತದೆ. ಆ ಮಹಿಳೆ, ವೃದ್ಧಾವಸ್ಥೆಯಲ್ಲಿ ತನ್ನ ಆಶ್ರಯದಾತನನ್ನು ಕಳೆದುಕೊಂಡಿದ್ದಾರೆ, ಎಷ್ಟೊಂದು ಸಾಹಸದಿಂದ ಹೇಳುತ್ತಿದ್ದಾಳೆ. ನನ್ನ ಮಗನ ದುಃಖ ನನಗೆ ಏನು ತಿನ್ನಲು ಸಾಧ್ಯ, ಬದಲು, ಹಝ್ರತ್ ಪೈಗಂಬರ್(ಸ) ರವರಿಗಾಗಿ ನನ್ನ ಮಗ ಪ್ರಾಣ ಅರ್ಪಿಸಿದ್ದು, ತನ್ನ ವೃದ್ಧ ಅವಸ್ಥೆಯಲ್ಲಿ ಶಕ್ತಿವರ್ಧನೆಗೆ ಕಾರಣವಾಗಿದೆ. ಹೇ ಅನ್ಸಾರ್! ನನ್ನ ಪ್ರಾಣ ನಿಮಗಾಗಿ ಅರ್ಪಿತವಾಗಲಿ, ನೀವು ಎಷ್ಟು ಪುಣ್ಯವಂತರಾಗಿದ್ದಿರಿ."

(ನಬಿಯೊಂ ಕಾ ಸರದಾರ, ಪುಟ-91-93, ಮುದ್ರಣ ಖಾದಿಯಾನ್ 2001)

ಎಲ್ಲಾ ಮುಹಾಜಿರ್ ಅನ್ಸಾರ್ ತಮ್ಮ ಪ್ರವಾದಿಕ್ಕೊಸ್ಕರ ಪ್ರಾಣ ಅರ್ಪಿಸಲು ಯವಾಗಲೂ ಸಿದ್ಧರಿದ್ದರು. ಯಾರಿಗೆ ಎಂದು ಅವಕಾಶ ದೊರೆಕಿದೆ. ಆಗ ಸಂತೋಷದಿಂದ ತಮ್ಮ ಪ್ರಾಣಗಳನ್ನು ಅರ್ಪಿಸಿದರು. ಅದರ ಚಿತ್ರ ಪವಿತ್ರ ಖುರ್‌ಆನ್ ಕೇವಲ ಎರಡೇ ಪದಗಳಲ್ಲಿ ಹೀಗೆ ಎಳೆದಿದೆ- **ಮಿನ್‌ಹುಮ್ ಮನ್ ಖಝಾ ನಹಬಹು ವ ಮಿನ್‌ಹುಮ್ ಮೈಂ ಯನ್‌ತಝಿರ್**. ಹಝ್ರತ್ ಸಅದ್ ಬಿನ್ ರಬೀಅ್ ಅನ್ಸಾರಿ(ರ) ಅವರ ನಿಷ್ಠೆಯ ಮದರಿ ನೋಡಿರಿ. ಮಕ್ಕದಿಂದ ಮುಹಾಜಿರ್ ಮದೀನಕ್ಕೆ ಬಂದರು ಮತ್ತು ಹಝ್ರತ್ ಪೈಗಂಬರ್(ಸ) ಪ್ರತಿ ಮುಹಾಜಿರ್‌ಗೆ ಒಂದೊಂದು ಅನ್ಸಾರ್‌ನನ್ನು ಸಹೋದರನನ್ನಾಗಿ ಮಾಡಿದಾಗ, ಅವರು ತಮ್ಮ ನೈಜ ಸಹೋದರರಿಗಿಂತಲೂ ಹೆಚ್ಚು ಪ್ರೀತಿಸಿದರು. ತಮ್ಮ ಅರ್ಧಪಾಲು ಆಸ್ತಿಗಳನ್ನು ಅವರಿಗೆ ಒಪ್ಪಿಸಿದರು. ಪಟ್ಟು ಹಿಡಿಯುತ್ತಿದ್ದರು. ಅವರಲ್ಲಿ ಅನ್ಸಾರಿ ಸಹಾಬಿಯೊಬ್ಬರು ಹೀಗೂ ಇದ್ದರು. ಅವರು ತಮ್ಮ ಮಹಾಜಿರ್ ಸಹೊದರ ಅಬ್ದುರ್ ರಹ್ಮಾನ್ ಬಿನ್ ಔಫ್(ರ) ಅವರಿಗೆ ಹೀಗೆ ಹೇಳಿದರು. ನಾನು ನನ್ನ ಒಂದು ಪತ್ನಿಯನ್ನು ತಲಾಖ್ ನೀಡುತ್ತೇನೆ, ಇದ್ದತ್ ಪೂರ್ಣಗೊಂಡ ನಂತರ ನೀವು ಅವಳೊಂದಿಗೆ ಮದುವೆಯಾಗಿ. ಆ ಸಹಾಬಿ ಸಅದ್ ಬಿನ್ ಕಬೀರ್ ಅನ್ಸಾರಿ(ರ) ಆಗಿದ್ದರು. ವ್ಯಕ್ತಿಯೊಬ್ಬನು ತನ್ನ ದತ್ತು ಸಹೋದರನ ಪುತ್ರಿ ಇಂತಹ ಪ್ರೀತಿಉಳ್ಳವನಾದರೆ, ಹಝ್ರತ್ ಪೈಗಂಬರ್(ಸ) ರವರ ಕುರಿತು ಅವರ ಭಾವನೆಗಳು ಹೇಗಿದ್ದೀತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ. ಉಹದ್ ಯುದ್ಧ ಸಂದರ್ಭದಲ್ಲಿ ಯುದ್ಧ ಮುಗಿದಿತ್ತು. ಹುತಾತ್ಮರ ಅಂತ್ಯಕ್ರಿಯೆ ಮತ್ತು ಗಾಯಗೊಂಡವರ ಯೋಗಕ್ಷೇಮದ ಕಾರ್ಯ ನಡೆದಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು. ಯಾರಾದರೂ ನೋಡಿ ಬನ್ನಿ ಸಅದ್ ಬಿನ್ ಕಬೀರ್ ರಮೀಸ್ ಅನ್ಸಾರ್ ಅವರು ಯಾವ ಸ್ಥಿತಿಯಲ್ಲಿದ್ದಾರೆ, ಅವರು ಜೀವಂತವಾಗಿದ್ದಾರೋ ಅಥವಾ ಶಹೀದರಾದರು? ಏಕೆಂದರೆ ನಾನು ಯುದ್ಧ ಸಮಯದಲ್ಲಿ ನೋಡಿದ್ದೆ, ಅವರು ಶತ್ರು ಸೈನ್ಯದಲ್ಲಿ ಸುತ್ತುವರಿಯಲ್ಪಟ್ಟಿದ್ದರು. ಅವರ (ಸ) ಈ ಮಾತು ಹೇಳುತ್ತಿದ್ದಂತೆ ಅನ್ಸಾರಿಯೊಬ್ಬರು ಸಹಾಬಿ ಅಬಿ ಬಿನ್ ಕಅಬ್ ಹೋದರು. ಮೈದಾನದಲ್ಲಿ ಅತ್ತಿತ್ತ ಸಅದ್‌ರನ್ನು ಹುಡುಕಾಡಿದರು. ಆದರೆ ಸುಳಿವು ದೊರಕಲಿಲ್ಲ. ಕೊನೆಗೆ ಅವರು ಉಚ್ಛ ಸ್ವರದಲ್ಲಿ ಸಅದ್‌ರ ಹೆಸರು ಹೇಳಿ ಕೂಗಿದರು. ಆದರೂ ಸುಳಿವು ದೊರೆಯಲಿಲ್ಲ. ನಿರಾಶರಾಗಿ ಮರಳಲು ಹೊರಟಿದ್ದರು. ಅಷ್ಟರಲ್ಲಿ ಯೋಚಿಸಿದರು, ಹಝ್ರತ್ ಪೈಗಂಬರ್(ಸ) ಅವರ ಮರಳಲು ಹೆಸರು ಹೇಳಿ ಕೂಗಿದರೆ ಬಹುಶಃ ಏನಾದರೂ ಸುಳಿವು ದೊರೆಯಬಹುದು. ಹಾಗೆ ಅವರು ಉಚ್ಛ ಧ್ವನಿಯಲ್ಲಿ ಹೇಳಿದರು. ಸಅದ್ ಬಿನ್ ಶಬೀರ್ ಎಲಿಲದ್ದೀರಿ. ನನಗೆ ಹಝ್ರತ್ ಪೈಗಂಬರ್(ಸ) ನಿಮ್ಮ ಕಡೆ ಕಳುಹಿಸಿದ್ದಾರೆ ಈ ಧ್ವನಿಯಿಂದ ಸಅದ್‌ರ ಅರ್ಧ ಮೃತ ಶರೀರದಲ್ಲಿ ಒಂದು ವಿದ್ಯುತ್ ಸಂಚಲನ ಆದಂತಾಯಿತು. ಅವರು ಎಚ್ಚರಗೊಂಡರು. ಆದರೆ ಮೆಲ್ಲ ಧ್ವನಿಯಲ್ಲಿ ಉತ್ತರ ನೀಡಿದರು. 'ಯಾರು ನಾನಿಲ್ಲಿದ್ದೇನೆ" ಅಬಿ ಬಿನ್ ಕಅ್‌ಬ್ ದಿಟ್ಟಿಸಿ ನೋಡಿದಾಗ ಸ್ವಲ್ಪ ದೂರದಲ್ಲೇ ಹತರಾದ ಒಂದು ರಾಶಿಯನ್ನು ಸಅದ್‌ರನ್ನು ನೋಡಿದರು. ಆಗ ಅವರು ಉಸಿರು ಬಿಡುವ ಅವಸ್ಥೆಯಲ್ಲಿದ್ದರು. ಅಬಿ ಬಿನ್ ಕಅಬ್ ಅವರೊಡನೆ ಹೇಳಿದರು. ನನಗೆ ಹಝ್ರತ್ ಪೈಗಂಬರ್(ಸ) ರವರು ನಿಮ್ಮ ಅವಸ್ಥೆ ಕಾಣಲು ಕಳುಹಿಸಿದ್ದಾರೆ. ಸಅದ್ ಉತ್ತರ ನೀಡಿದರು. ರಸೂಲುಲ್ಲಾಹ್(ಸ) ಅವರಿಗೆ ನನ್ನ ಸಲಾಂ ತಿಳಿಸಬೇಕು ಮತ್ತು ಹೇಳಬೇಕು. ಅಲ್ಲಾಹನ ಪ್ರವಾದಿಗಳಲ್ಲಿ ಅವರ ಅನುಯಾಯಿಗಳ ತ್ಯಾಗ ಮತ್ತು ನಿಷ್ಠೆಯ ಕಾರಣ ಅವರಿಗೆ ದೊರಕಬಹುದಾದ ಪುಣ್ಯವು ಅಲ್ಲಾಹನು ನಮಗೆ ಆ ಪುಣ್ಯ ಎಲ್ಲ ಪ್ರವಾದಿಗಳಿಗಿಂತ ಹೆಚ್ಚು ನೀಡುವಂತಾಗಲಿ ಮತ್ತು ನಿಮ್ಮ ಕಣ್ಣುಗಳಿಗೆ ತಂಪು ದೊರೆಯಲಿ, ನನ್ನ ಮುಸ್ಲಿಂ ಸಹೋದರರಿಗೂ ನನ್ನ ಸಲಾಂ ಹೇಳಬೇಕು. ಮತ್ತು ಸಮುದಾಯದವರಿಗೆ ಹೇಳಬೇಕು. ನೀವು ಜೀವಂತವಿರುವ ಅವಸ್ಥೆಯಲ್ಲಿ ರಸೂಲುಲ್ಲಾಹ್(ಸ) ರವರಿಗೆ ಏನಾದರೂ ಕಷ್ಟವಾದರೆ, ಅಲ್ಲಾಹನ ಮುಂದೆ ನಿಮಗೆ ನೆರವು ಇರಬಾರದು. ಇದನ್ನು ಹೇಳಿ ಸಅದ್ ಪ್ರಾಣಬಿಟ್ಟರು.

(ಸೀರತ್ ಖಾತಮನ್ನಬಿಯೀನ್, ಪುಟ 501).

ಬದರ್ ಯುದ್ಧ ಸಮಯದಲ್ಲಿ ಓರ್ವ ಅನ್ಸಾರಿ ಸಹಾಬಿ ಹಝ್ರತ್ ರಸೂಲುಲ್ಲಾಹ್ (ಸ) ರವರು, ಆಗಲೇ ಪದೇ ಪದೇ ಸಲಹೆಯನ್ನು ಕೇಳುತ್ತಿದ್ದರು. ಹೇಳಿದರು. ನಾವು ಮೂಸಾರ ಸಂಗಡಿಗರಂತೆ ನಿಮ್ಮಲ್ಲಿ ಹೀಗೆ ಹೇಳಲಾರೆವು. **"ಇಝ್‌ಹಬ್ ಅಂತ ವ ಕಬ್ಬುಕ ಫಖಾತಿಲ ಇನ್ನಾ ಹಾಹುನಾ ಖಾಯಿದೂನ್,"** ನೀನು ಮತ್ತು ನಿನ್ನ ಪ್ರಭು ಹೊಗಿ ಯುದ್ಧ ಮಾಡುತ್ತಿರಿ, ನಾವು ಇಲ್ಲೇ ಕುಳಿತುಕೊಳ್ಳುವೆವು. ಬದಲು ನಾವು ನಿಮ್ಮ ಎಡಬದಿಯಲ್ಲೂ ಹೋರಾಡುವೆವು. ಬಲಬದಿಯಲ್ಲೂ ಹೋರಾಡುವೆವು. ಮುಂದೆಯೂ ಹೋರಾಡುವೆವು ಮತ್ತು ಹಿಂದೆಯೂ ಹೋರಾಡುವೆವು. ಹೇ ರಸೂಲುಲ್ಲಾಹ್(ಸ) ! ನಿಮಗೆ

ನಷ್ಟವನ್ನುಂಟು ಮಡಲು ಬಂದ ಶತ್ರುವು ನಮ್ಮ ಶವಗಳನ್ನು ತಿಳಿಯುತ್ತಲೇ ನಿಮ್ಮ ಬಳಿಗೆ ಬರಲು ಸಾಧ್ಯವಾದೀತು. ಹೇ ರಸೂಲುಲ್ಲಾಹ್ ಯುದ್ಧವು ಒಂದು ಸಾಧಾರಣ ವಿಷಯವಾಗಿದೆ, ಇಲ್ಲಿಂದ ಸ್ವಲ್ಪವೇ ದೂರದಲ್ಲಿ ಸಮುದ್ರವಿದೆ. ತಾವು (ಸ) ಆದೇಶ ನೀಡಿದರೆ, ನಿಮ್ಮ ಕುದುರೆಗಳನ್ನು ಸಮುದ್ರದಲ್ಲಿ ಹಾಕಿಬಿಡಿ ಎಂದರೆ ನಾವು ಚಾಚೂ ಹೇಳದೇ ತಮ್ಮ ಕುದುರೆಗಳನ್ನು ಸಮುದ್ರಕ್ಕೆ ಹಾಕುವೆವು.

ಇದು ಪ್ರಾಣಾರ್ಪಣೆಯ ಮತ್ತು ನಿಷ್ಠೆಯ ಎಲ್ಲೂ ಗತಪ್ರವಾದಿಗಳಲ್ಲಿ ದೊರೆಯುವಂತಹ ಉದಾಹರಣೆಯಾಗಿದೆ. ಮೂಸಾ (ಅ) ರವರ ಸಂಗಡಿಗರ ಅವಸ್ಥೆ ಸ್ವಯಂ ಆ ಜನರೇ ತಿಳಿಸಿಬಿಟ್ಟಿದ್ದರು. ಹಝ್ರತ್ ಮಸೀಹರ ಶಿಷ್ಯರು ಶತ್ರುಗಳ ಎದುರು ತೋರಿಸಿದ ಮಾದರಿ ಇಂಜೀಲ್ ಅದರ ಮೇಲೆ ಸಾಕ್ಷಿಯಾಗಿದೆ. ಅವರಲ್ಲಿ ಒಬ್ಬರು ಕೆಲ ಕಾಸಿನ ಸಲುವಾಗಿ ತನ್ನ ಗುರುವನ್ನು ಒಪ್ಪಿಸಿದರು. ಇನ್ನೊಬ್ಬನು ಅವರ ಮೇಲೆ ಶಾಪ ಹಾಕಿದನು. ಉಳಿದ ಹತ್ತು ಮಂದಿ ಅವರನ್ನು ಬಿಟ್ಟು ಅತ್ತಿತ್ತ ಚದುರಿ ಹೋದರು. ಆದರೆ ಮುಹಮ್ಮದ್ ರಸೂಲುಲ್ಲಾಹ್ (ಸ) ರವರ ಶಿಷ್ಯರು ಕೇವಲ ಒಂದೂವರೆ (1 1/2 ವರ್ಷ) ಸಹವಾಸದ ನಿಮಿತ್ತ ವಿಶ್ವಾಸದಲ್ಲಿ ಎಷ್ಟೊಂದು ದೃಢರಾದರೆಂದರೆ, ಅವರು ಹೇಳಿದರೆ ಸಮುದ್ರಕ್ಕೂ ಹಾರಲು ಸಿದ್ಧರಾಗಿದ್ದರು. (ನಬಿಯೊಂ ಕಾ ಸರದಾರ್, ಪುಟ–74, ಮುದ್ರಣ ಖಾದಿಯಾನ್ 2001)

ಹಝ್ರತ್ ಪೈಗಂಬರ್ (ಸ) ಸಹಾಬರನ್ನು ಯುದ್ಧ ಖೈದಿಯರೊಡನೆ ಒಳ್ಳೆಯದಾಗಿ ವರ್ತಿಸಲು ತಾಕೀತು ಮಾಡಿದ್ದರು. ಸಹಾಬರು ತಮ್ಮ ಪ್ರೀತಿಯ ನೇತಾರರ (ಸ) ಮಾತುಗಳ ಮೇಲೆ ಹೇಗೆ ನಡೆದುಕೊಳ್ಳುತ್ತಿದ್ದರು. ನೋಡಿರಿ.

"ಸಹಾಬರಿಗೆ ತಮ್ಮ ನೇತಾರರಾದ ಹಝ್ರತ್ ಪೈಗಂಬರ್(ಸ) ಅವರ ಎಲ್ಲಾ ಮಾತುಗಳನ್ನು ಪೂರೈಸುವ ಪ್ರೇಮ ಹೊಂದಿದ್ದರು. ಅವರ ಈ ಉಪದೇಶದ ಮೇಲೆ ಎಷ್ಟೊಂದು ಉತ್ತಮ ರೀತಿಯಲ್ಲಿ ನಡೆದುಕೊಂಡರೆಂದರೆ, ಅದರ ಉದಾಹರಣೆ ಲೋಕದ ಇತಿಹಾಸದಲ್ಲಿ ಎಲ್ಲೂ ದೊರಕದು. ಅಂದಹಾಗೆ ಸ್ವಯಂ ಖೈದಿಗಳಲ್ಲಿ ಖೈದಿಯೊಬ್ಬರು ಅಬೂ ಅಝೀಝ್ ಬಿನ್ ಉಮರ್ ಹೇಳಿದ ವರದಿ ಬರುತ್ತದೆ. ಹಝ್ರತ್ ಪೈಗಂಬರ್ (ಸ) ರವರ ಆಜ್ಞೆಯ ಕಾರಣದಿಂದ ಅನ್ಸಾರ್ ನನಗಂತೂ ಒಳ್ಳೆಯ ಕಾಯಿಸಿದ ರೊಟ್ಟಿ ಕೊಡುತ್ತಿದ್ದರು. ಆದರೆ ಸ್ವಯಂ ಖರ್ಜೂರ ಇತ್ಯಾದಿ ತಿಂದು ಜಿವನ ಕಳೆಯುತ್ತಿದ್ದರು. ಅಷ್ಟೆ ಎಷ್ಟೋ ದಿನ ಅವರ ಬಳಿ ರೊಟ್ಟಿಯ ಒಂದು ಸಣ್ಣ ತುಂಡು ಇದ್ದರೂ ಅದು ನನಗೆ ಕೊಡುತ್ತಿದ್ದರು. ಅವರು ಖುದ್ದು ತಿನ್ನುತ್ತಿರಲಿಲ್ಲ ಎಂದಾದರೂ ನಾನು ನಾಚಿಕೆಪಟ್ಟು ಅವರಿಗೆ ಮರಳಿಕೊಟ್ಟರೂ ಅವರು ನನಗೆಯೇ ವಾಪಾಸ್ಸು ಕೊಡುತ್ತಿದ್ದರು. (ಸೀರತ್ ಖಾತಮನ್ನಬಿಯೀನ್, ಪುಟ–365)

"ಅವರು (ಸ) ಖೈದಿಗಳ ಸುಖ ಸಂತೋಷಕ್ಕಾಗಿ ಎಂತಹ ತಾಕೀತು ಮಾಡಿ ಆಜ್ಞೆ ನೀಡಿತ್ತೆಂದರೆ, ಅದರಿಂದ ಪ್ರಭಾವಿತರಾಗಿ ಸಹಾಬರು ತನ್ನ ಅಂಗಿಗಳನ್ನು ತೆಗೆದು ತನ್ನ ರಕ್ತದಾಹಿಯಾದ ಖೈದಿಗಳಿಗೆ ನೀಡಿದರು. ಸ್ವಯಂ ಒಣ ಖರ್ಜೂರುಗಳ ಮೇಲೆ ದಿನ ಕಳೆಯುತ್ತಿದ್ದರು. ಆದರೆ ಅವರಿಗೆ ಮಾತ್ರ ಅಡಿಗೆ ಮಾಡಿದ ಊಟ ನೀಡುತ್ತಿದ್ದರು. ಲೋಕದಲ್ಲಿ ಯಾವುದೇ ಸಮುದಾಯದಲ್ಲಿ ಯಾವುದೇ ಕಾಲಘಟ್ಟದಲ್ಲಿ ಇಂತಹ ಉದಾಹರಣೆಗಳು ದೊರೆಯಲು ಸಾಧ್ಯವೇ? (ಸೀರತ್ ಖಾತಮನ್ನಬಿಯೀನ್, ಪುಟ–411)

ಪ್ರೀತಿ ಗೌರವದ ಕೆಲವು ವಿಚಿತ್ರವಾದ ಘಟನೆಗಳನ್ನು ಅವಲೋಕಿಸಿರಿ

ಹಝ್ರತ್ ಅಸೀದ್ ಬಿನ್ ಹುಝೈರ್ ಅನ್ಸಾರಿ(ರ) ಅವರ ಬಗ್ಗೆ ವರದಿ ಇದೆ. ಅವರು ತುಂಬಾ ಹಾಸ್ಯ ಸ್ವಭಾವದವರಾಗಿದ್ದರು. ಒಂದು ದಿನ ಜನರೆಡೆ ಕುಳಿತುಕೊಂಡು ಹಾಸ್ಯದ ಮಾತುಗಳನ್ನು ಆಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಅವರ ಮಗ್ಗಲಿನಲ್ಲಿ (ಪ್ರೀತಿಯಿಂದ) ತನ್ನ ಬೆತ್ತವನ್ನು ಚುಚ್ಚಿದರು. ಆಗ ಅವರು ಹೇಳತೊಡಗಿದರು. ಹುಝೂರ್ ನನಗೆ ಸೇಡು ತೀರಿಸಿಕೊಳ್ಳಬೇಕಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು. ಬನ್ನಿ ಸೇಡು ತೀರಿಸಿಕೊಳ್ಳಿ. ಆಗ ಅವರು ಹೇಳಿದರು. ಹುಝೂರ್ ನೀವು ಅಂಗಿ ಹಾಕಿಕೊಂಡಿದ್ದೀರಿ. ನಾನು ಬೆತ್ತಲೆ ಶರೀರದಲ್ಲಿದ್ದೆ. ಆಗ ಹುಝೂರ್ ಸೇಡು ತೀರಿಸಿಕೊಳ್ಳಲು ತನ್ನ ಅಂಗಿ ಮೇಲೆಕೆತ್ತಿದ್ದರು. ಅಸೀದ್ ಬಿನ್ ಹುಝೈರ್(ರ) ಹುಝೂರರೊಡನೆ ಆಲಂಗಿಸಿಬಿಟ್ಟರು ಮತ್ತು ಪವಿತ್ರ ಶರೀರಕ್ಕೆ ಚುಂಬನದ ಮೇಲೆ ಚುಂಬನ ನೀಡತೊಡಗಿದರು. ಮತ್ತು ಹೇಳಿದರು. ಹುಝೂರ್ ನನ್ನದು ಇದೇ ಉದ್ದೇಶವಾಗಿತ್ತು. (ನಾನು ನಿಮ್ಮಿಂದ ಕಾರುಣ್ಯ ಪಡೆಯಲು ಮನಸ್ಸಿನಲ್ಲಿ ಈ ಉಪಾಯವನ್ನು ಯೋಚಿಸಿಕೊಂಡಿದ್ದೆ). (ಹದೀಖತುಸ್ಸಾಲಿಹೀನ್, ಹದೀಸ್ ಸಂಖ್ಯೆ–72, ಲೇಖಕರು– ಮಲಕ್‌ಸೈಫುರ್ ರಹ್ಮಾನ್ ಸಾಹಿಬ್)

ಇದರ ಜೊತೆಗೆ ಉಸೈದ್ ಬಿನ್ ಹುಝೈರ್ ಔಸ್ ಗೋತ್ರದ ಬನು ಅಬ್ದುಲ್ ಅಶ್ಹಲ್ ಅವರ ಕುಟುಂಬದಿಂದ ಬಂದವರು ಮತ್ತು ಅವರನ್ನು ಅತ್ಯುತ್ತಮ ಸಹಚರರಲ್ಲಿ ಪರಿಗಣಿಸಲಾಗಿದೆ ಎಂದು ಹೇಳಲಾಗಿದೆ. ಅವರ ತಂದೆ ಬುಆಸ್ ಯುದ್ಧದಲ್ಲಿ ಔಸ್ ಬುಡಕಟ್ಟಿನ ನಾಯಕರಾಗಿದ್ದರು. ಉಸೈದ್ ಅತ್ಯಂತ ನಿಷ್ಠರು ಮತ್ತು ಬುದ್ಧಿವಂತರಾಗಿದ್ದರು. ಹಝ್ರತ್ ಆಯಿಶಾ (ರ) ಹೇಳುತ್ತಿದ್ದರು. ಅನ್ಸಾರ್‌ಗಳ ಮೂವರು ವ್ಯಕ್ತಿಗಳು ಶ್ರೇಷ್ಠತೆಯಲ್ಲಿ ಮುಂದಿದ್ದರು ಎಂದರೆ ಉಸೈದ್ ಬಿನ್ ಹುಝುಯರ್, ಅಬ್ಬಾದ್ ಬಿನ್ ಬಶರ್, ಮತ್ತು ಸಅದ್ ಬಿನ್ ಮುಆಝ್, ಉಸೈದ್ ಅಗ್ರಗಣ್ಯ ಸಹಾಬಿಯರಲ್ಲಿ ಒಬ್ಬರಾಗಿದ್ದರು. ಅದರಲ್ಲಿ ಯಾವ ಸಂಶಯವೂ ಇಲ್ಲ. ಹಝ್ರತ್ ಅಬೂಬಕರ್(ರ) ಉಸೈದರಿಗೆ ತುಂಬಾ ಗೌರವದಿಮದ ಕಾಣುತ್ತಿದ್ದರು.

(ಸೀರತ್ ಖಾತಮನ್ನಬಿಯೀನ್, ಪುಟ–229)

ಅಲ್ಲಾಹನು ಸಹಾಬರ ಶ್ರೇಣಿಯನ್ನು ಉನ್ನತಕರಿಸಲಿ, ಅವರು ವಿಶ್ವಾಸದ ಹಕ್ಕನ್ನು ಪೂರೈಸಿದ್ದಾರೆ. ಅಲ್ಲಾಹನು ನಮಗೂ ಆ ಭಾಗ್ಯ ದಯಪಾಲಿಸಲಿ. ನಾವು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಬೈಅತ್ತಿನ ಹಕ್ಕನ್ನು ಪೂರೈಸುವವರಾಗಲಿ, ಆಮೀನ್

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 18ರ ಉಳಿದ ಭಾಗ)*

ಬಹುಮಾನ್ಯ ಶ್ರೋತೃಗಳೆ,

ಅಹ್ಮದಿಯೇತರ ಮುಸ್ಲಿಮ್ ಗಣ್ಯರ ಮಧ್ಯದಲ್ಲಿಯೂ ಹಝ್ರತ್ ಮೌಲಾನ ನೂರುದ್ದೀನ್ ರಝಿಯಲ್ಲಾಹು ಅನ್‌ಹುರವರಿಗೆ ವೈಭವಶಾಲಿ ಸ್ಥಾನವಿತ್ತು. ಮೌಲಾನ ಮುಹಮ್ಮದ್ ಅಲಿ ಜಾಹರ್, ನವಾಬ್ ವಖಾರುಲ್ ಮುಲ್ಕ್, ಮೌಲಾನ ಅಬುಲ್ ಕಲಾಮ್ ಆಝಾದ್, ಮೌಲವಿ ಝಫರ್ ಅಲಿ ಖಾನ್, ಅಲ್ಲಾಮ ಶಿಬ್ಲಿ ನುಅ್‌ಮಾನಿ, ಖ್ವಾಜಾ ಹಸನ್ ನಿಝಾಮಿ ಮೊದಲಾದ ಅನೇಕ ಮುಸ್ಲಿಮ್ ನೇತಾರರು ಅವರ ಉನ್ನತ ವೈಭವಶಾಲಿ ಸ್ಥಾನ ಮತ್ತು ಅವರ ಜ್ಞಾನ ವೈಭವದ ಬಗ್ಗೆ ಅರಿತುಕೊಂಡಿದ್ದರು. ಇಸ್ಲಾಮೀ ಪತ್ರಿಕೆಗಳಲ್ಲಿ ಧರ್ಮಕ್ಕೆ ಸಂಬಂಧಿಸಿದ ಅವರ ಅಭಿಪ್ರಾಯಗಳಿಗೆ ಬಹಳ ಗೌರವ ನೀಡುತ್ತಿದ್ದುವು. (ಅಲ್‌ಫಝ್ಲ್ ಪತ್ರಿಕೆ 1957 ಮಾರ್ಚ್ 27ಎ ಸಂಚಿಕೆ ನೋಡಿರಿ).

ಅಲಿಗಢ್ ಕಾಲೇಜಿನ ಸ್ಥಾಪಕ ಸರ್ ಸಯ್ಯದ್ ಅಹ್ಮದ್ ಖಾನ್ 1897 ಮಾರ್ಚ್ 8ರಂದು ಬರೆದ ಪತ್ರದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಪ್ರಶ್ನೆಗೆ ಹೀಗೆ ಉತ್ತರ ನೀಡಿದ್ದರು: ನೀವು ಬರೆದಿರುವಿರಿ ಅಜ್ಞಾನಿ ವಿದ್ಯಾಭ್ಯಾಸ ಕಲಿತು ಅಭಿವೃದ್ಧಿ ಗಳಿಸಿದರೆ ವಿದ್ಯಾಸಂಪನ್ನನೆಂದು ಕರೆಯಲ್ಪಡುತ್ತಾನೆ. ಅವನು ಇನ್ನಷ್ಟು ಅಭಿವೃದ್ಧಿ ಗಳಿಸಿದಾಗ ಫಿಲಾಸಫರ್ ಎಂದು ಕರೆಯಲ್ಪಡುತ್ತಾನೆ. ಅನಂತರ ಅಭಿವೃದ್ಧಿ ಗಳಿಸಿ ಸೂಫಿ ಆಗುತ್ತಾನೆ. ಸೂಫಿ ಅಭಿವೃದ್ಧಿ ಗಳಿಸಿದರೆ ಏನಾಗುತ್ತಾನೆ? ಇದಕ್ಕೆ ಉತ್ತರ ನನ್ನ ಅಭಿಪ್ರಾಯದ ಪ್ರಕಾರ ನೀಡುತ್ತೇನೆ. ಸೂಫಿಯು ಅಭಿವೃದ್ಧಿ ಗಳಿಸಿದಾಗ ಮೌಲಾನ ನೂರುದ್ದೀನ್ ಆಗುತ್ತಾನೆ.

ಹಝ್ರತ್ ಮೌಲಾನ ನೂರುದ್ದೀನ್ ರಝಿಯಲ್ಲಾಹು ಅನ್‌ಹು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಜ್ಞೆಯನ್ನು ತಕ್ಷಣ ಈಡೇರಿಸುತ್ತಿದ್ದರು. ಅದಕ್ಕೆ ಸಂಬಂಧಿಸಿ ಒಂದು ಉದಾಹರಣೆ ನಿಮ್ಮ ಮುಂದೆ ಇರಿಸುತ್ತೇನೆ: ಒಮ್ಮೆ ಅವರು ತನ್ನ ಚಿಕಿತ್ಸಾಲಯದಲ್ಲಿ ಕುಳಿತಿದ್ದರು. ಸುತ್ತುಮುತ್ತಲು ಜನರಿದ್ದರು. ಒಬ್ಬ ವ್ಯಕ್ತಿ ಬಂದು ಹೇಳಿದ: ಮೌಲವಿ ಸಾಹಿಬ್, ಹುಝೂರ್ ತಮ್ಮನ್ನು ನೆನಪಿಸುತ್ತಿದ್ದಾರೆ. ಈ ಮಾತನ್ನು ಆಲಿಸಿದ ಕೂಡಲೇ ಗಾಬರಿಯಿಂದ ಪಗಡಿ ಸರಿಪಡಿಸುತ್ತಾ ಪಾದರಕ್ಷೆಯನ್ನು ಸರಿಯಾಗಿ ಧರಿಸದೆ ಹೋಗಲು ತೊಡಗಿದರು. ಹುಝೂರರ ಆಜ್ಞೆ ಈಡೇರಿಸಲು ತಡವಾಗದಿರಲಿ ಎಂದು ಅವರು ಯೋಚಿಸುತ್ತಿದ್ದರು.

ಅವರು ಖಲೀಫರಾದಾಗ ಅನೇಕ ಸಾರಿ ಹೇಳುತ್ತಿದ್ದರು – ನೀವು ತಿಳಿದಿರುವಿರೇನು, ಇಲ್ಲಿ ನೂರುದ್ದೀನನ ಪ್ರೇಮಕ್ಕೆ ಪಾತ್ರನಾದ ಒಬ್ಬರಿದ್ದರು. ಅವರನ್ನು ಮಿರ್ಝಾ ಎಂದು ಕರೆಯುತ್ತಾರೆ. ನೂರುದ್ದೀನ್ ಅವರ ಹಿಂದೆ ಹೇಗೆ ತಿರುಗಾಡುತ್ತಿದ್ದನೆಂದರೆ ಅವನಿಗೆ ತನ್ನ ಪಗಡಿಯ ಬಗ್ಗೆಯಾಗಲೀ ಪಾದರಕ್ಷೆ ಬಗ್ಗೆಯಾಗಲೀ ಗಮನವಿರಲಿಲ್ಲ. (ಹಯಾತೆ ನೂರ್ ಪುಟ 187).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಪ್ರಿಯ ಶಿಷ್ಯರ ಬಗ್ಗೆ ಹೀಗೆ ಹೇಳುತ್ತಾರೆ: ಮೌಲವಿ ನೂರುದ್ದೀನ್ ಸಾಹಿಬ್ ತನ್ನ ನಿಷ್ಠೆ, ಪ್ರೀತಿ, ತ್ಯಾಗ ಗುಣ, ಅಲ್ಲಾಹನಿಗೋಸ್ಕರ ಶೌರ್ಯ ಪ್ರದರ್ಶನ, ದಾನಧರ್ಮ ಮತ್ತು ಇಸ್ಲಾಮ್ ಬಗ್ಗೆ ಸಹಾನುಭೂತಿಯಲ್ಲಿ ಅದ್ಭುತ ವೈಭವವನ್ನು ಹೊಂದಿದ್ದಾರೆ. ಬಹಳ ಸಂಪತ್ತು ಇರುವಾಗ ಸ್ವಲ್ಪ ಹಣ ಅಲ್ಲಾಹನ ಮಾರ್ಗದಲ್ಲಿ ಕೊಡುವವರನ್ನು ನಾನು ಕಂಡಿದ್ದೇನೆ. ಆದರೆ ತಾನು ಹಸಿವೆ ಮತ್ತು ದಾಹ ಅನುಭವಿಸಿ ತನಗೆ ಪ್ರಿಯವಾದ ಹಣವನ್ನು ಅಲ್ಲಾಹನ ತೃಪ್ತಿ ಗಳಿಸಲು ಎತ್ತಿಕೊಟ್ಟು ತನಗೋಸ್ಕರ ಲೋಕದಲ್ಲಿ ಏನನ್ನೂ ನಿರ್ಮಿಸದಿರುವ ಗುಣ ಪರಿಪೂರ್ಣ ರೂಪದಲ್ಲಿ ಮೌಲವಿ ಸಾಹಿಬರಲ್ಲಿ ಮಾತ್ರ ಕಂಡೆನು. ಅಥವಾ ಯಾರ ಹೃದಯಗಳಲ್ಲಿ ಅವರ ಸಹವಾಸದ ಪ್ರಭಾವ ಉಂಟಾಯಿತೋ ಅವರಲ್ಲಿ ಕಂಡೆನು.

ಇಂತಹ ಗುಣವನ್ನೂ ಧೈರ್ಯವನ್ನೂ ಹೊಂದಿದ ಜನರು ಈ ಸಮುದಾಯದಲ್ಲಿ ಹೆಚ್ಚು ಹೆಚ್ಚಾಗಿ ಆಗುವಂತೆ ಅಲ್ಲಾಹನು ಮಾಡಲಿ – ಆಮೀನ್ ಸುಮ್ಮ ಆಮೀನ್.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸ್ಥಳದಲ್ಲಿ ಹೇಳುತ್ತಾರೆ: ಚೆ ಖುಶ್ ಬೂದೆ ಅಗರ್ ಹರ್ ಎಕಝ್ ಉಮ್ಮತ್

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.04, Thursday, 27 July, 03 August 2023, Issue No. 30-31

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ನೂರ್‌ದೀನ್ ಬೂದೆ, ಹಮೇಂ ಬೂದೆ ಹರ್‌ದಿಲ್ ಪುರ್‌ಅಝ್ ನೂರೆ ಯಖೀನ್ ಬೂದೇ.

ಸಮುದಾಯದ ಪ್ರತಿಯೊಬ್ಬ ನೂರುದ್ದೀನ್ ಆಗಿದ್ದರೆ ಎಷ್ಟು ಚೆನ್ನಾಗಿತ್ತು. ಪ್ರತಿಯೊಂದು ಹೃದಯ ದೃಢವಿಶ್ವಾಸದ ಪ್ರಕಾಶದಿಂದ ತುಂಬಿಸಲ್ಪಡುವಾಗ ಮಾತ್ರ ಅದು ಸಾಧ್ಯವಾಗುವುದು. (ನಿಶಾನೆ ಆಸ್ಮಾನಿ, ರೂಹಾನಿ ಖಝಾಇನ್ ಸಂಪುಟ 4 ಪುಟ 410–411).

ಮಾನ್ಯ ಶ್ರೋತೃಗಳೇ,

ಹಝ್ರತ್ ಮೌಲಾನ ನೂರುದ್ದೀನ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನಲ್ಲಿಯೂ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿಯೂ ತಲ್ಲೀನರಾಗಿದ್ದರು. ಅವರಿಬ್ಬರೂ ಒಂದು ಉದ್ದೇಶ ಲಕ್ಷ್ಯವನ್ನು ಹುಡುಕುವುದರಲ್ಲಿ ನಿರತರಾಗಿದ್ದರು. ಅವರಿಬ್ಬರೂ ಇಸ್ಲಾಮ್ ಧರ್ಮದ ಪುನಶ್ಚೇತನದ ಅಭಿಲಾಷೆ ಹೃದಯದಲ್ಲಿ ಹೊಂದಿಕೊಂಡು ರಾತ್ರಿಗಳಲ್ಲಿ ಮಾಡುವ ಪ್ರಾರ್ಥನೆಗಳ ಮೂಲಕ ಅದ್ಭುತಗಳನ್ನು ನಿರೀಕ್ಷಿಸುತ್ತಾ ಇದ್ದರು. 1889 ಮಾರ್ಚ್ 23ರಂದು ಅದ್ಭುತವಾದ ಒಂದು ವಿದ್ಯಮಾನ ಬೀಜದ ರೂಪದಲ್ಲಿ ಪ್ರಕಟವಾಯಿತು. ಅನಂತರ ಅಲ್ಲಾಹನ ಕಾರುಣ್ಯದಲ್ಲಿ ಆಧ್ಯಾತ್ಮಿಕ ದಾಹವನ್ನು ಶಮನಿಸುತ್ತಾ ಬೆಳವಣಿಗೆ ಪಡೆಯುತ್ತಾ 1908 ಮೇ 27ರಂದು ದ್ವಿತೀಯ ದಿವ್ಯಶಕ್ತಿಯು ಪ್ರಕಟವಾಗುವ ಸಂದರ್ಭದಲ್ಲಿ ಎಂತಹ ಬೃಹತ್ ವೃಕ್ಷವಾಗಿ ಬೆಳೆಯಿತೆಂದರೆ ಅದರ ಹಚ್ಚಹಸುರಾದ ಕೊಂಬೆಗಳಲ್ಲಿ ಸಾವಿರಗಟ್ಟಲೆ ಆಧ್ಯಾತ್ಮಿಕ ಪಕ್ಷಿಗಳು ಭಯದಿಂದ ದೂರಸರಿಸಲ್ಪಟ್ಟು ಶಾಂತಿಯನ್ನು ಗಳಿಸಿದುವು. ಸಾವಿರಾರು ಸತ್ಯವಿಶ್ವಾಸಿಗಳು ಈ ವೃಕ್ಷದ ನೆರಳಿನಲ್ಲಿ ಜೀವಕ್ಕೆ ಸಾಂತ್ವನವನ್ನೂ ಶಾಶ್ವತ ಕಾರುಣ್ಯವನ್ನೂ ಗಳಿಸುತ್ತಾ ಇದ್ದಾರೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಖಲೀಫರಾಗಿ ಅಧಿಕಾರ ವಹಿಸಿಕೊಂಡಾಗ ಜಮಾಅತ್‌ಗೆ ಉಪದೇಶಿಸುತ್ತಾ ಹೀಗೆ ಹೇಳಿದರು: ಕೊನೆಯದಾಗಿ ಒಂದು ಮಾತು ಹೇಳುತ್ತೇನೆ, ನಿಮಗೆ ಉಪದೇಶಿಸುತ್ತೇನೆ ನೀವು ಅಲ್ಲಾಹನ ಪಾಶವನ್ನು (ಖಿಲಾಫತನ್ನು) ಬಿಗಿಯಾಗಿ ಹಿಡಿದುಕೊಳ್ಳಿರಿ. ಪವಿತ್ರ ಖುರ್‌ಆನ್ ನಿಮ್ಮ ಜೀವಿತದ ಕಾರ್ಯವಿಧಾನವಾಗಲಿ. ನಿಮ್ಮ ಮಧ್ಯೆ ಯಾವುದೇ ಜಗಳವಿಲ್ಲದಿರಲಿ. ಏಕೆಂದರೆ ಜಗಳ ಅಲ್ಲಾಹನ ಅನುಗ್ರಹವನ್ನು ತಡೆಯುತ್ತದೆ. ಹಝ್ರತ್ ಮೂಸಾ ಅಲೈಹಿಸ್ಸಲಾಮರ ಕೋಮು ಈ ನ್ಯೂನತೆಯ ಕಾರಣ ಕಾಡು ಪ್ರದೇಶದಲ್ಲಿ ನಾಶವಾಯಿತು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯ ಜಾಗರೂಕತೆ ವಹಿಸಿದುದರಿಂದ ಜಯಶಾಲಿ ಆಯಿತು. ಈಗ ಮೂರನೆಯದಾಗಿ ನಿಮ್ಮ ಸರದಿ ಬಂದಿದೆ. ಆದುದರಿಂದ ನಿಮ್ಮ ಸ್ಥಿತಿ ನಿಮ್ಮ ಇಮಾಮರ ಕೈಯಲ್ಲಿ ಹೇಗಿರಬೇಕೆಂದರೆ ಮೃತ ಶರೀರಕ್ಕೆ ಸ್ನಾನ ಮಾಡಿಸುವವನ ಕೈಯಲ್ಲಿ ಮೃತ ಶರೀರವಿರುವ ಹಾಗೆ. ನಿಮ್ಮ ಇರಾದೆಗಳೂ ನಿಮ್ಮ ಆಶೆಗಳು ಮೃತವಾಗಲಿ. ನೀವು ನಿಮ್ಮ ಇಮಾಮರ ಜೊತೆ ಹೇಗೆ ಜೋಡಿಸಬೇಕೆಂದರೆ ರೈಲು ಬಂಡಿಯ ಬೋಗಿಗಳು ಇಂಜಿನ್‌ನೊಂದಿಗೆ ಜೋಡಿಸಿರುವ ಹಾಗೆ. ಅನಂತರ ಪ್ರತಿದಿನ ನೀವು ನೋಡಿರಿ. ನೀವು ಅಂಧಕಾರದಿಂದ ಹೊರಗೆ ಬರುತ್ತಿರುವಿರೋ ಇಲ್ಲವೋ ಎಂದು.

ಇಸ್ತಿಗ್‌ಫಾರ್ ಬಹಳ ಸಾರಿ ಮಾಡಿರಿ. ಪ್ರಾರ್ಥಿಸುತ್ತಾ ಇರಬೇಕು. ಐಕ್ಯತೆಯನ್ನು ಕೈ ಬಿಡಬೇಡರಿ. ಅನ್ಯರೊಂದಿಗೆ ಒಳಿತಿನೊಂದಿಗೆ ವರ್ತಿಸುವುದರಲ್ಲಿ ಚೆನ್ನಾಗಿ ವ್ಯವಹಾರ ಮಾಡುವುದರಲ್ಲಿ ಕೊರತೆಯನ್ನುಂಟುಮಾಡಬೇಡಿರಿ. ಹದಿಮೂರು ನೂರು ವರ್ಷಗಳ ನಂತರ ಇಂತಹ ಕಾಲ ಬಂದಿದೆ. ಇಂತಹ ಕಾಲ ಖಿಯಾಮತ್ ತನಕ ಬರಲಾರದು. ಈ ವರದಾನದ ಬಗ್ಗೆ ಕೃತಜ್ಞತೆ ಅರ್ಪಿಸಿರಿ. ಏಕೆಂದರೆ ಕೃತಜ್ಞತೆ ಅರ್ಪಿಸುವವರಿಗೆ ಹೆಚ್ಚು ವರದಾನಗಳು ಲಭಿಸುತ್ತವೆ. (ಖುತ್‌ಬಾತೆ ನೂರ್ ಪುಟ 131).

ಮಾನ್ಯ ಶ್ರೋತೃಗಳೇ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹುರವರು ಮಾಡಿದ ಎಲ್ಲದಕ್ಕಿಂತ ಮಹತ್ವಪೂರ್ಣವಾದ ಕೆಲಸ ಅವರು ಖಿಲಾಫತ್ ವ್ಯವಸ್ಥೆಯನ್ನು ಬಲಿಷ್ಠವಾಗಿ ಸ್ಥಾಪಿಸಿದುದಾಗಿದೆ. ಖಿಲಾಫತ್ತಿನ ಆವಶ್ಯಕತೆ ಮತ್ತು ಮಹತ್ವದ ಬಗ್ಗೆ ಪದೇ ಪದೇ ಜಮಾಅತಿನ ಮುಂದೆ ಪ್ರಸ್ತಾಪಿಸಿ ಈ ವಿಶ್ವಾಸವನ್ನು ಜಮಾಅತಿನಲ್ಲಿ ಬೇರೂರುವಂತೆ ಮಾಡಿದರು. ಖಲೀಫರನ್ನಾಗಿ ಮಾಡುವುದು ಅಲ್ಲಾಹನೇ ಎಂಬ ವಿಶ್ವಾಸವನ್ನು ಮನುಷ್ಯನ ಯೋಜನೆಗಳಿಂದ ಯಾವುದೇ ವ್ಯಕ್ತಿ ಖಲೀಫನಾಗಲಾರ.

ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ಖಿಲಾಫತ್ ಎಂಬ ದೈವಿಕ ವ್ಯವಸ್ಥೆಯನ್ನು ಅಳಿಸಿ ಬಿಡಲು ಖಿಲಾಫತ್ ವಿರೋಧಿಗಳು ಮಾಡಿದ ಕುತಂತ್ರಗಳು ಮತ್ತು ಜನರನ್ನು ವಂಚಿಸಿ ತಮ್ಮ ಅಭಿಪ್ರಾಯದೊಂದಿಗೆ ಸಹಮತವನ್ನು ಪ್ರಕಟಿಸುವಂತೆ ಮಾಡಿದ ಪ್ರಯತ್ನಗಳನ್ನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ನಿಷ್ಫಲಗೊಳಿಸಿದರು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ನಡೆಸಲಾದ ವೈಭವಶಾಲಿ ಕೆಲಸಗಳು ಅಹ್ಮದಿಯಾ ಜಮಾಅತಿನ ಆಧ್ಯಾತ್ಮಿಕ ಮತ್ತು ಲೌಕಿಕ ಪ್ರಗತಿಗೆ ಮುನ್ನುಡಿಯಾಯಿತು. ಅವುಗಳಲ್ಲಿ ಕೆಲವು ಇವುಗಳಾಗಿವೆ. ಮದ್‌ರಸ ತಅ್‌ಲೀಮುಲ್ ಇಸ್ಲಾಮ್ ಮತ್ತು ಬೋರ್ಡಿಂಗ್ ಹೌಸ್‌ಗಳ ಭವ್ಯ ಕಟ್ಟಡಗಳು ನಿರ್ಮಿಸಲ್ಪಟ್ಟವು. ಮಸ್‌ಜಿದ್ ನೂರ್ ನಿರ್ಮಿಸಲಾಯಿತು. ಮದರಸ ಅಹ್ಮದಿಯಾ ಸ್ಥಾಪಿಸಲಾಯಿತು. ಪತ್ರಿಕೆಗಳಾದ ನೂರ್ ಮತ್ತು ಅಲ್ ಫಝ್ಲ್‌ಗಳ ಪ್ರಕಟಣೆ ಪ್ರಾರಂಭವಾಯಿತು. ಇಸ್ಲಾಮ್ ಧರ್ಮ ಪ್ರಚಾರಕ್ಕೋಸ್ಕರ ವಾಯಿಝ್‌ಗಳನ್ನು ಹಿಂದೂಸ್ಥಾನದ ವಿವಿಧ ಪ್ರದೇಶಗಳಲ್ಲಿ ಸಂಚಾರ ಮಾಡಿದರು. ಲಂಡನ್‌ನಲ್ಲಿ ಇಸ್ಲಾಮೀ ಮಿಶನ್ ಸ್ಥಾಪಿತವಾಯಿತು. ಧರ್ಮ ಪ್ರಚಾರಕ್ಕೋಸ್ಕರ ಖ್ವಾಜಾ ಕಮಾಲುದ್ದೀನ್ ಸಾಹಿಬ್ ಮತ್ತು ಚೌಧರಿ ಫತ್‌ಹ್ ಮುಹಮ್ಮದ್ ಸಯ್ಯಾಲ್ ಸಾಹಿಬ್ ಲಂಡನಿಗೆ ಹೋದರು.

ಇಂತಹ ಅನೇಕ ಅಭಿವೃದ್ಧಿದಾಯಕ ಕೆಲಸಗಳು ಖಿಲಾಫತ್ ಅವ್ವಲ್ ಕಾಲದಲ್ಲಿ ನಡೆದುವು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ತನ್ನ ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ದರ್ಸ್ ನೀಡುವುದರಲ್ಲಿ ಮಗ್ನರಾಗಿದ್ದರು. ಅದರೊಂದಿಗೆ ಖಿಲಾಫತ್ ಬಗ್ಗೆ ತಮ್ಮ ಭಾಷಣಗಳಲ್ಲೂ ಶುಕ್ರವಾರದ ಖುತ್‌ಬಗಳಲ್ಲೂ ಸ್ಪಷ್ಟವಾಗಿ ವಿವರಣೆ ನೀಡುತ್ತಾ ಇದ್ದರು. ಅದರ ಪರಿಣಾಮವಾಗಿ ಅಹ್ಮದಿಯಾ ಜಮಾಅತಿನ ಬಹುತೇಕ ಜನರು ಖಿಲಾಫತ್ ಎಂಬ ಹಬ್‌ಲುಲ್ಲಾಹನ್ನು (ಅಲ್ಲಾಹನ ಪಾಶವನ್ನು) ಬಲಿಷ್ಠವಾಗಿ ಹಿಡಿದುಕೊಂಡರು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು 1914 ಮಾರ್ಚ್ ದಿನಾಂಕ 13 ಶುಕ್ರವಾರ ನಿಧನ ಹೊಂದಿದರು ಮತ್ತು ತಮ್ಮ ನೈಜ ಯಜಮಾನನ ಬಳಿಗೆ ಮರಳಿದರು. ಖಾದಿಯಾನಿನ ಬಿಹಿಶ್ತಿ ಮಖ್‌ಬರದಲ್ಲಿ ತಮ್ಮ ಪ್ರಿಯ ಯಜಮಾನರ ಗೋರಿಯ ಪಾರ್ಶ್ವದ ಗೋರಿಯಲ್ಲಿ ದಫನ್‌ಗೊಳಿಸಲ್ಪಟ್ಟರು. ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್. **(ತಾರೀಖೆ ಅಹ್ಮದಿಯ್ಯತ್ ಸಂಪುಟ 3 ಪುಟ 511).**

***************

***128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಂಯೊಂದು ವಿಷಯುದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.